ಶ್ರೀ ಕೋಣಂದೂರು ಲಿಂಗಪ್ಪ.—ತೈಂಗೇರಿ ತಾಲ್ಲೂಕಿನ ಕೊಪ್ಪದಲ್ಲಿ ನಮ್ಮ ಪಕ್ಷದ ತರುಣ ಮುಖಂಡರು ಮತ್ತು ಕಾರ್ಯಕರ್ತರಾದಂಥ ಶ್ರೀಮಾನ್ ಬಿ. ಬಿ. ಚಂದ್ರಶೇಖರಯ್ಯನವರ ಮೇಲೆ ಅಲ್ಲಿಯ ಸಬ್-ಇನ್ಸ್‌ಪೆಕ್ಟರ್ ಅವರು ಹಲ್ಲೆ ಮಾಡಿದ್ದಾರೆ. ನಮ್ಮ ಪಕ್ಷದ ಕಾರ್ಯಕರ್ತರಿಗೆ ರಕ್ಷಣೆ ಇಲ್ಲವಾಗಿದೆ.

ಅಧ್ಯಕ್ಷರು.—ಎಲ್ಲವನ್ನೂ ಈಗಲೇ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರು ಈ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಹಲವಾರು ವಿಷಯಗಳ ಬಗ್ಗೆ ನೋಟೀಸ್ ಕೊಟ್ಟು ಒಂದು ವಾರವಾಯಿತು. ಅವುಗಳಿಗೆ ಉತ್ತರ ಕೊಡಲು ಸರ್ಕಾರಕ್ಕೆ ಸಮಯಬೇಕು ನಿಜ. ಸಂಬಂಧಪಟ್ಟ ವರ್ತಮಾನಗಳನ್ನು ತರಿಸಿಕೊಂಡು ಚರ್ಚೆ ಮಾಡಬೇಕಾಗುತ್ತದೆ. ಮತ್ತು ಸರ್ಕಾರದವರು ಏನು ವರವಿಯನ್ನು ಸಭೆಗೆ ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ. ಮುಖ್ಯವಾಗಿ ನಾನು ಕಳಿಸಿದಂಥ ವಿಷಯಗಳಿಗೆ ಯಾವಾಗ ಅವಕಾಶ ಸಿಗುತ್ತದೆ ಎಂಬುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು.—ನಾಳೆ ದಸರಾ ವಿಷಯದ ಬಗ್ಗೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕಳೆದ ಸಾರಿ ಈ ಸಭೆಯನ್ನು ಮುಂದೂಡುವುದಕ್ಕೆ ಒಂದೆರಡು ಗಂಟೆಗಳ ಸಮಯ ಇದೆ ಎಂದು ಇರುವಾಗ ಈ ಸಚಿವ ಸಂಪುಟದ ಒಬ್ಬರು ಸಚಿವರು ಈ ಸಭೆಯಲ್ಲಿ ಮಾತನಾಡುತ್ತಾ ನಾನು ನನ್ನ ಶಕ್ತಿಯ ಮೇಲೆ ಮಂತ್ರಿಯಾಗಿದ್ದೇನೆಂದು ಹೇಳಿದ್ದರು. ಇಲ್ಲಿ ನಭಾ ನಾಯಕರು ಇದ್ದಾರೆ. ಅದೇ ದಿನ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಸಭೆಯಲ್ಲಿ ಇರಲಿಲ್ಲ. ನನ್ನ ಶಕ್ತಿಯ ಮೇಲೆ ಮಂತ್ರಿಯಾಗಿದ್ದೇನೆಂದು ಅವರು ಹೇಳಬೇಕಾದರೆ ಮುಖ್ಯ ಮಂತ್ರಿಗಳ ಅಧಿಕಾರ ಎಷ್ಟರಮಟ್ಟಿಗೆ ಇದೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಮುಖ್ಯಮಂತ್ರಿಗಳಿಗೆ ಮಂತ್ರಿಗಳನ್ನು ನೇಮಕ ಮಾಡಿಕೊಳ್ಳುವ ಅಧಿಕಾರವಿರುತ್ತದೆ. ಅಂದಮೇಲೆ ಅವರು ಆ ರೀತಿ ಹೇಳಿದ್ದು ಸರಿಯೇ ಎಂಬ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ರೂಲ್ 312 ರ ಪ್ರಕಾರ ಇದರ ಬಗ್ಗೆ ನಾನು ಒಂದು ನೋಟೀಸನ್ನು ಸಹ ತಮಗೆ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಎಲ್ಲವೂ ಒಂದೊಂದಾಗಿ ಬರುತ್ತವೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮುಖ್ಯಮಂತ್ರಿಗಳು ಸಭೆಯಲ್ಲಿರುವುದರಿಂದ ಆ ಬಗ್ಗೆ ಹೇಳಿಕೆ ಕೊಡಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರು ಯಾವಾಗ ತೆಗೆದುಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾರೋ ಆಗ ನಾನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

MYSORE LAND REFORMS (AMENDMENT) BILL, 1972

Motion to Consider

(Debate Contd.)

ಶ್ರೀ ಎಚ್. ಡಿ. ದೇವೇಗೌಡ.—ಭೂಸುಧಾರಣಾ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಕ್ಲಾರಿಫಿಕೇಷನ್ ನಮಗೆ ಬೇಕು. ಈ ಮೊದಲು ಈ ವಿಧೇಯಕವನ್ನು ಈ ಸಭೆಯು ಮುಂದೆ ಇಟ್ಟಾಗ, ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವ ವಿಚಾರವಿತ್ತು. ಆ ಕಮಿಟಿಯವರು ಈ ಮಸೂದೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದ ನಂತರ ಪುನಃ ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳುವ ಸಂಭವವಿದೆಯೇ ಅಥವಾ ಈ ಸಭೆಯಲ್ಲಿಯೇ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳು

ವುದಿದೆಯೇ ಎಂಬ ಬಗ್ಗೆ ದಯವಾಡಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಮತ್ತು ಈ ವಿಧೇಯಕ ಎಷ್ಟು ದಿವಸ ಚರ್ಚೆಯಾಗುತ್ತದೆ, ಅದಕ್ಕೆ ಕಾಲದ ಮಿತಿ ಏನಾದರು ಇದೆಯೇ ಎಂದು ಬಗ್ಗೆಯೂ ಸಹ ವಿವರಣೆ ಕೊಟ್ಟರೆ ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್.—ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂಬುದರ ಬಗ್ಗೆ ನಿಮ್ಮ ಒಪ್ಪಿಗೆಯೂ ಇದೆಯೇ?

ಶ್ರೀ ಎಚ್. ಡಿ. ದೇವೇಗೌಡ.—ಹೌದು.

ಶ್ರೀ ಡಿ. ದೇವರಾಜ ಅರಸ್.—ಹಾಗಿದ್ದರೆ ಇಂದು ಮತ್ತು ನಾಳೆ ಈ ವಿಧೇಯಕದ ಮೇಲೆ ಚರ್ಚೆ ನಡೆಯಲಿ. ಆ ಬಗ್ಗೆ ನಾನು ಒಂದೆರಡು ದಿವಸಗಳಲ್ಲಿ ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷಿಣಿಯವರೇ, ಈ ವಿಧೇಯಕವನ್ನು ನಾವು ಒಂದು ವಿಶೇಷವಾದಂಥ ವಾತಾವರಣದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಒಂದು ಕಡೆ ಭೂಸ್ವಾಮಿಗಳು ಅಂದರೆ ಭೂಮಾಲೀಕರು ಆರ್ಭಟ ಮಾಡುತ್ತಿದ್ದಾರೆ. ಅದರಲ್ಲೂ ಹಿಂದಿನ ಸರ್ಕಾರಗಳು ಹಾಕಿದಂಥ ಭೂಮಿಕೆಯ ಮೇಲೆ ಮತ್ತು ಇಂದಿನ ಸರ್ಕಾರದವರು ತರಬೇಕೆಂದಿರುವ ವಿಧೇಯಕದ ಬಗ್ಗೆ ಈ ಜಮೀನುದಾರರು ತಮ್ಮ ಸಪಾಲನ್ನು ಎಸೆಯುತ್ತಿದ್ದಾರೆ. ಆ ಒಂದು ನಪಾಲಿನಿಂದ ಪಾರಾಗುವಂತಹ ಶಕ್ತಿಯನ್ನು ಈ ಸರ್ಕಾರ ಎಷ್ಟರಮಟ್ಟಿಗೆ ಸಂಪಾದನೆ ಮಾಡಿ ಕೊಂಡಿದೆ ಎಂಬುದನ್ನು ನಾವು ಒರೆ ಹಚ್ಚಿ ನೋಡಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಈ ಸದನದ ಒಳಗೂ ಸಹ ಕಂಡಿ ಕೊರೆಯುವಂತಹ ಕೆಲಸವನ್ನು ಮಾಡತಕ್ಕಂಥ ಜನರು ಇದ್ದಾರೆ. ಒಳಗೆ ಹೊರಗೆ ಎರಡೂ ಕಡೆಯಿಂದ ಕೂಡ ಒಂದು ವಿಶಿಷ್ಟವಾದ ಶ್ರೀಮಂತಶಾಹಿ ಜಮೀನುದಾರರು ಹೊಡೆದಾಡುತ್ತಿರುವ ಇಂತಹ ಒಂದು ಸಂದರ್ಭದಲ್ಲಿ ಈ ವಿಧೇಯಕವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ನಾನಾದರೂ ಸಂಪೂರ್ಣವಾಗಿ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ ಎಂದ ಮಾತ್ರಕ್ಕೆ ಇದು ಬಹಳ ಕ್ರಾಂತಿಕಾರಕವಾದ ಭೂಸುಧಾರಣೆ ಯೆಂದಾಗಲೀ ಅಥವಾ ಸರಕಾರ ಈ ಒಂದು ವಿಚಾರದಲ್ಲಿ ಪ್ರಗತಿದಾಯಕವಾದ ಮಾರ್ಗವನ್ನು ಅನುಸರಿಸುತ್ತಿದ್ದಾರೆ ಎಂದು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಸರಕಾರ ಈ ತಿದ್ದುಪಡಿ ವಿಧೇಯಕವನ್ನು ತರುವ ಒಂದು ಪ್ರಗತಿದಾಯಕವಾದ ಮಾರ್ಗದಲ್ಲಿ ಒಂದು ಚಿಕ್ಕ ಹೆಜ್ಜೆಯನ್ನು ಇಟ್ಟಿದೆ ಎನ್ನುವ ಮಾತನ್ನು ಇಲ್ಲಿ ಒಪ್ಪಬಹುದು. ಈ ವಿಧೇಯಕದಿಂದ ಸರಕಾರ ಕೆಲವು ವಿಚಾರಗಳನ್ನು ಬದಲಾವಣೆ ಮಾಡಿದೆ ಮಾತ್ರಕ್ಕೆ ಇದು ಕ್ರಾಂತಿಕಾರಕವಾಗಿದೆ ಎಂದು ಕರೆಯುವುದಕ್ಕೆ ಆಗುವುದಿಲ್ಲ. ಜಮೀನುದಾರರು ಶಾಹಿ ಲಕ್ಷಣಗಳುಳ್ಳ ಹಾಗೂ ಬಂಡವಾಳಶಾಹಿ ಲಕ್ಷಣಗಳುಳ್ಳ ಹಿಂದೆ ಇದ್ದ ಒಂದು ಮನೋವೈಯನ್ನು ಸ್ವಲ್ಪ ತಿದ್ದುಪಡಿ ಮಾಡಿ ಇಲ್ಲಿ ಪ್ರಗತಿದಾಯಕವಾದ ಮನೋವೈಯನ್ನು ತಂದು ಇಟ್ಟಿದ್ದೇವೆ ಎನ್ನುವ ಒಂದು ಕಾರಣಕ್ಕಾಗಿ ನಾವು ನಮ್ಮ ಅಭಿನಂದನೆಗಳನ್ನು ಸಲ್ಲಿಸಲೇ ಬೇಕು ಮತ್ತು ಈ ಕಾರಣಕ್ಕಾಗಿ ನಾವು ಸರಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಈ ವಿಧೇಯಕವನ್ನು ಬಹಳ ಜಾಗರೂಕತೆಯಿಂದ ಮತ್ತು ಮತ್ತು ಜಾಣ್ಮೆಯಿಂದ ಈ ಸದನದಲ್ಲಿ ಮಂಡಿಸಿದ್ದಾರೆ. ಒಂದು ಕಡೆ ನೋಡುವುದಕ್ಕೆ ಜಮೀನುದಾರರುಗಳಿಗೆ ಅನುಕೂಲವಾಗುವಂತೆ ಇನ್ನೊಂದು ಕಡೆ ಗೇಣಿದಾರರಿಗೆ ಭೂಮಿ ಕೊಡುತ್ತೇವೆಂದು ಹೇಳುತ್ತ ಜಮೀನುದಾರರಿಗೆ ರಕ್ಷಣೆ ಹಾಗೂ ಗೇಣಿದಾರರಿಗೂ ರಕ್ಷಣೆ ಕೊಡುವಂತೆ ಇಲ್ಲಿ ಭೂಮಿ ಹಂಚುವುದಕ್ಕೆ ಯತ್ನ ಮಾಡುತ್ತಿದ್ದಾರೆ. ಇಂತಹ ಒಂದು ವಿಧೇಯಕ ಈಗ ನಮ್ಮ ಮುಂದೆ ಬಂದಿದೆ. ಇದನ್ನು ಕ್ರಾಂತಿಕಾರಕವಾಗಿ ಹಾಗೂ ಪ್ರಗತಿದಾಯಕವಾಗಿ ತರುವುದಕ್ಕೆ ಸಾಧ್ಯವಾಯಿತು ಎಂದು ಹೇಳುತ್ತಿದ್ದಾರೆ. ಚುನಾವಣೆಯ ಕಾಲದಲ್ಲಿ ಜನ ಯಾವುದನ್ನು ನಿರೀಕ್ಷೆ ಮಾಡುತ್ತಿತ್ತೋ ಅದಕ್ಕಾಗಿ ಜನ ಅವರ ಬೆಂಬಲವನ್ನು ಕೊಟ್ಟು ಈ ದೇಶದ ಸರಕಾರ ನಡೆಸಲು ಅವಕಾಶ ಕೊಟ್ಟರೋ ಅಂತಹ ಜನರಿಂದ ಪಡೆದ ಬೆಂಬಲ ಪಡೆದ ಸರಕಾರ ಇಂದು ಈ ಮನೋವೈಯನ್ನು ತಂದಿದೆ. ಸರಕಾರ ಇಲ್ಲಿ ತಂದಿರುವ ವಿಧೇಯಕವನ್ನು ಪ್ರಗತಿದಾಯಕವಾದ ರೀತಿಯಲ್ಲಿ ಕ್ರಾಂತಿಕಾರಕವಾದ ಮಾರ್ಪಾಡುಗಳನ್ನು ಮಾಡುವುದಕ್ಕೆ ಸಾಧ್ಯವಿದ್ದರೂ ಅದನ್ನು ಮಾಡುವುದರಲ್ಲಿ ವಿಫಲರಾಗಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ವಿಧೇಯಕದಿಂದ ಅಂತಹ ಒಂದು ಮಹತ್ವಾಧನೆಯನ್ನೇನೂ ಮಾಡಲು ಹೊರಟಿಲ್ಲ. ಹಿಂದಿನ ಸರಕಾರ ಯಾವ ಒಂದು ಮನೋವೈ ತಂದಿತ್ತೋ ಅದಕ್ಕೆ ಸ್ವಲ್ಪ ಅಲ್ಲಿ ಇಲ್ಲಿ ಕೇಪೆ ಹಾಕಿ ಇಲ್ಲಿ ಒಂದು ತಿದ್ದುಪಡಿ ಮನೋವೈ ಎಂದು ಮಂಡಿಸಿದ್ದಾರೆ ಎನ್ನುವ ಮಾತನ್ನು ನಾವು ಖಂಡಿತ ಇಲ್ಲಿ ಹೇಳಬೇಕಾಗಿದೆ.

ಸ್ವಾಮೀ, ಈ ವಿಧೇಯಕದಲ್ಲಿ ಸ್ವಂತ ಸಾಗುವಳಿ ಎನ್ನುವುದಕ್ಕೆ ವ್ಯಾಖ್ಯಾನ ಹಿಂದಿನ ಭೂಸುಧಾರಣೆಯಲ್ಲಿ ಏನಿತ್ತೋ ಅದಕ್ಕೆ ನಾನಕಷ್ಟು ವಿವರವಾದ ವ್ಯಾಖ್ಯಾನ ಮಾಡಿದೆ ಹಿಂದೆ ಏನು ಇತ್ತೊ ಅದನ್ನೇ ಇದರಲ್ಲೂ ಸ್ವಲ್ಪ ಬದಲು ಮಾಡಿ ಹೇಳಿದ್ದಾರೆ. ಹಿಂದೆ ಏನು ಸ್ವಂತ ಸಾಗುವಳಿ

(ಶ್ರೀ ಕಾಗೋಡು ತಿಮ್ಮಪ್ಪ)

ಗಾಗಿ ಎಂದು ಭೂಮಿ ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದರೋ ಅದು ಮೂಲಭೂತವಾಗಿ ತಪ್ಪು ಎಂದು ಹೇಳುತ್ತೇವೆ. ಈಗ ಸರಕಾರವಿದನ್ನು ಬದಲಾವಣೆ ಮಾಡಿ ಹತ್ತು ಮೈಲಿ ದೂರದಲ್ಲಿರಬೇಕು ಮತ್ತು 12 ಸಾವಿರ ರೂಪಾಯಿಗಳ ವರಮಾನ ಮಿತಿ ಇರುವವರಿಗೆ ಹಾಗೂ ಬೇರೆ ಉದ್ಯೋಗ ಇರುವವರಿಗೆ ಭೂಮಿ ಇಟ್ಟುಕೊಳ್ಳಲು ಅವಕಾಶವಿಲ್ಲ ಎನ್ನುವ ಪ್ರಾವಧಾನವನ್ನು ಇಲ್ಲಿ ತಂದಿದ್ದಾರೆ. ನಾವು ಈ ವಿಷಯದಲ್ಲಿ ಕೇಳುವುದು ಇಷ್ಟೇ. ಭೂಮಿಯನ್ನು ಉಳದೇ ಇರತಕ್ಕ ಹೇಡಿಗಳ ಕೈಯಲ್ಲೇಕೆ ಭೂಮಿಯನ್ನು ಉಳಿಸಲು ಪ್ರಯತ್ನ ಮಾಡುತ್ತೀರಿ ಎಂದು. ಒಂದು ದಿವಸವಾದರೂ ನೇಗಿಲನ್ನು ಹಿಡಿದು ಉಳುವಂತಹ ಹೇಡಿಗಳ ಕೈಯ್ಯಲ್ಲಿ ಭೂಮಿ ಉಳಿಸಿ ಅದನ್ನೂ ಸ್ವಂತ ಸಾಗುವಳಿಗಾಗಿ ಕೊಡಬಹುದು ಎಂದು ವ್ಯಾಖ್ಯಾನ ಮಾಡಿದ್ದಾರೆ. ಇಂತಹವರ ಕೈಯ್ಯಲ್ಲಿ ಭೂಮಿ ಕೊಟ್ಟರೆ ಇದು ಯಾವ ರೀತಿ ಆಗುತ್ತದೆ ಅವರು ಸೂಪರ್‌ವೈಸ್ ಮಾಡಿಕೊಂಡು ಒಬ್ಬ ಆಳನ್ನು ಇಟ್ಟುಕೊಂಡು ವ್ಯವಸಾಯ ಮಾಡಲು ಮತ್ತೆ ಅವಕಾಶ ಕೊಟ್ಟಂತಾಗುತ್ತದೆ. ಕಳೆದ 25 ವರ್ಷಗಳಿಂದಲೂ ಸರಕಾರ ಸ್ವಂತ ಸಾಗುವಳಿ ಮಾಡಲು ಹಿಂದೆ ಇದ್ದ ಭೂಸುಧಾರಣೆಯಲ್ಲಿ ಅವಕಾಶ ಮಾಡಿಕೊಟ್ಟಿತ್ತು. ಅದರಂತೆ 40-50 ಎಕರೆಗಳಷ್ಟು ಭೂಮಿ ಇಟ್ಟುಕೊಂಡಿದ್ದ ಭೂಪಾಲೀಕರು ಟ್ರಾಕ್ಟರುಗಳನ್ನು ಆಳನ್ನು ಇಟ್ಟುಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು. ಇಂತಹ ಭೂ ಮಾಲಿಕರುಗಳಿಗೆ ಬ್ಯಾಂಕುಗಳಿಂದ ಹಾಗೂ ಸೊಸೈಟಿಗಳ ಮೂಲಕ ಬೇಕಾದಷ್ಟು ಸಾಲ ಸಿಗುತ್ತಿದ್ದವು, ಇದರ ಸಾಲವನ್ನು ಉಪಯೋಗಿಸಿಕೊಂಡು ಅವರ ಭೂಮಿಯನ್ನು ಗೇಣಿಗೆ ಕೊಟ್ಟು ಅನುಭವಿಸಿಕೊಂಡು ಬರುತ್ತಿದ್ದರು. ಒಂದು ದಿವಸವಾದರೂ ಭೂಮಿಯ ಮೇಲೆ ಇವರು ಉಳುತ್ತಿರಲಿಲ್ಲ, ಈ ರೀತಿ ಕಾಗಿ ಸ್ವಂತ ಸಾಗುವಳಿ ಮಾಡಲು ಅವಕಾಶ ಕೊಟ್ಟಿದ್ದರು. ಈಗ ಹೊಸದಾಗಿ ಇದರ ಬಗ್ಗೆ ವ್ಯಾಖ್ಯಾನ ಮಾಡಿ ಇಂದು ಉಳುವವರ ಕೈಯ್ಯಲ್ಲೇ ಭೂಮಿ ಕೊಟ್ಟು ಉತ್ಪಾದನೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಿರುವುದು ಖಂಡಿತ ಸುಳ್ಳು ಎಂದು ಹೇಳಬೇಕಾಗಿದೆ. ಆದರಿಂದ ನಾನು ಸರಕಾರಕ್ಕೆ ಹೇಳುವುದು ಹಿಂದೆ ಸ್ವಂತ ಸಾಗುವಳಿಗಾಗಿ ಏನು ಒಂದು ವ್ಯಾಖ್ಯಾನ ಇಟ್ಟಿದ್ದರೋ ಅದನ್ನು ಬದಲಾವಣೆ ಮಾಡಿ ಅಂತಹ ಒಂದು ತಿದ್ದುಪಡಿಯನ್ನು ಇಲ್ಲಿ ಮಾಡಬೇಕಾಗಿದೆ. ಹಿಂದೆ ಇದ್ದ ಕಾನೂನಿನಲ್ಲಿ ಎಂದರೆ ಸೆಕ್ಷನ್ ಎರಡು ಮತ್ತು ಕ್ಲಾಸು ಹನ್ನೊಂದರಲ್ಲಿ ಖಟಿಂಸ್ (1) ಮತ್ತು (2) ಇವುಗಳಲ್ಲಿ ಏನು ವಿಧಿಯಮಗಳನ್ನು ಮಾಡಿದ್ದಾರೆ ಅದರಂತೆ ಸ್ವಂತ ಸಾಗುವಳಿ ಮಾಡುವವರ ಹೆಸರು ಪಹಣಿ ಚಕ್ಕದಲ್ಲಿರುತ್ತದೆ, ಅದರಂತೆ ಅವರು ಒಬ್ಬರು ಆಳುಗಳ ಮೂಲಕ ತಮ್ಮ ಭೂಮಿಯನ್ನು ಉಳಲು ಕೊಟ್ಟು ಅದರಿಂದ ಸಂಪಾದನೆ ಮಾಡುತ್ತಾರೆ. ಯಾರು ಬೇಕಾದರೂ ಇದರಂತೆ ಭೂಮಿ ಇಟ್ಟುಕೊಂಡು ಇರಬಹುದಾಗಿತ್ತು. ಹಿಂದೆ ಇದ್ದ ಕಾನೂನಿನಲ್ಲಿ ಸ್ವಂತ ಸಾಗುವಳಿಗಾಗಿ ಇಂತಹ ವ್ಯಾಖ್ಯಾನ ಇಟ್ಟಿದ್ದುದು ಸರ್ವಥಾ ತಪ್ಪು ಎಂದು ಹೇಳಬೇಕಾಗಿದೆ. ಇಲ್ಲೇ ಸರಕಾರ ಎಡವಿರುವುದು ಎಂದು ಹೇಳುತ್ತೇನೆ. ಈ ರೀತಿ ವ್ಯಾಖ್ಯಾನ ಮಾಡುತ್ತಿರುವುದರಿಂದ ಬೇರೆ ಒಂದು ಉದ್ಯೋಗ ಮಾಡಿಕೊಂಡಿರುವವರು ಕೂಡ ಭೂಮಿ ಮೇಲೆ ಉಳದೇ ಇದ್ದರೂ ಅವರು ಭೂಮಿ ಇಟ್ಟುಕೊಂಡು ಹೋಗಲು ಅವಕಾಶ ಇತ್ತು. ಯಾರಾದರೂ ಬೇರೆ ಊರಿನಲ್ಲಿದ್ದರೂ ಅವರು ಸೂಪರ್‌ವೈಸು ಮಾಡಿಕೊಂಡು ಭೂಮಿಯನ್ನೂ ಇಟ್ಟುಕೊಂಡು ಇರುವಂತಹ ಪರಿಸ್ಥಿತಿ ಕಳೆದ 25 ವರ್ಷಗಳಿಂದಲೂ ಬರುತ್ತಿದೆ. ಇದನ್ನು ಈಗಲಾದರೂ ತೆಗೆದು ಹಾಕಿ ಸ್ವಂತ ಸಾಗುವಳಿ ಎಂದರೆ ಇದಕ್ಕೆ ಸರಿಯಾದ ಒಂದು ವ್ಯಾಖ್ಯಾನ ಮಾಡಿ ಹೊಸದಾಗಿ ತರುವುದು ಸೂಕ್ತವಾಗಿರುತ್ತದೆ ಎಂದು ತಮ್ಮ ಮೂಲಕ ನಾನು ಹೇಳುತ್ತೇನೆ.ಯಾರು ಸ್ವತಃ ಭೂಮಿಯ ಮೇಲೆ ಇದ್ದು ವ್ಯವಸಾಯ ಮಾಡಲು ನೇಗಿಲು ಹಿಡಿಯುತ್ತಾರೋ ಅಂತಹವರಿಗೆ ಮಾತ್ರ ಭೂಮಿ ಉಳಿಯಬೇಕು. ಇತರರಿಗೆ ಸ್ವಂತವಾಗಿ ಭೂಮಿಯನ್ನು ವ್ಯವಸಾಯ ಮಾಡಲು ಅವಕಾಶ ಕೊಡಬಾರದು, ಈ ದೃಷ್ಟಿಯಿಂದ ಈ ವಿಧೇಯಕದಲ್ಲಿ ನಾವು ನೋಡಿದರೆ ಈಗ ಮಾಡಿರತಕ್ಕದ್ದು ಹತ್ತು ಮೈಲಿ ಘಾನರೆಯೊಳಗೆ ಭೂಮಿ ಉಳುವವರು ಇರಬೇಕೆಂದು ಮಾಡಿರುವುದು ಮತ್ತು ಬೇರೆ ಉದ್ಯೋಗದಿಂದ ಹನ್ನೆರಡು ಸಾವಿರ ರೂಪಾಯಿಗಳಷ್ಟು ವರಮಾನ ಬರುತ್ತಿದ್ದರೆ ಅಂತಹವರಿಗೆ ಭೂಮಿ ಇಟ್ಟುಕೊಳ್ಳಲು ಅವಕಾಶವಿಲ್ಲ ಎನ್ನುವುದು. ಹಿಂದೆ ಇದ್ದ ಕಾನೂನಿನಲ್ಲಿ ಯಾರಾದರೂ ಒಬ್ಬರು ಬೆಂಗಳೂರಿನಲ್ಲಿ ಅಥವಾ ಬೇರೆ ಊರಿನಲ್ಲಿದ್ದರೂ ಅವರಿಗೆ ಇರುವ ಭೂಮಿಯನ್ನು ಗೇಣಿಗೆ ಕೊಟ್ಟು ಇಟ್ಟುಕೊಳ್ಳಲು ಒಂದು ಅವಕಾಶ ಇತ್ತು ಮತ್ತು ಆಳಿನ ಮೇಲೆ ಸೂಪರ್‌ವೈಸು ಮಾಡಿಕೊಂಡು ಹೋಗುತ್ತಿದ್ದರು, ಈಗ ಇದನ್ನು ಬದಲಾವಣೆ ಮಾಡಿ ಇಂದಿನ ಮನೋಧರ್ಮಕ್ಕೆ ತರಲು ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ಕೂಡ ಸರಕಾರವು

ಮೇಲೆ ಒತ್ತಾಯ ಬರುತ್ತಿದೆ ಎಂದು ಕೇಳುತ್ತೇವೆ. ಸರಕಾರ ಯಾವ ಒತ್ತಾಯಕ್ಕೂ ಮಣಿಯುವಾರದು. ಇಂದು ಈ ಕಾನೂನಿನಲ್ಲಿ ಸ್ವಂತ ನಾಗುವಳಿ ಮಾಡುವುದರ ಬಗ್ಗೆ ಸರಕಾರ ಏಕೆ ಕೈ ಹಾಕಬೇಕು? ಇವೇ ರೀತಿ ಸರಕಾರ ಕುಟುಂಬ ಎನ್ನುವುದರ ಬಗ್ಗೆ ವ್ಯಾಖ್ಯಾನ ಮಾಡುವುದರಲ್ಲಿ ಸ್ವಲ್ಪ ಮಾರ್ಪಾಡು ಮಾಡಿದ್ದಾರೆ. ಹಿಂದೆ ಕುಟುಂಬ ಎನ್ನುವುದನ್ನು ವ್ಯಾಖ್ಯಾನ ಮಾಡುವಾಗ ಅದರಲ್ಲಿ ಮಕ್ಕಳು ಮರಿಮಕ್ಕಳು ಹಾಗೂ ಗಂಡ ಹೆಂಡತಿ ಎಲ್ಲರೂ ಸೇರುತ್ತಿದ್ದರು. ಆದರೆ ಈಗ ಬದಲಾವಣೆ ಮಾಡಿರುವ ಬಿಲ್ಲಿನಲ್ಲಿ ಮೈನರುಗಳನ್ನು ಸೇರಿಸಿ ತಿದ್ದುಪಡಿ ಮಾಡಿ ತರಲಾಗಿದೆ ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಿದ್ದಾರೆ. ಹಿಂದೆ ಇದ್ದಂತೆ ಇದರಲ್ಲಿ ಮಕ್ಕಳು. ಹಾಗೂ ಮೊಮ್ಮಕ್ಕಳು ಏಕೆ ಸೇರಬಾರದು. ಇದನ್ನು ಸೇರಿಸಬಾರದು ಎಂದು ಇದರ ಬಗ್ಗೆ ಒಂದು ದೊಡ್ಡ ವಾದ ಕೂಡ ಬಂದಿದೆ. ಇವರ ಬಗ್ಗೆ ಸರಕಾರ ನಿಯಾಗಿ ವಿಚಾರ ಮಾಡಿ ಒಂದು ನೂಕ್ತವಾದ ಮಾರ್ಪಾಡು ಮಾಡುವುದು ನರಿಯಾಗಿರುತ್ತದೆ.

You h..ve brought the family in the limited scope; you must widen the scope of family so that it may cover even grandchildren. ಆದುದರಿಂದ ಮೊಮ್ಮಕ್ಕಳನ್ನೂ ಕುಟುಂಬದ ವ್ಯಾಪ್ತಿಯಲ್ಲಿ ತರುವ ದೃಷ್ಟಿಯಿಂದ ಕಾನೂನಿನಲ್ಲಿ ನೂಕ್ತ ತಿದ್ದುಪಡಿಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ತಾವು ಈಗ ತರತಕ್ಕ ಮಿತಿಯ ವ್ಯಾಪ್ತಿಯಲ್ಲಿ ಗಂಡ, ಹೆಂಡತಿ ಮೈನರ್ ಮಕ್ಕಳು ಮತ್ತು ಮೊಮ್ಮಕ್ಕಳನ್ನೂ ಕೂಡ ಸೇರಿಸಬೇಕೆನ್ನುವುದೇ ನನ್ನ ಒತ್ತಾಯ.

3.30 P. M.

ಹಳ್ಳೀ ಆಕ್ಟ್‌ನಲ್ಲಿ ಕೆಲವು ವಿನಾಯಿತಿಗಳನ್ನು ಕೂಡಲಾಗಿದೆ. ವಿಧವೆಯರಿಗೆ, ಅಪ್ರಾಪ್ತ ವಯಸ್ಕರಿಗೆ ಮತ್ತು ಸೈನ್ಯದಲ್ಲಿರುವವರಿಗೆ ಗೇಣಿಯನ್ನು ಮುಂದುವರಿಸಿ ಕೊಂಡುಹೋಗಬಹುದ ಎನ್ನುವ ವಿನಾಯಿತಿಯನ್ನು ಕೂಡಲಾಗಿದೆ. ಆದರೆ ಈ ಸರ್ಕಾರವೂ ಕೂಡ ಆ ವಿನಾಯಿತಿಗಳನ್ನು ರದ್ದು ಮಾಡುವುದಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ. ನಮ್ಮ ಮುಂದೆ ಇರತಕ್ಕ ಪ್ರಶ್ನೆಯಾದರೂ ಕೂಡ ಭೂಸುಧಾರಣೆಯನ್ನು ಮಾಡುವುದರ ಮುಖಾಂತರ ಮಧ್ಯವರ್ತಿ ಜನರನ್ನು ಸಂಪೂರ್ಣವಾಗಿ ಈ ಕ್ಷೇತ್ರದಲ್ಲಿ ತೊಡೆದು ಹಾಕಬೇಕು ಎನ್ನುವುದೇ ಆಗಿದೆ. ಮಧ್ಯವರ್ತಿ ಜನರನ್ನು ತೊಡೆದು ಹಾಕತಕ್ಕ ಕೆಲಸದಲ್ಲಿ ನಾವು ತೊಡಗಿರುವಾಗ ಒಂದು ವರ್ಗದ ಜನರನ್ನು ಹಾಗೆಯೇ ಉಳಿಸಿ ಅವರಿಗೆ ಸಂಬಂಧಪಟ್ಟ ಭೂಮಿಯನ್ನು ಗೇಣಿಗೆ ಕೊಟ್ಟು ಗೇಣಿ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಯಾವ ಔಚಿತ್ಯವಿದೆ ಮತ್ತು ಯಾವ ತತ್ವಕ್ಕೆ ಸೇರತಕ್ಕ ಪ್ರಶ್ನೆ ಎನ್ನುವುದನ್ನು ನಾವು ಒರೆ ಹಚ್ಚಿ ನೋಡೋಣ. ವಿಧವೆಯರಿಗೆ, ಅಪ್ರಾಪ್ತ ವಯಸ್ಕರಿಗೆ, ಸೈನ್ಯದಲ್ಲಿರುವವರಿಗೆ ಭೂಮಿಯನ್ನು ಕೊಡಬೇಡಿ ಎಂದು ಹೇಳುವುದಿಲ್ಲ. ಅವರಿಗೆ ಭೂಮಿಯನ್ನು ಉಳಿಸುವ ದೃಷ್ಟಿಯಿಂದ ಏನಾಗುತ್ತದೆ ಎಂದರೆ ನಾಳೆ ಅವರ ಜವಾಬ್ದಾರಿಯನ್ನು ಸರ್ಕಾರ ಹೊರುವುದಕ್ಕಿಂತ ಗೇಣಿದಾರರ ಮೇಲೆ ಬಿಟ್ಟಂತೆ ಆಗಿ ಅವರ ಕೈ ಬಿಟ್ಟಿಂತಾಗುತ್ತದೆ... ಮುಖ್ಯವಾಗಿ ಮಧ್ಯವರ್ತಿ ಜನರನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕಾ ಎನ್ನುವುದೇ ಈ ಕ್ಷೇತ್ರದಲ್ಲಿರುವ ಒಂದು ಸೈದ್ಧಾಂತಿಕವಾದ ವಿಚಾರ. ಆದರೆ ಈ ಮೂರು ವರ್ಗದ ಜನರನ್ನು ಮುಂದುವರಿಸುವುದರಿಂದ ಮಧ್ಯವರ್ತಿ ಜನರೂ ಉಳಿದು ಗೇಣಿದಾರನೂ ಉಳಿಯುತ್ತಾನೆ. ಚುನಾವಣೆ ಕಾಲದಲ್ಲಿ ಘೋಷಣೆಯನ್ನು ಮಾಡಿದಾಗ ಏನು ಹೇಳಿದ್ದಿರಿ? 60 ವರ್ಷ ವಯಸ್ಸಾದವರಿಗೆ ವೈದ್ಯಾಪ್ಯ ವೇತನ ಮತ್ತು ರಾಜಕೀಯ ಸಂತ್ರಸ್ತರಿಗೆ ವೇತನ ಕೊಡುವಂಥ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ರಾಜಕೀಯ ಸಂತ್ರಸ್ತರು ಪರಿಹಾರ ಸಿಕ್ಕುತ್ತದೆ ಎಂದು ಜೈಲಿಗೆ ಹೋಗಿ ಬರಲಿಲ್ಲ. ಇದೆಲ್ಲವೂ ಮುಂಚೆಯೇ ಗೊತ್ತಾಗಿದ್ದರೆ ಬಹಳ ಜನ ಜೈಲಿಗೆ ಹೋಗುತ್ತಿದ್ದರು. ರಾಜಕೀಯವಾಗಿ ಪರಿಹಾರ ಸಿಕ್ಕುತ್ತದೆ ಎಂದು ಅವರು ಯಾರೂ ಅಲ್ಪಾಪೇಕ್ಷೆಯನ್ನು ಇಟ್ಟು ಕೊಂಡು ಜೈಲಿಗೆ ಹೋದವರಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಯಾರು ತೊಡಗಿದ್ದರು, ಯಾರು ಹೋರಾಟದ ಕಾಲದಲ್ಲಿ ಪ್ರಾಮಾಣಿಕವಾಗಿ ತ್ಯಾಗಬುದ್ಧಿಯಿಂದ ದೇಶಸೇವೆ ಮಾಡಿದರೋ ಅವರ ಮನಸ್ಸನ್ನು ಕಲುಷಿತಗೊಳಿಸಿದ್ದಾರೆ ಮತ್ತು ಅಸಮಾಧಾನವನ್ನು ಬರುವಂತೆ ಮಾಡಿದ್ದಾರೆ. ಈ ಹೊತ್ತು ವೈದ್ಯರಿಗೆ ಮತ್ತು ರಾಜಕೀಯ ಸಂತ್ರಸ್ತರಿಗೆ ಪರಿಹಾರವನ್ನು ಕೊಡಲು ಹೇಗೆ ಮುಂದಾಗಿದೆಯೋ ಅದೇ ರೀತಿಯಲ್ಲಿ ಜಮೀನು ಕಳೆದುಕೊಳ್ಳುವಂಥ ವಿಧವೆಯರಿಗೆ, ಅಪ್ರಾಪ್ತ ವಯಸ್ಕರಿಗೆ, ಸೈನ್ಯದಲ್ಲಿರುವವರಿಗೆ ಪರಿಹಾರವನ್ನು ಕೊಡುವ ಕ್ರಮವನ್ನು ಕೈಗೊಳ್ಳಬಹುದು. ಇಂಥ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದರ ಮುಖಾಂತರ ಅವರಿಗೆ ಸೇರಿರತಕ್ಕ ಭೂಮಿಯನ್ನು ಕಾನೂನಿನ ವ್ಯಾಪ್ತಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಅದರಿಂದ ಸಂಪೂರ್ಣವಾಗಿ

(ಶ್ರೀ ಕಾಗೋಡು ತಿಮ್ಮಪ್ಪ)

ಮಧ್ಯವರ್ತಿ ಸರಕನ್ನು ಈ ಕ್ಷೇತ್ರದಲ್ಲಿ ನಾಶ ಪಡಿಸುವುದಕ್ಕೆ ಆಗುತ್ತದೆ ಎನ್ನುವ ಮಾತನ್ನು ನಾನು ಒತ್ತಾಯವಾಗಿ ಹೇಳುತ್ತೇನೆ. ಹಿಂದಿನಿಂದಲೂ ಈ ಬಗ್ಗೆ ನಾವು ಸಾಕಷ್ಟು ಒತ್ತಾಯ ಮಾಡಿದ್ದೇವೆ. ಆದರ ಹಿಂದಿನ ಸರ್ಕಾರದ ಕಿವಿ ಅದರ ಬಗ್ಗೆ ಕಿವುಡಾಗಿತ್ತು. ಈ ಸರ್ಕಾರವಾದರೂ ಸ್ವಲ್ಪ ಕಿವಿಯನ್ನು ಅಗಲಿಸಿ ಕೇಳುತ್ತದೆ ಎನ್ನುವ ಒಂದು ಆಸೆ ಎನಿತ್ತು. ಆದು ಇವರ ಧಾಟಿ ಮತ್ತು ಹೋಗತಕ್ಕ ಮಾರ್ಗವನ್ನು ನೋಡಿ ನಿರಾಸೆಯಾಗಿದೆ. ಆದುದರಿಂದ ಕಾನೂನಿನಲ್ಲಿ ಏನು ಏನಾಯಿತಿಯನ್ನು ಕೊಡಲಾಗಿದೆ ಆ ವಿನಾಯಿತಿಯನ್ನು ರದ್ದು ಪಡಿಸುವುದಕ್ಕೆ ಕಲವೊಂದು ತಿದ್ದುಪಡಿಗಳನ್ನು ತಂದು, ಈ ಕಾನೂನಿನಲ್ಲಿ ಅವನ್ನು ಸೇರಿಸುವುದಕ್ಕೆ ಸರ್ಕಾರವವರು ಮನಸ್ಸು ಮಾಡಬೇಕೆಂದು ನಾನು ತೀವ್ರವಾಗಿ ಒತ್ತಾಯಪಡಿಸುತ್ತಿದ್ದೇನೆ.

ಅನೇಕ ತಿದ್ದುಪಡಿಗಳನ್ನು ತರುವುದರ ಮೂಲಕ ಭಾರಿ ಹೊಗಳಿಕೆಯ ಮಾತನ್ನು ಈಗ ಕೇಳುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಹುಬ್ಬಳ್ಳಿಯಂಥ ನಗರದಲ್ಲಿ ಬಹಿರಂಗ ಸಭೆಯಲ್ಲಿ ಮಾಡಿದಂಥ ಭಾಷಣವನ್ನು ನಾನು ಕೇಳಿದ್ದೇನೆ. ಯಾವುದೇ ಸಂದರ್ಭದಲ್ಲಿಯೂ ಕೂಡ ಯಾವನೇ ಒಬ್ಬ ಗೇಣಿ ರೈತನಿಂದಲೂ ಜಮೀನು ಕೈ ತಪ್ಪದೆ ಇರುವಂತೆ ನಮ್ಮ ಸರ್ಕಾರ ಪ್ರಯತ್ನ ಮಾಡುತ್ತದೆ ಎನ್ನುವ ಮಾತನ್ನು ಅವರು ಸ್ಪಷ್ಟವಾಗಿ ಹೇಳಿದ್ದರು. ಆದರೆ ಇವೊತ್ತು ಆ ಮಾತನ್ನು ಕೃತಿಯಲ್ಲಿ ಇಳಿಸುವುದಕ್ಕೆ ಈ ತಿದ್ದುಪಡಿ ಮಸೂದೆ ಯಾವರೀತಿಯಿಂದಲೂ ಸಹಾಯಕವಾಗಿ, ಯಾವ ದೃಷ್ಟಿಯಿಂದಲೂ ಸಹಾಯಕವಾಗಿಲ್ಲ. ಈ ರಾಜ್ಯದ ಗೇಣಿದಾರರ ದೃಷ್ಟಿಯಿಂದಲೂ ಸಹಾಯಕವಾಗಿಲ್ಲ. 18 ಲಕ್ಷಕ್ಕಿಂತ ಹೆಚ್ಚು ಗೇಣಿ ರೈತರು ನಮ್ಮ ರಾಜ್ಯದಲ್ಲಿದ್ದಾರೆ. ಅವರಿಗೆ ಕೋರ್ಟಿಗೆ ಎಳೆಯತಕ್ಕ ವ್ಯವಸ್ಥೆ ಈಗಲೂ ಮುಂದುವರಿಯುತ್ತಿದೆ. ಸ್ವಂತ ಸಾಗುವಳಿ ಹೆಸರಿನಲ್ಲಿ ಜಮೀನನ್ನು ಬಿಡಿಸಿಕೊಳ್ಳುವ ಪ್ರಯತ್ನ ಇವೊತ್ತು ನಡೆಯುತ್ತಿದೆ. ಹಿಂದಿನ ಕಾನೂನಿನಲ್ಲಿ ಸ್ವಂತ ಸಾಗುವಳಿಗೆ ಬಿಡಿಸಿ ಕೊಳ್ಳುವುದಕ್ಕೆ ಅವಕಾಶವನ್ನು ಸೆಕ್ಷನ್ 14ರಲ್ಲಿ ಕೊಡಲಾಗಿದೆ. ಅದರ ಪ್ರಯೋಜನವನ್ನು ಇವೊತ್ತು ರೈತರನ್ನು ಕೋರ್ಟಿಗೆ ತಿರುಗಾಡಿಸತಕ್ಕ ಕ್ರಮಕ್ಕೆ ಜಮೀನ್ದಾರರು ಕೈ ಹಾಕಿದ್ದಾರೆ. ಸರ್ಕಾರವು ಒಂದು ಕ್ರಮದಿಂದ, ಕಾನೂನಿನ ಆ ವ್ಯವಸ್ಥೆಯಿಂದ ಗೇಣಿದಾರ ಮತ್ತು ಜಮೀನ್ದಾರ ಇಬ್ಬರೂ ಕೋರ್ಟಿಗೆ ತಿರುಗಿ ವ್ಯಾಜ್ಯ ಮಾಡತಕ್ಕ ಪ್ರಸಂಗವನ್ನು ತಂದೊಡ್ಡಲಾಗಿದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಯವರು ಆವರ ಭಾಷಣದಲ್ಲಿ ಸಾರ್ವಜನಿಕವಾಗಿ ಏನು ಹೇಳಿದ್ದಾರೆ ಆ ಮಾತು ಖಾಯಂ ಆಗಿ ಉಳಿಯುತ್ತದೆ ಎನ್ನುವ ನಂಬಿಕೆಯನ್ನು ನಾವು ಇಟ್ಟುಕೊಳ್ಳುವುದಾದರೆ ಅದನ್ನು ಕೃತಿಯಲ್ಲಿ ಇಳಿಸಬೇಕು ಮತ್ತು ಹಾಗೆ ಮಾಡುವುದಾದರೆ ಸೆಕ್ಷನ್ 14 ಏನಿದೆ ಅದನ್ನು ಸಂಪೂರ್ಣವಾಗಿ ರದ್ದು ಪಡಿಸತಕ್ಕ ಸಾಹಸವನ್ನು ನಮ್ಮ ಮುಖ್ಯ ಮಂತ್ರಿಯವರು ಮತ್ತು ಈ ಮಂತ್ರಿ ಮಂಡಲ ಮಾಡಬೇಕೆಂದು ಹೇಳುತ್ತೇನೆ. ಸ್ವಂತ ಸಾಗುವಳಿಗೆ ಅವಕಾಶ ಮಾಡಿಕೊಡತಕ್ಕ ಸೆಕ್ಷನ್ 14 ಏನಿದೆ ಅದನ್ನು ಸಂಪೂರ್ಣವಾಗಿ ಕಾನೂನಿಂದ ತೆಗೆದು ಹಾಕಿದಾಗ ಮಾತ್ರ ನಾವು ಸಂಪೂರ್ಣವಾಗಿ ಪ್ರಗತಿದಾಯಕವಾದ ಹೆಜ್ಜೆಯನ್ನು ಭೂಸುಧಾರಣೆ ಕ್ಷೇತ್ರದಲ್ಲಿ ಇಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಭೂಸುಧಾರಣೆ ಎನ್ನತಕ್ಕ ಕಲ್ಪನೆ ಪ್ರಾರಂಭವಾದದ್ದು ಭೂ ಸ್ವಾಮಿಗಳಿದ್ದಾರಲ್ಲ, ನುಭಾಷ್ ನಗರದಲ್ಲಿ ಚಪ್ಪರ ಹಾಕಿಕೊಂಡು ಚಳುವಳಿ ಮಾಡುತ್ತಿದ್ದಾರಲ್ಲ, ಅವರಿಂದ ಪ್ರಾರಂಭವಾಗಿರತಕ್ಕ ಘೋಷಣೆಯಲ್ಲ. ಈ ದೇಶದ ಗೇಣಿ ರೈತನಿಂದ ಪ್ರಾರಂಭವಾಗಿರತಕ್ಕ ಹೋರಾಟ ಇದು. ಯಾವ ಗೇಣಿ ರೈತನಿಂದ ಈ ಭೂಸುಧಾರಣೆ ಹೋರಾಟ ಪ್ರಾರಂಭವಾಯಿತೋ ಅವನ ಅಸ್ತಿತ್ವವನ್ನೇ ಕಲಕುವುದಕ್ಕೆ ಇವೊತ್ತು ಪ್ರಯತ್ನ ನಡೆಯುತ್ತಿದೆ. ಗೇಣಿ ರೈತನು ಹೋರಾಟ ಮಾಡಿ ಜೈಲಿಗೆ ಕೂಡ ಹೋಗಿದ್ದಾನೆ. ಗೇಣಿ ರೈತನಿಗೆ ಅವನು ಮಾಡಿರತಕ್ಕ ಭೂಮಿಯನ್ನು ಅವನಿಗೆ ಉಳಿಸಿಕೊಡತಕ್ಕ ದೃಷ್ಟಿಯಿಂದ ಹಿಂದಿನ ಸರ್ಕಾರದವರು ಪ್ರಯತ್ನ ಮಾಡಲಿಲ್ಲ, ಈ ಸರ್ಕಾರವೂ ಮಾಡುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಆದುದರಿಂದ ಹಿಂದಿನ ಸರ್ಕಾರಕ್ಕೂ ಮತ್ತು ಈ ಸರ್ಕಾರಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎನ್ನತಕ್ಕ ಮಾತನ್ನು ನಾನು ಇವೊತ್ತು ಹೇಳುವುದಕ್ಕೆ ತಯಾರಿಲ್ಲ. ಶ್ರೀಮಾನ್ ಕೆ. ಎಚ್. ಪಾಟೀಲರಿದ್ದಾರೆ. ಹಿಂದೆ ಒಂದು ಕಾಲದಲ್ಲಿ ಆವರು ದಿವಂಗತ ಗೋಪಾಲಗೌಡರ ಜೊತೆ ಓಡಾಡುವಾಗ ಬಹಳ ಪ್ರಗತಿದಾಯಕವಾದ ಮಾತುಗಳನ್ನು ಹೇಳುತ್ತಿದ್ದುದನ್ನು ಆವರ ಧಾಟಿಯಲ್ಲಿ ಕೇಳಿದ್ದೇನೆ. ಈಗ ಅದೆಲ್ಲ ಏನಾಯಿತೋ ಗೊತ್ತಿಲ್ಲ. ಮಾನ್ಯ ಎಸ್. ಎಂ. ಕೃಷ್ಣ ಅವರಿದ್ದಾರೆ. ಆವರು ಕೂಡ ಸಮಾಜವಾದ ವೇದಿಕೆಯ

ಮೇಲೆ ಗಂಟೆಗಟ್ಟಲೆ ಮಾತನಾಡತಕ್ಕ ವ್ಯಕ್ತಿ. ಇವೊತ್ತು ಏನಾಗಿದೆಯೋ, ಅವರ ಸ್ಮರಣ ಶಕ್ತಿ ಕಟ್ಟಿದೆಯೋ ಅಥವಾ ಬೇರೆಯವರು ಏನಾದರೂ ಅವರ ತಲೆಗೆ ಮೋಡಿ ಮಾಡಿದ್ದಾರೆಯೋ ಗೊತ್ತಾಗುವುದಿಲ್ಲ.

ಹಾಗೆ ಶ್ರೀಮಾನ್ ನಂಜೇಗೌಡರು ಮತ್ತು ಶ್ರೀಮಾನ್ ಅಜೀಜ್‌ಸೇಟ್‌ರವರೂ ಇದ್ದಾರೆ. ನಮ್ಮ ಸಮಾಜವಾದದ ಸ್ನೇಹಿತರು ಆ ಕಡೆ ಕುಳಿತಿದ್ದಾರೆ. ಯಾರು ಈ ಸಮಾಜವಾದಕ್ಕೋಸ್ಕರ ಹೋರಾಟ ಮಾಡಿದರೋ, ಮತ್ತು ಬಡತನ ನಿವಾರಣೆ, ದೀನದಲಿತರ ನಿವಾರಣೆಗೆ ಕಿಂಚಿತ್ ಕಳಕಳಿ ಇಟ್ಟುಕೊಂಡಿದ್ದರೋ ಅಂಥಾ ಜನರು ಅಧ್ಯಕ್ಷರಾದಿಯಾಗಿ ಎಲ್ಲರೂ ಈಗ ಅಧಿಕಾರದಲ್ಲಿ ಇದ್ದಾರೆ. ಆದುದರಿಂದ ಅವರು ಈಗಿರತಕ್ಕ ಒಂದು ವಾತಾವರಣವನ್ನು ಬದಲಾಯಿಸಿ ಈ ಒಂದು ಪರಿಸ್ಥಿತಿಯನ್ನು ಕೊನೆಗಾಣಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಭೂಮಾಲೀಕರಿಗೆ ಗೇಣಿ ರೈತನಿಂದ ಭೂಮಿಯನ್ನು ಬಿಡಿಸುವುದಕ್ಕೆ ಅವಕಾಶ ಕೊಡಬೇಡಿ. ಈ ಬಿಲ್ಲಿನಲ್ಲಿರುವ 14ನೇ ಸೆಕ್ಷನ್‌ನನ್ನು ತೆಗೆದುಹಾಕಿ. ಈಗ ಇದಕ್ಕೆ ಏನು ಒಂದು ತಿದ್ದುಪಡಿ ಮನೂದೆ ತಂದಿದ್ದೀರೋ ಇದರಲ್ಲಿ 100ಕ್ಕೆ 75 ಭಾಗವಾದರೂ ಗೇಣಿ ರೈತನಿಗೆ ಖಾಯಂ ಖಾತೆ ಆಗುವ ಹಾಗೆ ಮಾಡಿದರೆ ಅವನಿಗೆ ಭೂಮಿಯನ್ನು ಕೊಡುವುದಕ್ಕೆ ಬರುತ್ತದೆ. ಇಲ್ಲದೇ ಹೋದರೆ ಅವನು ಭೂಮಿಯನ್ನು ಉಳಿಸಿಕೊಳ್ಳುವುದು ಕಷ್ಟ. ಇದನ್ನು ದೂರದೃಷ್ಟಿಯಿಂದ ತಾವು ಯೋಜನೆ ಮಾಡಬೇಕು. ಯಾವ ಗೇಣಿ ರೈತ ಜಮೀನಿಗಾಗಿ ಹೋರಾಟ ಮಾಡಿದನೋ ಅವನಿಗೆ ಖಾಯಂ ಖಾತೆ ಮಾಡಿಕೊಡಬೇಕು. ಈ ರೀತಿ ಗೇಣಿದಾರನಿಗೆ ಖಾಯಂ ಖಾತೆ ಮಾಡಿಕೊಟ್ಟರೆ ಮುಕ್ಕಾಲು ಭಾಗ ಭೂನುಧಾರಣೆ ಆಗುತ್ತೆ. ಇದು ವಿಚಾರವಾದಿಯ ಕರ್ತವ್ಯ. ಇದರಲ್ಲಿ ತಾವು ಏತಕ್ಕೆ ವಿಫಲರಾಗಿದ್ದೀರಿ ಎನ್ನುವುದನ್ನು ಕೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಭೂಮಿಯನ್ನು ಯಾವನು ಉಳುತ್ತಾನೋ ಅವನೇ ಭೂಮಾಲೀಕನಾಗುತ್ತಾನೆ ಎನ್ನುವಾಗ ಹೊಸ ರಿನಂಷನ್ ಪ್ರಶ್ನೆ ಹೇಗೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಸೆಕ್ಷನ್ 14ರಲ್ಲಿ ಏನು ಹೇಳಿದೆ ಎಂದರೆ ಯಾವನು ಬೊನಾ ಫೈಡ್ ಸಲ್ಟ್ ಕಲ್ಟಿವೇಟರ್ ಇದ್ದಾನೋ ಅವನು ಜಮೀನು ವಾಪಸ್ಸು ತೆಗೆದುಕೊಳ್ಳಬೇಕಾದರೆ ಅವನೇ ಅರ್ಜಿ ಹಾಕಬೇಕು ಎಂದು ಇದೆ. ಈಗ ಗೇಣಿ ಪದ್ಧತಿ ಹೆಚ್ಚಾಗಿರತಕ್ಕಂಥ ಜಿಲ್ಲೆಗಳು ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಬೀದರ್ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಗಳು. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಗೇಣಿದಾರ 2 ಎಕರೆ ಭೂಮಿಯನ್ನು 12 ವರ್ಷದಿಂದಲೂ ಗೇಣಿ ಮಾಡಿಕೊಂಡು ಬಂದಿದ್ದರೆ ನೀವು ಹೇಳಿದ ಪ್ರಕಾರ ಅವನಿಗೆ 2 ಎಕರೆ ಉಳಿಯಲೇ ಬೇಕು. ಅವನಿಂದ ಭೂಮಿಯನ್ನು ಯಾವ ದೃಷ್ಟಿಯಿಂದಲೂ ಬಿಡಿಸುವುದಕ್ಕಾಗುವುದಿಲ್ಲ. ಈಗಿನ ಕಾನೂನು ಪ್ರಕಾರ ಭೂಮಾಲೀಕ ಸ್ವಂತ ಸಾಗುವಳಿಗೆ ಜಮೀನು ಬೇಕು ಎಂದು ಗೇಣಿದಾರನ ಮೇಲೆ ಕೇಸು ಹಾಕಿದರೆ ಆ ಗೇಣಿ ರೈತ ಕೋರ್ಟಿಗೆ ಹೋಗಲೇ ಬೇಕಾಗುತ್ತದೆ, ಅಲ್ಲಗೆ ಹೋಗಿ ವಾದಿಸಲೇಬೇಕಾಗುತ್ತದೆ. ಈಗಿರತಕ್ಕಂಥ ಕಾನೂನಿನಲ್ಲಿ ಭೂಮಾಲೀಕ ಗೇಣಿ ರೈತನಿಂದ 34 ಗುಂಟೆ ಜಮೀನನ್ನು ಬಿಡಿಸಿಕೊಳ್ಳಬೇಕಾದರೂ ಕೋರ್ಟಿಗೆ ಹೋಗಿ ಬಿಡಿಸಿಕೊಳ್ಳಬೇಕು. ಜಮೀನ್ದಾರರಿಗೆ ಲಾಭ ಇರತಕ್ಕಂಥಾದ್ದನ್ನು ಯಾವುದನ್ನೂ ಬಿಡುವುದಿಲ್ಲ. ಅವನಿಗೆ ಈ ಬಗ್ಗೆ ಹೋರಾಟ ಮಾಡುವ ಶಕ್ತಿ ಇದೆ. ಅವನು ಈ ಕಾನೂನನ್ನು ಉಪಯೋಗಿಸಿಕೊಂಡು ಕೋರ್ಟಿನಲ್ಲಿ ವ್ಯವಹಾರ ಮಾಡಿ ಆ ಗೇಣಿ ರೈತನನ್ನು ಕೋರ್ಟಿಗೆ ಎಳೆಸುವುದಕ್ಕೆ ಪ್ರಯತ್ನ ಮಾಡುತ್ತಾನೆ. ಕೆಲವರು ಕೋರ್ಟಿಗೆ ಅಲೆದು, ಅಲೆದು, ಈ ರೀತಿ ಅಲೆಯುವುದು ಸಾಕಪ್ಪಾ ಎಂದು ಭೂಮಾಲೀಕನಿಗೆ ತಮ್ಮ ಜಮೀನನ್ನು ಬಿಟ್ಟುಕೊಟ್ಟಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ಈ 14ನೇ ಸೆಕ್ಷನ್‌ನನ್ನು ಅಳವಡಿಸಿದ್ದಾರೆ. ಈಗಲಾದರೂ ಕೂಡ ಅದನ್ನು ಕಿತ್ತು ಹಾಕುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ. ತಮ್ಮ ಸಮಾಜವಾದದ ಹೋರಾಟ ತತ್ವದಲ್ಲಿ ಈ ಒಂದನ್ನಾದರೂ ಅಡಾಪ್ಟ್ ಮಾಡಿ. ನಾವು ಅವರಿಗಾಗಿ ಎಷ್ಟೋ ಹೋರಾಟ ಮಾಡಿದ್ದೇವೆ. ಹಿಂದಿನಿಂದಲೂ ಸಹ ಉಳುವವನೇ ಹೊಲದ ಒಡೆಯನಾಗಬೇಕೆಂಬ ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ಈ ವಿಚಾರ ಹೇಳಿದರೆ ಆ ಕಡೆಯಲ್ಲಿ ಕುಳಿತಿರುವ ನಮ್ಮ ಸ್ನೇಹಿತರು ನಗುತ್ತಾ ಇದ್ದಾರೆ. ನಮ್ಮ ಅವಿಶ್ರಾಂತದ ಒಂದು ಹೋರಾಟದಿಂದ ಕೊನೆಗೆ ಈ ತತ್ವವೇ ಸರಿ ಎನ್ನುವ ಒಂದು ತೀರ್ಮಾನಕ್ಕೆ ಬಂದು ಮುಟ್ಟಿದ್ದೀರಿ.

ಶ್ರೀ ಕೆ. ಎಚ್. ಪಾಟೀಲ್.—ನೀವು ಸರಿ ಅನ್ನುವ ತತ್ವಕ್ಕೆ ಒಂದು ಸಲಹೆ ಕೊಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ—ಒಬ್ಬ ದಡ್ಡ ಇರುತ್ತಾನೆ ಎಂದು ತಿಳಿದುಕೊಳ್ಳೋಣ. ಅವನ ಹತ್ತಿರ ಸಾಕಷ್ಟು ಜಮೀನು ಇದ್ದು, ಸಣ್ಣ ರೈತನಿಗೆ ರೊಕ್ಕ ಕೊಟ್ಟು ಮತ್ತಷ್ಟು ಪಡೆದಿರುತ್ತಾನೆ. ಆಗ ಸಣ್ಣ ರೈತ ನಿರ್ಗತಿಕನಾಗಿ ರಿಸಂಪ್‌ಷನ್‌ಗೆ ಅರ್ಜಿ ಹಾಕುತ್ತಾನೆ. ಇಂಥ ಅನೇಕ ಸಂದರ್ಭಗಳು ಇವೆ. ಇನ್ನು ಕೆಲವು ಸಂದರ್ಭಗಳಲ್ಲಿ ಆತನಿಗೆ 100 ಎಕರೆ ಮೇಲ್ಪಟ್ಟು 2 ಎಕರೆಯೂಕೂಡ ಹೆಚ್ಚಾಗಿರುವುದಿಲ್ಲ. ಈ ರೀತಿಯೂ ಇವೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹೇಳುವುದು ಏನೆಂದರೆ ಜಮೀನ್ದಾರರ ಜಮೀನು 2 ಎಕರೆ ಇರುತ್ತದೆ, ಅವನ ಗೇಣಿದಾರ ಜಮೀನು 100 ಎಕರೆ ಇದ್ದರೆ ಅವನಿಂದ ಜಮೀನು ವಾಪಸು ಪಡೆಯಲು ಜಮೀನ್ದಾರನಿಗೆ ರಿಸಂಪ್‌ಷನ್ ಕೊಡಬೇಕೇ. ಕೊಡಬಾರದೇ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ —ಯಾವ ಗೇಣಿ ರೈತನಿಗೆ ಮಿತಿಗಿಂತ ಜಾಸ್ತಿ ಇರುತ್ತದೋ ಅಂಥ ಸಂದರ್ಭದಲ್ಲಿ ರಿಸಂಪ್‌ಷನ್ ಕೊಡಿ. ಯಾವ ಗೇಣಿ ರೈತ ಸ್ವಂತ ಸಾಗುವಳಿ ಮಾಡಿ, ಕೆಲವು ಗೇಣಿಯನ್ನೂ ಮಾಡಿದಾಗ ಅವೆಲ್ಲಾ ಸೇರಿ ಮಿತಿಗಿಂತ ಜಾಸ್ತಿ ಇದ್ದರೆ ಬಿಡಿಸಿಕೊಡಿ. ಮಿತಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ ಅವನಿಂದ ಸ್ವಂತ ಸಾಗುವಳಿಗೆ ಬಿಡಿಸಿ ಕೊಡುವುದಕ್ಕೆ ಹೋಗಬೇಡಿ. ಈ ದೃಷ್ಟಿಯಿಂದ ಗೇಣಿದಾರರನ್ನು ಉಳಿಸುವ ಬಗ್ಗೆ ಅವರದೆ ಆದ ರಾಗವನ್ನು ಹಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ದಿವಂಗತ ಶಾಂತವೇರಿ ಗೋಪಾಲಗೌಡರ ನೆನಪು ಬರುವುದು ಸ್ವಾಭಾವಿಕ. ಪ್ರಾಯಶಃ ಅವರು ಈಪ್ರೊತ್ಸಿನ ದಿವಸ ಇದ್ದಿದ್ದರೆ ಇದಕ್ಕಿಂತ ಚೆನ್ನಾಗಿ ಮಾತನಾಡುತ್ತಿದ್ದರು ಮತ್ತು ಸರ್ಕಾರದ ಮನಸ್ಸನ್ನು ಪರಿವರ್ತಿಸುತ್ತಿದ್ದರು. ಆದರೆ ಅವರು ಇಲ್ಲ. ಆದಕ್ಕಾಗಿ ನಮ್ಮ ಕೈಲಾದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಒಂದೊಂದು ಸಾರಿ ಅವರು ಹಾಕಿಕೊಟ್ಟಿರತಕ್ಕಂಥ ಮಾರ್ಗ ನೋಡಿದರೆ ಮುಂದಿನ ಶಾಸನ ಸಭೆಯಲ್ಲಾದರೂ ಹೇಳುತ್ತಾರೋ ಏನೋ ಇದೇ ಕೊನೆಯದು ಎಂದು. ಗೇಣಿದಾರನ ಹೋರಾಟ ಅಥವಾ ಉಳುವವನೇ ಭೂಮಿಯ ಒಡೆಯನಾಗಬೇಕು ಎನ್ನುವ ಹೋರಾಟ ಹೆಚ್ಚು ಕಡಿಮೆ ಈ ಕೊನೇ ಕಾಲದಲ್ಲಿ ಅಭ್ಯರಾಗುತ್ತದೆ ಎಂದು ಹೇಳಬೇಕಾಗಬಹುದು. ಇದಕ್ಕಾಗಿ ನಾವು ನಿಮ್ಮ ಮನಸ್ಸನ್ನು ಸೋಲಿಸ ಬೇಕಾಗಿತ್ತು ನಾವು ಈ ಬಗ್ಗೆ ಹೊರಗೆ ಎಲ್ಲಾ ಹೋರಾಟವನ್ನು ಮಾಡಿದ್ದಾಗಿದೆ. ಇನ್ನು ಒಳಗಡೆ ಹೋರಾಟ ಮಾಡುವ ಪ್ರಯತ್ನದಲ್ಲಿದ್ದೇವೆ. ಗೇಣಿ ರೈತನನ್ನು ಉಳಿಸಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಆದುದರಿಂದ ಕಂದಾಯ ಮಂತ್ರಿಗಳಿಗೂ ಮತ್ತು ಎಲ್ಲರಿಗೂ ಹೇಳುತ್ತೇನೆ. ಇದರಲ್ಲಿರುವ ಸೆಕ್ಷನ್ 11ನ್ನು ರದ್ದುಪಡಿಸಿ ಎಂದು. ಅವನು ಮಿತಿಗಿಂತ ಹೆಚ್ಚು ಮಾಡಿದರೆ ಬೇಕಾದರೆ ರಿಸಂಪ್‌ಷನ್ ಕೊಡಿ ಎಂದು ಮತ್ತೊಮ್ಮೆ ತಮ್ಮನ್ನು ಕಳಕಳಿಯಿಂದ ವಿನಂತಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಸೆಕ್ಷನ್ 14 ತೆಗೆದುಹಾಕಿ ಬಿಟ್ಟರೆ ತಾವು ಹೇಳಿದಹಾಗೆ ಹೆಚ್ಚಿದಂತಹ ಜಮೀನನ್ನು ರೆಸಮ್ಷನ್ ಮಾಡುವ ಸಲುವಾಗಿ ಎಲ್ಲಿ ವ್ಯಾಪಿಷನ್ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಿದ್ದುಪಡಿ ಮಾಡಿ ಕೇರಳ ಭೂಸುಧಾರಣೆ ಕಾನೂನಿನಲ್ಲಿ ಇಂಥ ಅವಕಾಶಗಳನ್ನು ಇಟ್ಟಿದ್ದಾರೆ. ನೀವು ಒಂದು ಪ್ರಶ್ನೆ ಕೇಳಬಹುದು. ಆ ರೀತಿ ಅವಕಾಶ ಮಾಡಿ ಕೊಡಬೇಕೆಂದಿದ್ದಾರೆ ಅದನ್ನು ಏನು ಮಾಡುವುದು ? ಜಾಸ್ತಿ ಕೇಸುಗಳು ಆಗಿದೆಯೆ ವಿನಹ ವಾಸ್ತವಿಕವಾಗಿ ಬಿಡಿಸಿಕೊಂಡ ಸಂಖ್ಯೆ ಬಹಳ ಕಡಿಮೆ. ಆದು 5 ಪರ್ಸೆಂಟ್ ಆಗಬಹುದು. ಜಾಸ್ತಿ ಜನ ಬಿಡಿಸಿಕೊಳ್ಳುವುದಕ್ಕೆ ಆಗಲಲ್ಲ. ಇನ್ನೂ ಕೇಸಸ್ ನಡೆಯುತ್ತಾ ಇದೆ. ಸೆಕ್ಷನ್ 7ರಲ್ಲಿ ಈ ಅವಕಾಶ ಮಾಡಿ ಕೊಟ್ಟಿದ್ದಾರೆ. ಯಾವುದೇ ಕಾರಣದಿಂದ ಜಮೀನು ಅಕ್ರಮವಾಗಿ ಗೇಣಿಧಾರನಿಂದ ಬಿಡಿಸಿಕೊಂಡಿದ್ದಾರೆ, ಅಂತಹವರಿಂದ ರೆಸ್ಟೋರೇಷನ್ ಮಾಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಅವೇ ರೀತಿಯಾಗಿ ಇದರೊಳಗೆ ಅವಕಾಶ ಮಾಡಿಕೊಟ್ಟರೆ, ಜಮೀನು ಬಿಡಿಸಿಕೊಂಡಿದ್ದಾರೆ. ಅಂತಹವರಿಗೆ ಅವಕಾಶಮಾಡಿಕೊಡಿ. ಹುಬ್ಬಳ್ಳಿ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಡಿದ ಮಾತನ್ನು ಪ್ರಸ್ತಾಪಮಾಡಿದ್ದೇನೆ. ಮೊಟ್ಟಮೊದಲು ಹೇಳಿದ್ದು ಗೇಣಿ ರೈತನಿಂದ ಆವರ ಕೈಯಲ್ಲಿ ಸ್ವಂತ ಮಾಡುವದು ಗೇಣಿ ತೆಗೆದುಕೊಂಡಿರುವುದು ಎಲ್ಲಾ ಸೇರಿ ನಿಮ್ಮ ಮಿತಿಗಿಂತ ಜಾಸ್ತಿ ಇದ್ದ ಪಕ್ಷದಲ್ಲಿ ಅದನ್ನು ಸ್ವಂತ ಸಾಗುವಳಿಗೆ ಬಿಡಿಸಿ ಕೊಳ್ಳಲು. ಇಲ್ಲವಾದರೆ ಯಾವುದೇ ಕಾರಣದಿಂದ ಗೇಣಿ ರೈತ ಸ್ವಂತ ಸಾಗುವಳಿಗೆ ಬಿಡಿಸಿಕೊಳ್ಳ ತಕ್ಕ ವ್ಯವಸ್ಥೆ ಮುಂದುವರಿಸಬೇಡಿ. ಇದನ್ನು ಇಲ್ಲಿಗೆ ಮುಕ್ತಾಯಮಾಡಿ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್‌ಅರಸ್.—ಏಡೋನ್, ಮೈನರ್ ಚಿರ್ಡ್‌ರನ್ ಮತ್ತು ಡಿಸೇಬರ್ ಪೀಪಲ್ಸ್ ಇದರ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅದಕ್ಕೆ ಹೇಳುವುದು. ರಾಜಕೀಯ ಸಂಕ್ರಮಣದವರಿಗೆ ವಯಾಸ್ಪಾದವರಿಗೆ ಪರಿಹಾರ ಕೊಡುವ ಕ್ರಮವನ್ನು ಇಟ್ಟುಕೊಂಡಿದ್ದೀರಿ, ಸಂಭಾವನೆ ಕೊಡುವ ಕ್ರಮ ಇಟ್ಟುಕೊಂಡಿದ್ದೀರಿ. ನಮ್ಮ ರಾಜ್ಯದಲ್ಲಿ ಲಕ್ಷಾಂತರಗಟ್ಟಲೆ ವಿಧವೆಯರು, ಮೈನರ್ಸ್ ಅಂಗ ವಿಕಲರು ಇಲ್ಲ. ಹೆಚ್ಚು ಲೆಕ್ಕ ಹಾಕಿದರೆ 4-5 ಸಾವಿರ ಜನ ಆಗಬಹುದು ಜಾಸ್ತಿ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಅಷ್ಟು ಜನ ಒಂದೊಂದು ಊರಿನಲ್ಲಿ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಜಮೀನು ಗೇಣಿ ಕೊಟ್ಟುಕೊಂಡು ವಿಧವೆಯಾಗಿರುವವರು ಹೆಚ್ಚು ಜನ ಇಲ್ಲ.

ಉಪಾಧ್ಯಕ್ಷರು.—ಅವರ ಸಲುವಾಗಿ ಸಹಾನುಭೂತಿ ತೋರಿಸುವವರು ಬಹಳ ಜನ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಪ್ಪತ್ತು ವಿಧವೆಯರಿಗೆ ಹೇಗೆ ಜಮೀನು ಹೋಗಿದೆ ಎನ್ನುವುದು ನನಗೆ ಗೊತ್ತಿದೆ. ಮೈನರ್ ಹೆಸರಿಗೆ ವಿಭಾಗಪತ್ರದ ಮುಖಾಂತರ ಇನ್ನು ಯಾವುದೋ ಕಾರಣದಿಂದ ತಂದೆ ಹೆಸರಿಗೆ ಜಮೀನನ್ನು ಕ್ರಯ ಮಾಡಿಕೊಂಡರೆ ತೊಂದರೆಯಾಗುತ್ತದೆ ಎಂದು ಮೈನರ್ ಮಕ್ಕಳ ಹೆಸರಿಗೆ ಮಾಡಿರುವುದು ಇದೆ. ಇನ್ನೊಂದು ಅಕ್ರಮವಾಗಿ ದೂರದೃಷ್ಟಿ ಇಟ್ಟುಕೊಂಡು ಕಾನೂನಿಂದ ತಪ್ಪಿಸಿಕೊಳ್ಳಬಹುದು ಎಂದು ವಿಧವೆಯರ ಹೆಸರಿಗೆ ಮೈನರ್ ಮಕ್ಕಳ ಹೆಸರಿಗೆ ಜಮೀನು ಮಾಡಿರುವುದು ಇದೆ. ನಮ್ಮ ಮೂಲಭೂತವಾದ ಧೋರಣೆ ಮಧ್ಯವರ್ತಿಗಳನ್ನು ತೊಡೆದುಹಾಕಬೇಕು ಎನ್ನುವುದು. ಈ ಒಂದು ಕ್ಷೇತ್ರದಲ್ಲಿ ಮಧ್ಯವರ್ತಿಯನ್ನು ಉಳಿಸುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತೀರಾ ? ಮಧ್ಯವರ್ತಿಗಳನ್ನು ತೊಡೆದುಹಾಕಿ. ಈ ಒಂದು ಸಮಸ್ಯೆಯನ್ನು ಪರಿಹಾರಮಾಡುವುದಕ್ಕೆ ಅವರಿಗೆ ಸ್ವಲ್ಪ ತ್ಯಾಗಮಾಡಬೇಕಾಗುತ್ತದೆ. ಅವರು ತ್ಯಾಗಮಾಡುವ ಕಾಲಕ್ಕೆ ಅವರಿಗೆ ವಿಶೇಷವಾಗಿ ಸರ್ಕಾರಿ ನೌಕರಿ ಕೇಳಿದರೆ ಕೊಡಿರಿ ಒಂದು ವೇಳೆ ಅವರಿಗೆ ಮಾಸಿಕ ವೇತನ ಕೇಳಿದರೆ, ಅದನ್ನು ಕೊಟ್ಟರೆ ಅಂತಹ ಒಂದು ವ್ಯವಸ್ಥೆಯನ್ನು ತರತಕ್ಕ ಕಾಲದಲ್ಲಿ ವಿಧವೆ ಮುಂತಾದಂತಹವರಿಗೆ ವಿಶೇಷ ಮಾಸಿಕ ವೇತನ ಕೊಡುವ ಮುಖಾಂತರ ಅವರ ಸಮಸ್ಯೆ ಬಗೆಹರಿಸಿದರೆ ಅವರು ಎಷ್ಟು ಜನ ಇದ್ದಾರೆ ಎಂದು ನಿಮ್ಮ ಹತ್ತಿರ ಅಂಕಅಂಶಗಳಿಲ್ಲ. ಎಲ್ಲಿಯೋ ಒಂದು ಊರಿನಲ್ಲಿ ಒಬ್ಬಿಬ್ಬರು ಇರಬಹುದು. ಹೆಚ್ಚು ಪ್ರಮಾಣದ ಸಂಖ್ಯೆಯಲ್ಲಿ ಇಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಇದ್ದಾರೆ. ವಿನಾಯಿತಿ ಪಡೆಯತಕ್ಕ ಜನರು ಆಗಾಧವಾದ ಸಂಖ್ಯೆಯಲ್ಲಿ ಇಲ್ಲ. ಬೆರಳು ಮಡಿಚಿ ಹೇಳುವಷ್ಟು ಸಂಖ್ಯೆಯಲ್ಲಿದ್ದಾರೆ. ಅವರನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಗೇಣಿದಾರನಿಂದ ಭೂಮಿಯನ್ನು ಕಿತ್ತುಕೊಳ್ಳುವುದಕ್ಕೆ ಹೋಗಬೇಡಿ. ಅವರಿಗೆ ಮಾಸಿಕ ವೇತನವನ್ನು ಕೊಡಿ ಸಹಾಯಮಾಡಿ ಈಗ ಭೂಸುಧಾರಣೆ ಆಗತಕ್ಕ ಕಾಲದಲ್ಲಿ ಎಲ್ಲಾ ಜಾಗಕ್ಕೂ ಕೂಡ ವಿಸ್ತರಿಸುವುದಕ್ಕೆ ಸಾಧ್ಯವಾಗುತ್ತದೆ. ಸ್ವಾಮಿ ಈಗ ಮಿತಿಗೆ ಸಂಬಂಧಪಟ್ಟ ಪ್ರಶ್ನೆ. ಇದೇ ಈಗ ಇರತಕ್ಕ ತಿರುಳು. ಈ ಅಂಶದಲ್ಲಿ ನಮ್ಮ ವಿರೋಧಪಕ್ಷಗಳನ್ನು ಮತ್ತು ಅಧಿಕಾರರೂಢ ಪಕ್ಷಗಳನ್ನು ಒರಗೆ ಹಚ್ಚಬೇಕಾಗುತ್ತದೆ. ಮುಖ್ಯ ಮಂತ್ರಿಗಳು ಕಡ್ಡಾಯವಾಗಿ 10 ಎಕರೆ ಮಿತಿಯನ್ನು ಹಾಕಬೇಕು ಎಂದು ದೃಢನಿರ್ಧಾರದಲ್ಲಿ ಇದ್ದಾರೆ. ಅವರಲ್ಲಿ ನಂಬಿಕೆ ಇದೆ. ಅದರಲ್ಲಿ ಅನುಮಾನವಿಲ್ಲ. ಇವರ ಕೈಯನ್ನು ಬಲಪಡಿಸುವುದಕ್ಕಿಂತ ಹೆಚ್ಚಿಗೆ ಸಾಧ್ಯವಾದಷ್ಟು ಕಾಲ ಕಳೆದು ಜಗ್ಗಾಹಾಕತಕ್ಕ ಪ್ರಯತ್ನ ಒಳಗೂ ನಡೆಯುತ್ತಿದೆ ಮತ್ತು ಹೊರಗೂ ನಡೆಯುತ್ತಿದೆ. ಈ ಸಂದರ್ಭದಲ್ಲಿ ಅವರು ಹೇಗೆ ನುಣುಚಿಕೊಂಡು ತಂತ್ರಿರತಕ್ಕ ವಿಧೇಯಕವನ್ನು ಅಂತಿಮವಾಗಿ ಹೇಗೆ ಉಳಿಸಿಕೊಂಡು ಮುಂದೆಬರುತ್ತಾರೆ ಎನ್ನುವುದು ನನಗೆ ಇರುವ ಅನುಮಾನ. ಅದರಿಂದ ಪಾರಾಗಿ ಬಂದರೆ ಅವರಿಗೂ ಒಳ್ಳೆಯದು ನಮಗೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು. ಪಾರಾಗಿ ಬರುವುದಕ್ಕೆ ನಾವು ಸಹಾಯ ಮಾಡಬೇಕು. ನಿಮ್ಮ ಪಕ್ಷದವರು ಸಹಾಯಮಾಡಬೇಕು. ಹೊರಗಡೆ ಕೂಗುವವರು ಸಹಾಯ ಮಾಡಬೇಕು. ಇವರ ಸಹಾಯ ಹೇಗೆ ಪಡೆಯತಕ್ಕಾರೆ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆ. ನಾನು ಹೇಳುತ್ತೇನೆ ಶ್ರೀಮಾನ್ ದೇವೇಗೌಡರು ಏನು ಹೇಳುತ್ತಾರೆ ಗೊತ್ತಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೇಳಿದ್ದೇನೆ. ನನಗೆ ಒಂದು ವರ್ಷಕಾಲ ಮುಂತ್ರಿ ಕೆಲಸ ಕೊಡಿ ಒಂದು ಕುಂಟೆ ಭೂಮಿ ಬೇಡ.

Mr. DEPUTY SPEAKER.—But the consitutional provisions are there.

ಶ್ರೀ ಕಾಗೋಡು ತಿಮ್ಮಪ್ಪ.—ಈ ಮಸೂದಾ ಕಾನೂನು ಏನು ತಂದಿದ್ದಾರೆ ಇದರ ಪ್ರಕಾರ ಮುಖ್ಯಮಂತ್ರಿಗಳು ಯಶಸ್ವಿ ಆಗಬಹುದು ಎನ್ನುವುದು ನನ್ನ ಹಾರೈಕೆ. ನೀವು ತಂದಿರತಕ್ಕದ್ದು ಭಾರಿ ಪ್ರಗತಿದಾಯಕವಾಗಿದೆ ಎಂದು ಅಲ್ಲ. ಪ್ರಗತಿದಾಯಕವಾಗಿ ಮಾಡುವುದಕ್ಕೆ ಸಾಧ್ಯವಿದ್ದರೆ

(ಶ್ರೀ ಕಾಗೋಡು ತಿಮ್ಮಪ್ಪ)

ಗಂಡ ಹೆಂಡತಿ ಮೂರು ಜನ ಮಕ್ಕಳಿಗೆ ನೀವು ಹೇಳತಕ್ಕ ಎರಡು ಫಸಲನ್ನು ಕೊಡತಕ್ಕ ನೀರಾವರಿ 5 ಎಕರೆ ಜಮೀನಿನಲ್ಲಿ ಬದುಕುವುದಕ್ಕೆ ಸಾಧ್ಯ. ನಾನು ಯಾರದೋ ಜಮೀನು ಮಾಡುವವನ್ನು ಅಲ್ಲ. ನಾನು ಬದುವಿನ ಮೇಲೆ ಓಡಾಡಿಕೊಂಡು ಕೆಸರು ತುಳಿಯದೆ ಇರುವವನು ಅಲ್ಲ. ಜಮೀನು ಕೆಲಸ ಮಾಡಿದವನು. ಈಗ ಅವರ ಪರ ವಕಾಲತ್ತು ಪ್ರಾರಂಭ ಮಾಡುವುದಕ್ಕಿಂತ ಮುಂಚೆಯೇ ಜಮೀನು ಕೆಲಸ ಮಾಡಿದ್ದೇನೆ.

ಆದ್ದರಿಂದ ಒಬ್ಬ ಮನುಷ್ಯ ಜಮೀನಿನಲ್ಲಿಯೇ ದುಡಿಯಬೇಕು, ಬದುಕಬೇಕು ಬಾಳಬೇಕು, ಜಮೀನಿನಲ್ಲಿಯೇ ಎಲ್ಲವನ್ನೂ ಕಾಣಬೇಕು ಎನ್ನತಕ್ಕಂಥ ಶ್ರದ್ಧೆ ಇದ್ದರೆ, ಅವನಿಗೆ ನೀರಾವರಿಯಾಗ ತಕ್ಕ, ಎರಡು ಫಸಲು ಕೊಡತಕ್ಕ ಐದು ಎಕರೆ ಜಮೀನು ಇದ್ದರೆ ಅವನ ಒಂದು ಕುಟುಂಬ ಜೀವನ ಮಾಡುವುದಕ್ಕೆ ಸಾಧ್ಯವಿದೆ.

4.00. P. M.

ಶ್ರೀ ಕೆ. ಎಚ್. ಹನುಮೇಗೌಡ.—3—4 ಮಕ್ಕಳು ಇದ್ದರೆ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಎಕರೆಯಲ್ಲಿ, ಎರಡು ಫಸಲನ್ನು ಕೊಡತಕ್ಕಂಥ ಜಮೀನು ಇದ್ದರೆ, ಎರಡು ಸಾವಿರ ರೂಪಾಯಿಗಳ ಉತ್ಪನ್ನ ತಗೆಯುವುದಕ್ಕಾಗುತ್ತದೆ. ಆದ್ದರಿಂದ ಹೇಡಿಗಳ ಕೈಯಲ್ಲಿ ಜಮೀನನ್ನು ಕೊಡವುದಕ್ಕಿಂತ ಉಳುವವರ ಕೈಯಲ್ಲಿ ಜಮೀನನ್ನು ಕೊಡಿ. ಇವತ್ತು ಜಮೀನು ಇರಬೇಕು, ಜಮೀನು ಸಾಗುವಳಿ ಮಾಡುವವರು ಬೇರೆಯವರು ಆಗಬೇಕು, ಉತ್ಪನ್ನ ಬರತಕ್ಕದರಲ್ಲಿ ಜಮೀನ್ದಾರನ ಮಕ್ಕಳು ವಿದ್ಯಾವಂತರು ಆಗಬೇಕು, ಎಂ. ಬಿ. ಬಿ. ಎಸ್. ; ಬಿ. ಇ. ಆಗಬೇಕು. ಯಾವನು ಭೂಸ್ವಾಮಿಗಳ ಜಮೀನಿನಲ್ಲಿ ಕೃಷಿ, ಕೂಲಿ ಮಾಡುತ್ತಾನೆಯೋ ಅವನ ಮಗ ಎಂ. ಬಿ. ಬಿ. ಎಸ್. ಡಿಗ್ರಿ ಪಡೆದುಕೊಂಡಿದ್ದಾನೆಯೇ? ಲಕ್ಚರರ್ ಆಗಿದ್ದಾನೆಯೇ? ಶ್ರೀಮಂತ ಜಮೀನ್ದಾರನು ಕೂಲಿ ಆಳುಗಳ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾನೆಯೇ ಹೇಳಿ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಪ್ರಯತ್ನವನ್ನೂ ಪಟ್ಟಿಲ್ಲ. ಯಾವ ಜಮೀನ್ದಾರನು ಕೂಲಿ ಆಳುಗಳಿಗೆ, ಒಂದು ತಿಂಗಳುಗಳಿಗೆ ನರಾನರಿ 25 ದಿವಸ ಕೆಲಸ ಮಾಡಿದರೆ 150 ರೂಪಾಯಿ ಸಂಬಳ ಕೊಡಲಕ್ಕೆ, ಅಂಥ ಕೂಲಿ ಆಳುಗಳನ್ನು ಇಟ್ಟುಕೊಳ್ಳಲಕ್ಕೆ, ಭಾನುವಾರ ರಜ ಕೊಟ್ಟು ಸಂಬಳ ಕೊಡುವ ವ್ಯವಸ್ಥೆ ಇಟ್ಟುಕೊಂಡಿದ್ದಾನೆ ಹೇಳಿ? ಇವತ್ತು ತಂದಿರತಕ್ಕ ಭೂಮಿತಿ ವಿಧೇಯಕ ಅತ್ಯಂತ ಪ್ರಗತಿದಾಯಕವಾಗಿಲ್ಲದೆ ಹೋದರೂ, ಒಂದು ದೃಷ್ಟಿಯಿಂದ ಒಂದು ದಿಟ್ಟ ಹೆಜ್ಜೆ ಎನ್ನತಕ್ಕದ್ದನ್ನು ಮಾತ್ರ ಹೇಳುತ್ತೇನೆ. ಆದ್ದರಿಂದ ಇವತ್ತು ತಂದಿರತಕ್ಕ ಭೂಮಿತಿ ವಿಧೇಯಕ ಕಾರ್ಯಗತವಾಗಬೇಕು ಎಂದು ನಾನು ಹೇಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ಹೊರಗಿನಿಂದ, ಒಳಗಿನಿಂದ ಎಳೆಯುವ ಮಂದಿ ಇದ್ದಾರೆ. ಅವರ ತಿಪಿತದಿಂದ ಬದುಕಿ ಬರತಕ್ಕ ಪ್ರಯತ್ನ ಮಾಡಿದರೆ, ಇದನ್ನು ಕಾನೂನು ರೂಪವಾಗಿ ತರುತ್ತೀರಿ. ಏನಾದರೂ ಸ್ವಲ್ಪ ಜಾರಿದರೆ, ಪಟ್ಟನ್ನು ತಪ್ಪಿದರೆ, ಬಂಡಿತವಾಗಿಯೂ ಮತ್ತೆ ಇತಿಹಾಸದಲ್ಲಿ ಇಂಥ ಅವಕಾಶ ಸಿಕ್ಕುವುದಿಲ್ಲ, ಮತ್ತು ತಮ್ಮ ಹೆಸರನ್ನು ಉಳಿಸಿಕೊಳ್ಳುವುದಿಲ್ಲ. ಮುಖ್ಯಮಂತ್ರಿಗಳಿಗೆ ಈ ವಿಷಯದಲ್ಲಿ ದಿಟ್ಟ ಸಾಹಸಬೇಕು ಎಂದು ನಾನು ಹೇಳುತ್ತೇನೆ. ನಮ್ಮ ಅಧಿಕಾರ ಪದಚ್ಯುತಿ ಯಾಗಲಿ, ದಿಟ್ಟ ಹೆಜ್ಜೆಯನ್ನು ಬಿಡುವುದಿಲ್ಲ, ಈ ಮಾರ್ಗದಲ್ಲಿ ನಡೆಯುತ್ತೇನೆ ಎನ್ನುವ ಧೃಢನಿರ್ಧಾರ ನಿಮಗೆ ಬರಬೇಕು ಎಂದು ಈ ಸಂದರ್ಭದಲ್ಲಿ ತಮಗೆ ಸವಾಲು ಹಾಕಿ ಹೇಳುತ್ತೇನೆ. ಸ್ವಾಮಿ ಈಗ ಭೂಸ್ವಾಮಿಗಳು ಒಂದು ವ್ಯಾಖ್ಯಾನವನ್ನು ಮಾಡುತ್ತಾ ಇದ್ದಾರೆ. ಭೂ ಹಿಡುವಳಿ ದೊಡ್ಡದಾಗಿರಬೇಕು, ಹಾಗೆ ಇದ್ದರೆ ಉತ್ಪನ್ನ ಜಾಸ್ತಿಯಾಗುತ್ತದೆ, ಅಲ್ಲದೆ ಅದಕ್ಕೆ ತಕ್ಕ ತಾಂತ್ರಿಕತೆಯನ್ನು ತೊಡಗಿಸಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದು ಬಂಡಿತವಾಗಿಯೂ ತಪ್ಪು, ಇದನ್ನೆರ್ನಾ ಅಮೇರಿಕಾ ದೇಶದಿಂದ ಎರವಲು ತಂದಿದ್ದೀರಿ. ಸಣ್ಣ ಹಿಡುವಳಿಯ ಭೂಮಿಯನ್ನು ಅಭಿವೃದ್ಧಿ ಪಡಿಸತಕ್ಕಂಥ ಯೋಜನೆಯನ್ನಾಗಲೀ, ಕೆಲಸಗಳನ್ನಾಗಲೀ ಅದಕ್ಕೆ ಬೇಕಾದಂಥ ತಾಂತ್ರಿಕತೆಯನ್ನು, ಭಾರತದ ನೆಲದಲ್ಲಿ, ಭಾರತದ ಭೂಮಿಯಲ್ಲಿ ಬೆಳೆಸಿಕೊಳ್ಳಲಿಲ್ಲ. ಇವತ್ತು ತಾಂತ್ರಿಕ ಜ್ಞಾನದ ನಮ್ಮ ದೃಷ್ಟಿಕೋನ ಅಮೇರಿಕಾದ ಪರಾವಲಂಬಿಯಾಗಿದೆಯೇ ವಿನಹ ಭಾರತದ ಪರವಾಗಿಲ್ಲ. ಈ ನಮ್ಮ ದೃಷ್ಟಿಯನ್ನು ಮೂಲಭೂತವಾಗಿ ಬದಲಾವಣೆ ಮಾಡಬೇಕು. ಆಗ ಹಿಡುವಳಿ ಸಣ್ಣದಾಗಿದ್ದರೂ ಉತ್ಪಾದನೆ ಕಡಿಮೆಯಾಗುವುದಿಲ್ಲ, ಉತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕೆ ಇದು ಯಾವ ಬಾಧಕವನ್ನೂ ಉಂಟುಮಾಡುವುದಿಲ್ಲ ಎಂದು ನನ್ನ ವಾದ. ಸಣ್ಣ

ಹಿಡುವಳಿಯಿಂದ ಉತ್ಪಾದನೆ ಕುಗ್ಗಿ ಹೋಗುತ್ತದೆ ಎನ್ನುವ ಹೆದರಿಕೆ ಯಾರಿಗೂ ಬೇಡ. ಇದನ್ನು ಅನೇಕ ಉದಾಹರಣೆಗಳಿಂದ ಸಾಬೀತು ಮಾಡಿ ತೋರಿಸುತ್ತೇನೆ. ಏಕೆಂದರೆ, ನಣ್ಣ ಹಿಡುವಳಿ ಸಾಮಾನ್ಯವಾಗಿ ನಮ್ಮ ದೇಶದಲ್ಲಿ ತರಾವಾರಿ, ಎಕರೆವಾರು ಬರತಕ್ಕದ್ದು 1.2 ಹೆಕ್ಟಾರ್. ಜಪಾನ್‌ನಲ್ಲಿ 0.4 ಹೆಕ್ಟಾರು ಇದೆ. ಇವತ್ತು ನಾವು ನಮ್ಮ ದೇಶದಲ್ಲಿ ಸರಾಸರಿ ಒಂದು ಹೆಕ್ಟಾರ್‌ನಲ್ಲಿ ಉತ್ಪಾದನೆ ಪಡೆಯತಕ್ಕದ್ದು 13 ಕ್ವಿಂಟಾಲ್ ಅಕ್ಕಿ ಇದ್ದರೆ, ಜಪಾನ್ ದೇಶದಲ್ಲಿ 50 ಕ್ವಿಂಟಾಲ್ ಅಕ್ಕಿಯನ್ನು ಅವ ಪಡೆಯುತ್ತಾನೆ. ಅವನು ರಾಸಾಯನಿಕ ಗೊಬ್ಬರವನ್ನು ಎಷ್ಟು ಉಪಯೋಗ ಮಾಡುತ್ತಾನೆ ಎಂದರೆ, ಒಂದು ಎಕರೆಗೆ 321 ಕೆ.ಜಿ.ಯನ್ನು ಭೂಮಿಯಲ್ಲಿ ತೊಡಗಿಸುತ್ತಾನೆ, ಆದರೆ ನಮ್ಮದೇಶದಲ್ಲಿ ಒಂದು ಹೆಕ್ಟಾರಿಗೆ 5 ಕೆಜಿ ಉಪಯೋಗಿಸುತ್ತೇವೆ. ಜಪಾನ್‌ನಲ್ಲಿ ಹಿಡುವಳಿ ನಮ್ಮ ಹಿಡುವಳಿಗಿಂತ ಕಡಿಮೆ, ಉತ್ಪಾದನೆ ನಮಗಿಂತ ದ್ವಿಗುಣವಾಗಿದೆ.

ಶ್ರೀ ಎಚ್. ಡಿ. ದೇವೆಗೌಡ.—ಜಪಾನಿನಲ್ಲಿ ಎಕನಾಮಿಕ್ ಹೋಲ್ಡಿಂಗ್ ಎಷ್ಟು ಇದೆ ಹೇಳಿ ?

ಶ್ರೀ ಕಾಗೋಡು ತಿಮ್ಮಪ್ಪ.—ನನ್ನ ಹತ್ತಿರ ಆ ವಿವರ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಆ ದೇಶದಲ್ಲಿ ಇರುವ ನೀರಾವರಿ ಅನುಕೂಲ ನಮ್ಮ ದೇಶದಲ್ಲಿ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಜಪಾನ್‌ನಲ್ಲಿ ಶೇಕಡ 52ರಷ್ಟು ಇವೆ. ಅಮೆರಿಕಾದಲ್ಲಿ ಶೇಕಡ 6 ರಷ್ಟಿದೆ. ಇವತ್ತು ಮೆಕ್ಸಿಕೋದಲ್ಲಿ ನಮಗಿಂತಲೂ ಕಡಿಮೆ ಪ್ರಮಾಣದಲ್ಲಿ ನೀರಾವರಿ ಇದೆ, ಆದರೂ ಅಲ್ಲಿ ಜಾಸ್ತಿ ಉತ್ಪನ್ನ ತೆಗೆಯುತ್ತಾರೆ, ಜಪಾನ್ ದೇಶದಲ್ಲಿ ಇವತ್ತು ಒಂದು ಹೆಕ್ಟಾರಿನಲ್ಲಿ ಸುಮಾರು 961 ಡಾಲರ್ ಸಂಪಾದನೆ ಮಾಡುತ್ತಾನೆ. ಆದರೆ ನಾವು ಒಂದು ಹೆಕ್ಟಾರ್‌ನಲ್ಲಿ ಕೇವಲ 91 ಡಾಲರನ್ನು ಉತ್ಪಾದನೆ ಮಾಡುತ್ತೇವೆ. ಅದೇ ಅಮೇರಿಕಾ ರಾಷ್ಟ್ರದಲ್ಲಿ ನೋಡಿದರೆ, ಪ್ರತಿ ಹೆಕ್ಟಾರ್‌ನಲ್ಲಿ ಸರಾಸರಿ ಉತ್ಪಾದನೆ ಕೇವಲ 102 ಡಾಲರ್ ಮಾತ್ರ ಜಪಾನ್‌ನಷ್ಟು ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಅಮೆರಿಕಾ ಬೆಳೆಯುವುದಕ್ಕಿಂತ 9 ರಷ್ಟು ಹೆಚ್ಚು ಜಪಾನ್‌ನವರು ಬೆಳೆಯುತ್ತಾರೆ. ಇವತ್ತು ಜಪಾನ್‌ಗಿಂತ ಕಡಿಮೆ ಹಿಡುವಳಿ ನಮ್ಮದಲ್ಲ. ನವ್ಮ ನಣ್ಣ ಹಿಡುವಳಿಗೆ ತಕ್ಕಂತೆ ತಾಂತ್ರಿಕತೆಯನ್ನು ನಾವು ಬೆಳೆಸಿಕೊಂಡಿಲ್ಲ. ಈ ದೃಷ್ಟಿಯಿಂದ ನಮ್ಮ ಉತ್ಪಾದನೆ ಕಡಿಮೆಯಾಗಿದೆ. ನಣ್ಣ ಹಿಡುವಳಿ ಯೋಜನೆಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದು ಒಳ್ಳೆಯದೇ. ಆದರೆ ನಿಜವಾಗಿಯೂ ಅದನ್ನು ಕಾರ್ಯಗತಮಾಡುವಲ್ಲಿ ಅದು ರಾಜಕೀಯವಾಗಿ ಪರಿಣಮಿಸಿ ಹೊರತು ವಾಸ್ತವಿಕವಾಗಿ ಅದಕ್ಕೆ ಯಾವ ಪ್ರೋತ್ಸಾಹವನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ಮೂಲಭೂತವಾಗಿ ಈ ದೃಷ್ಟಿಯಿಂದ ಆಲೋಚನೆ ಮಾಡಿಲ್ಲ, ಮತ್ತು ಯೋಜನೆಯನ್ನು ತಯಾರು ಮಾಡಲಿಲ್ಲ, ಕಾರ್ಯಗತ ಮಾಡಲಿಲ್ಲ. ಅದು ಇಂದು ಕೇವಲ ನಕಲು ಯೋಜನೆಯಾಗಿದೆ. ಯಾವ ರೀತಿಯಿಂದಲೂ ನಮ್ಮ ಉತ್ಪತ್ತಿಯನ್ನು ಕಡಮೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಕೇವಲ ದೊಡ್ಡ ಹಿಡುವಳಿದಾರರಾದ ಮಾತ್ರಕ್ಕೆ ಉತ್ಪತ್ತಿ ಜಾಸ್ತಿಯಾಗಲು ಸಾಧ್ಯವಿಲ್ಲ, ಜಾಸ್ತಿಯಾಗುತ್ತದೆ ಎಂದು ಹೇಳುವ ವಾದದಲ್ಲಿ ತಿರುಳಿಲ್ಲ. ಅದು ಒಪ್ಪುವ ಮಾತಲ್ಲ. ಇವತ್ತು ನಮ್ಮಲ್ಲಿ ಒಂದು ವಿಶಿಷ್ಟವಾದ ಭೂಮಾಲೀಕರ ವರ್ಗ ಸೃಷ್ಟಿಯಾಗಿದೆ. ಇಂದು ನಮ್ಮ ರಾಜ್ಯದಲ್ಲಿರುವ ಒಟ್ಟು ಹಿಡುವಳಿದಾರರೆಷ್ಟು? ಜತ್ತಿ ಸಮಿತಿ ವರದಿ ಪ್ರಕಾರ ಸುಮಾರು 24 ಲಕ್ಷ ಚಿಲ್ಲರೆ ಹಿಡುವಳಿಗಳಿವೆ, ಇಂದು ಅದು 44 ಲಕ್ಷವಾಗಿದೆ ಎಂದು ಕಂದಾಯ ಮಂತ್ರಿಗಳು ಹೇಳುವರು. ನಮ್ಮ ವಿಧೇಯಕವನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತಂದರೆ ಯಾವ ಜನರಿಗೆ ಅದು ಬಾಧಕ ಉಂಟು ಮಾಡುವುದು ಎಂಬ ಸಂಶಯವಿದೆ. ಏಕೆಂದರೆ ನಮ್ಮ ಭೂಮಾಲೀಕರು ಕೃಷಿ ರೈತರು ಕಾರ್ಮಿಕರು ಎಂದು ಹೇಳುವರು, ಅವರಿಗೆ ಪ್ರಧಾನವಾಗಿ ಭೂಮಿ ಸೇರಬೇಕು. ಈಗ ನಮ್ಮ ಮುಂದಿರುವ ವಿಧೇಯಕ ಈ ರಾಜ್ಯದ ಎಷ್ಟು ಜನರಿಗೆ ಬಾಧಕ ಉಂಟು ಮಾಡುವುದು ಎಂಬುದು. ನಮ್ಮಲ್ಲಿರುವ ನೀರಾವರಿ ಪ್ರದೇಶ ಶೇಕಡ 12 ಮಾತ್ರ. ಇದರ ಬಗ್ಗೆ ಮಿತಿ ಹಾಕುವುದರಿಂದ ಹೆಚ್ಚುವರಿ ಜಮೀನು ಸಿಕ್ಕುವುದು ಅನುಮಾನ. ಹೊನಪೇಟೆ, ಶಿವಮೊಗ್ಗ, ಮಂಡ್ಯ ಮುಂತಾದ ಕಡೆ ವೀರಣ್ಣಗೌಡರು ಮುಂತಾದವರಿಂದ ಸ್ವಲ್ಪ ದೊರೆಯಬಹುದು. ಸಾಮಾನ್ಯವಾಗಿ ಗಂಡ ಹೆಂಡತಿ, ಮೂರು ಮಕ್ಕಳು ಇರುವ ನಾರ್ಮ್ಸಿನಿದು ಜನರ ಕುಟುಂಬಗಳಿರುವುವು. ಅವರುಗಳು ಸುಮಾರು 10 ಎಕರೆಗಳವರೆಗೆ ಇಟ್ಟುಕೊಂಡಿರಬಹುದು. ಸುಮಾರು 45 ಎಕರೆ ಇಟ್ಟುಕೊಂಡಿರುವ ಕುಟುಂಬಗಳಿಗೆ ಮಿತಿ ಅನ್ವಯಿಸುವುದಿಲ್ಲ, ಅಂಥಹ ಕುಟುಂಬಗಳಿಂದ ಯಾವ ಜಮೀನೂ ಹೆಚ್ಚಿಗೆ ಸಿಕ್ಕುವುದಿಲ್ಲ. ತುಂಗಭದ್ರಾ ಪ್ರದೇಶ, ಮಂಡ್ಯ ಮುಂತಾದ ಕಡೆ ಎರಡು ಬೆಳೆ ಬೆಳೆಯಬಹುದು, ಎರಡು ಬೆಳೆ ಬೆಳೆಯುವ ನೀರಾವರಿ ಪ್ರದೇಶ, ತುಂಗಭದ್ರಾ ಮತ್ತು

(ಶ್ರೀ ಕಾಗೋಡು ತಿಮ್ಮಪ್ಪ)

ಮುಂಡ್ಯ ಮುಂತಾದ ಪ್ರದೇಶಗಳಲ್ಲಿರಬಹುದು, ಬೇರೆ ಕಡೆ ಇಲ್ಲ. ಎರಡು ಬೆಳೆ ಬೆಳೆಯುವ ನೀರಾವರಿ ಪ್ರದೇಶವಿರುವುದು ಬಹಳ ಕಡಮೆ. ಎರಡು ಸಾವಿರ ಜನರಿಂದ ಹೆಚ್ಚು ಜಮೀನು ಸಿಕ್ಕಬಹುದು. ಅದಕ್ಕಿಂತ ಹೆಚ್ಚು ಜನರಿಂದ ಸಿಕ್ಕುವುದಿಲ್ಲ. ಶಿವಮೊಗ್ಗ ಕಡೆ ಸುಮಾರು 25 ಎಕರೆ ಇರುವವರು ಡೊಡ್ಡವರು, ಅಂಥವರು ನಾಲ್ಕು ಜನ ಇರಬಹುದು. ನೂರು—ನೂರ ಐವತ್ತು ಎಕರೆ ಇರುವವರು ಕಲವರು ಸಿಕ್ಕಬಹುದು. ಮಿತಿ ಹಾಕುವುದರಿಂದ ಹೆಚ್ಚು ಜಮೀನು ಸಿಕ್ಕುವುದು ಕೇವಲ ಕೆಲವರಿಂದ. ಬೇರೆ ವರ್ಗದವರಿಂದ ಸಿಕ್ಕುವುದಿಲ್ಲ. ಸುಮಾರು 45 ಎಕರೆಯವರೆಗೆ ಇಟ್ಟು ಕೊಂಡಿರುವವರನ್ನು ಬಿಟ್ಟು ಉಳಿದವರಿಂದೇನು ಸಿಕ್ಕಬಹುದೆಂದು ಅಂದಾಜು ಮಾಡಬಹುದು. 45 ಎಕರೆಯವರೆಗೆ ರಾಜ್ಯದಲ್ಲಿ ಎಷ್ಟು ಜನರು ಜಮೀನಿಟ್ಟುಕೊಂಡಿದ್ದಾರೆ? ಸುಮಾರು ಸೇಕಡ 70 ಜನರು ಒಂದರಿಂದ ಹತ್ತು ಎಕರೆಯವರೆಗೆ ಇಟ್ಟುಕೊಂಡಿದ್ದಾರೆ. ಇದು ಜಿತ್ತಿ ಸಮಿತಿ ವರದಿಯಿಂದ ಗೊತ್ತಾಗುವುದು. ಅದನ್ನು ಬಿಟ್ಟರೆ ನಮಗೆ ಬೇರೆ ಆಧಾರವಿಲ್ಲ. ಈಗ 44 ಲಕ್ಷ ಹಿಡುವಳಿಗಳಾದಿದ್ದರೆ ಜಮೀನು ಹೆಚ್ಚು ಸಿಕ್ಕುವುದಿಲ್ಲ, 7—8 ಸಾವಿರ ಜನರಿಗೆ ಸಿಕ್ಕಬಹುದು. ಜಿತ್ತಿ ಸಮಿತಿ ವರದಿ ಪ್ರಕಾರ 30 ಎಕರೆಗಿಂತ ಕಡಮೆ ಹಿಡುವಳಿ ಇರುವವರು ಸೇಕಡ 92 ಜನರಿದ್ದಾರೆ. ಉಳಿದ ಕೇವಲ ಸೇಕಡ 8 ಜನರು 30 ಎಕರೆಗೆ ಮೇಲ್ಪಟ್ಟು ಹಿಡುವಳಿ ಹೊಂದಿದ್ದಾರೆ. ಭೂಸ್ವಾಮಿಗಳು ಎಲ್ಲೋ ಹೊರಗೆ ಇದ್ದುಕೊಂಡು ಮುಖ್ಯ ಮಂತ್ರಿಗಳ ಕಾಲನ್ನು ಎಳೆಯುತ್ತಿದ್ದಾರೆ, ಅವರ ಪ್ರಭಾವಕ್ಕೆ ಒಳಗಾಗಬಾರದು. ಈಗ ತಂದಿರುವ ಭೂ ಸುಧಾರಣೆ ಮಿತಿ ಜಾರಿಗೆ ಬಂದರೆ ಸೇಕಡ ಎಂಟು ಜನರಿಗೆ ಲಾಗು ಆಗಬಹುದು. ಅದರಲ್ಲೂ ತಪ್ಪಿಸಿಕೊಳ್ಳುವವರು ಸೇಕಡ ಒಂದರಷ್ಟು ಇರಬಹುದು. ಸೇಕಡ ಆರು ಮಂದಿಗೆ ಈ ವಿಧೇಯಕದಿಂದ ಬಾಧೆ ತಟ್ಟಬಹುದು. ಎಂಟರಲ್ಲಿ ಸೇಕಡ ಇಬ್ಬರು ಉಳಿದರೂ ಉಳಿಯಬಹುದು. ಸಿಕ್ಕಿದರೆ ಸೇಕಡ ಎರಡು ಸಿಕ್ಕಬಹುದು. ಕೂಲಿಗಾರರ ಹೆಸರಿನಲ್ಲಿ ಕೆಲವರು ತಲೆ ಹಾಕುತ್ತಿದ್ದಾರೆ.

ಈ ಬಿಲ್ಲಿನಿಂದ ಇನ್ನುಳಿದ ಶೇಕಡಾ 98 ಭಾಗದ ಜನರಿಗೆ ಏನೂ ತೊಂದರೆಯಾಗುವುದಿಲ್ಲ. ಅದುದರಿಂದ ಯಾರೂ ಇದರ ವಿಚಾರದಲ್ಲಿ ಅಷ್ಟು ತಲೆಕೆಡಿಸಿಕೊಳ್ಳಬೇಕಾದ ಪ್ರಮೇಯವೇ ಉದ್ಭವಿಸುವುದಿಲ್ಲ. ಈ ಮಸೂದೆಯಿಂದ ಹಾಗೊಂದು ವೇಳೆ ಬಾಧಕ ಆಗುವುದಾಗಿದ್ದರೆ ಅದು ಆ ಶೇಕಡ 2 ರಿಂದ ಶೇಕಡ 6ರ ಮಧ್ಯೆ ಇರತಕ್ಕ ಜನರಿಗೆ ಆಗಬಹುದು. ಅವರನ್ನು ಬಿಟ್ಟರೆ ಇದರಿಂದ ಇನ್ನಾರಿಗೂ ಬಾಧಕವಾಗುವುದಿಲ್ಲ. ಹಾಗಿದ್ದರೂ ಕೆಲವರು ಏನೋ ಹುಲಿ ಬಂತು, ಹುಲಿ ಬಂತು ಎಂದು ಹೇಳುವ ಹಾಗೆ ಇಲ್ಲೂ ಜನರನ್ನು ವ್ಯರ್ಥಾ ಗಾಬರಿ ಮಾಡುವುದಕ್ಕೆ ಹೊರಟಿದ್ದಾರೆ. ಈ ಗಾಬರಿ ಮಾಡುವುದನ್ನು ನೋಡಿದರೆ ನನಗೆ ಆ ತೋಳ ಕುರಿಮರಿ—ಕಥೆ ಜ್ಞಾಪಕಕ್ಕೆ ಬರುತ್ತಿದೆ. ಇಲ್ಲಿ ಕೆಲವರು ಈ ಮಸೂದೆಯ ವಿಚಾರದಲ್ಲಿ ಜನರಿಗೆ ವ್ಯರ್ಥಾ ಗಾಬರಿ ಮಾಡುತ್ತಿರುವುದನ್ನು ನೋಡಿದರೆ ಆ ತೋಳ ಕುರಿಮರಿಗೆ ಆಶ್ರಯ ನೀಡುತ್ತೇನೆ ಬಾ, ಒಳಗೆ ಸುಖವಾಗಿರು, ಎಂದು ಆಹ್ವಾನ ಕೊಟ್ಟಂತಿವೆ. ರಾಜ್ಯದಲ್ಲಿರತಕ್ಕ ಕೇವಲ 2-3 ಪರ್ಸೆಂಟ್ ಜನರಿಗೆ ಅಲ್ಪ ಸ್ವಲ್ಪ ತೊಂದರೆಯಾದರೆ ಅದರಿಂದ ಆಕಾಶವೇ ಕಳಚಿ ಬೀಳುತ್ತಿದೆ ಎಂದು ಜನರನ್ನು ಗಾಬರಿ ಮಾಡುವಂತಿದೆ. ಅದುದರಿಂದ ಹಾಗೆಲ್ಲಾ ಮಾತನಾಡುವುದು ಸರಿಯಲ್ಲ. ಮಾನ್ಯ ಘೋರ್ಪಡೆಯವರಿಗೂ ಜಮೀನಿವೆ.

ಉಪಾಧ್ಯಕ್ಷರು.—ಅವರಿಗೆ ಅದು ಸೀಲಿಂಗ್ ಮಿತಿಯೊಳಗೆ ಇರಬಹುದು.

ಶ್ರೀ ಕಾಗೋಡು ತಿಮ್ಮಪ್ಪ...—ಮಾನ್ಯ ಘೋರ್ಪಡೆಯವರ ಜಮೀನು ಇನ್ನೂ ಉಳಿದಿರಲಿಕ್ಕಿಲ್ಲ ಅವರು ಅದನ್ನು ಹಿಸ್ಸೆ ಮಾಡಿ ಸೀಲಿಂಗಿನ ಮಿತಿಯೊಳಗೆ ಬರುವಂತೆ ಮಾಡಿಕೊಂಡಿದ್ದಾರೆ. ಹಾಗೆ ಶ್ರೀ ಬದರಿನಾರಾಯಣ ಅವರಿಗೂ ಅಪಾರವಾದ ಭೂಮಿ ಇತ್ತು. ಅವರೂ ಕೂಡ ಹಿಸ್ಸೆ ಮಾಡಿಕೊಂಡು ಎಲ್ಲಾ ಹಂಚಿಕೆ ಆಗಿಬಿಟ್ಟಿದೆ. ಆದುದರಿಂದ ಅವರ ಕೈಲಿರತಕ್ಕ ಭೂಮಿಯಲ್ಲೂ ಯಾರಿಗೂ ಜಮೀನು ಸಿಕ್ಕುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ನಚಿವರು).—ಈಗ ಮಾರಾಟ ಮಾಡುವುದಕ್ಕೆ ಹೇಗೆ ಸಾಧ್ಯ?

ಶ್ರೀ ಎಚ್. ಡಿ. ದೇವೇಗೌಡ.—ನಾನು ಹಿಂದೆಯೇ ಹೇಳಿದ್ದೇನೆ. ಇಂಥವರ ಜಮೀನಿನಲ್ಲಿ ರೈತರಿಗೆ ಸಿಕ್ಕುವುದು ಜಮೀನಲ್ಲ, ಬಾರಿನತಕ್ಕ ಗಂಜಿ ಎಂಬುದಾಗಿ. ಸೀಲಿಂಗ್ ಮಿತಿಯೊಳಗೆ ಇರುವುದನ್ನು ಮಾರಾಟ ಮಾಡುವುದಕ್ಕೆ ಅವಕಾಶವಿದ್ದೇ ಇದೆ.

Sri M. Y. GHORPADE.—The basic point he is making is correct. You need not make a big noise about it.

ಶ್ರೀ ಕಾಗೋಡು ತಿಮ್ಮಪ್ಪ.—ಈ ಭೂಸುಧಾರಣೆಯ ಕೂಗು ಏನಿದೆ.....

Mr. DEPUTY SPEAKER.—It can be sold to the tenants. Please take care. Hon. members are talking something which you have not stated.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಇತ್ತಕಡೆ ಇರತಕ್ಕ ವಿರೋಧ ಪಕ್ಷದ ಸದಸ್ಯರಲ್ಲೂ ಕೆಲವರೂ ಭೂಸ್ವಾಮಿಗಳ ಪರ ಮಾತನಾಡತಕ್ಕವರಿದ್ದಾರೆ. ಆದರೆ ಅವರು ಒಂದೊಂದು ಸಾರ್ತಿ ಆಲೋಚನೆ ಮಾಡಿ ಅದನ್ನು ಹೇಳುತ್ತಾರೆ. ಈ ತಿಮ್ಮಪಡಿ ಮನೆಯಲ್ಲಿ ಭೂಮಿತಿಯನ್ನ ತಗ್ಗಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಇದರ ಬಗ್ಗೆ ಯಾರು ಎಷ್ಟೇ ಪ್ರಕಾರ ಮಾಡಲಿ ಇದ್ದರಿಂದ ಯಾರಿಗೂ ಅಷ್ಟು ತೊಂದರೆಯಾಗುವದಿಲ್ಲ. ದೇಶದಲ್ಲಿರತಕ್ಕ ಭೂರಹಿತ ಜನಾಂಗಕ್ಕೆ ಅಂದರೆ ಹರಿಜನ ಗಿರಿಜನರಿಗೆ ಅಂದರೆ ರಾಜ್ಯದಲ್ಲಿರತಕ್ಕ ಶೇ : 18 ಭಾಗವ ಕೃಷಿ ಕಾರ್ಮಿಕರಿಗೆ ಅನುಕೂಲವಾಗಬೇಕಾಗಿದೆ. ಅವರು ಮೂಕ ಪ್ರಾಣಿಗಳಾಗಿದ್ದಾರೆ. ಅವರಿಗೆ ರಾಜಕೀಯ ಗೊತ್ತಿಲ್ಲ, ಅವರು ಗ್ರಾಮಾಧಿಕಾರಿಗಳಾಗಲಿಲ್ಲ. ಸರ್ಕಾರದಲ್ಲಿ ಅಧಿಕಾರಿಗಳಾಗಲಿಲ್ಲ, ಆದರೆ ಅವರು ಕೇವಲ ಓಟರು ಪಟ್ಟಿಯಲ್ಲಿ ಮಾತ್ರ ಇರುತ್ತಾರೆ.

ಈ ದಿವಸ ಇಲ್ಲಿ ಕೆಲವರು ವಿಧಾನ ಸೌಧದ ಮುಂದೆ ಜಾತ ಬಂದಿದ್ದಾರೆ. ಇವರೆಲ್ಲಾ ಯಾರು? ಜನರನ್ನು ಮರುಳುಗೊಳಿಸುವುದಕ್ಕೆ ಬಂದಿರತಕ್ಕ ಭೂ ಸ್ವಾಮಿಗಳ ಏಜಂಟರು. ಆದರೆ ಇವರ ಪ್ರಚಾರದಿಂದ ಯಾರಿಗೆ ಲಾಭವಾಗುತ್ತದೆ? ದೇಶದಲ್ಲಿರತಕ್ಕ ಶೇ : 2 ರಷ್ಟು ಜನಕ್ಕೆ. ಅವರಿಗೆ ಲಾಭವಾದರೆ ನಾಕು ಎನ್ನುವುದು ಜನಾಭಿಪ್ರಾಯವಾಗಿದ್ದರೆ ಆಗಲಿ. ಆದರೆ ಇವರಂತೆ ಪ್ರಚಾರ ಮಾಡುವುದಕ್ಕೆ ಗೇಣಿದಾರರಲ್ಲಿ ದುಡ್ಡಿಲ್ಲ. ಈ ಭೂರಹಿತ ಜನಾಂಗದಲ್ಲಿ ಹಣವಿಲ್ಲ. ಇವರಲ್ಲಿ ಪ್ರಭಾವಶಾಲಿಗಳು ಇಲ್ಲ. ಇವರು ಮೆರವಣಿಗೆ ಇತ್ಯಾದಿಗಳನ್ನೆಲ್ಲಾ ನಡೆಸುವುದಕ್ಕೆ ಸಾಧ್ಯವೆಲ್ಲಿದೆ? ಮೇಲಾಗಿ ಇವರಲ್ಲಿ ಸಂಘಟನೆಯೂ ಕೂಡ ಇಲ್ಲ. ಭೂಸ್ವಾಮಿಗಳಾದರೋ ಈ ದಿವಸ ಅವರಿಗೆ ಒಂದು ಮೆರವಣಿಗೆ ಹೊರಡಿಸಲು 50 ಸಾವಿರ ಜನರನ್ನು ಬೇಕೆಂದರೆ ಕೊಂಡು ತರಬಲ್ಲರು. ನಾನು ಹಾಗೆ ಮಾಡುವುದಕ್ಕಾಗುವದಿಲ್ಲ. ನನ್ನ ಸಾಗರದ ಊರಿನಲ್ಲಾದರೆ ನಾನು ಜನರನ್ನು ಹಾಗೇ ಸೇರಿಸಬಲ್ಲೆ. ಅವರಿಗೆ ಅಲ್ಲಿ ದುಡ್ಡಿನ ಅಗತ್ಯ ಇಲ್ಲ. ಬೇಕಾದರೆ ಬುತ್ತಿಯನ್ನು ಅವರು ತಮ್ಮ ಮನೆಯಿಂದಲೇ ಕಟ್ಟಿಕೊಂಡು ಬರುತ್ತಾರೆ. ಆದರೇ ಅದೇ ಜನರನ್ನು ನಾನು ಇಲ್ಲಿ ಬೆಂಗಳೂರಿಗೆ ಕರೆತರಬೇಕೆಂದರೆ ಹಣ ಬೇಕೇ ಬೇಕು. ಎಲ್ಲಿಂದ ತರುವುದು? ಒಂದು ಟಪ್ಪರ ಹಾಕುವುದಕ್ಕೆ ಹಣ ಬೇಕು. ಇವರು ಎಲ್ಲಿಂದ ತರುತ್ತಾರೆ?

ಶ್ರೀ ಎಚ್. ಡಿ. ದೇವೇಗೌಡ.—ಹಣವಿದ್ದಿದ್ದರೆ ಚಳುವಳಿ ಹೂಡುವುದಕ್ಕೆ ಸಾಧ್ಯವೇ?

ಶ್ರೀ ಕಾಗೋಡು ತಿಮ್ಮಪ್ಪ.—ಸಾಧ್ಯವಿಲ್ಲ ಎಂಬುದು ನನ್ನ ಅಭಿಪ್ರಾಯ. ನಾನು ಚಳವಳಿಯಲ್ಲಿ ಭಾಗವಹಿಸಿ ಅಲ್ಲಿಗೆ ಸೇರತಕ್ಕವರ ರೂಪು ರೇಖೆಗಳೇನೆಂಬುದನ್ನೆಲ್ಲಾ ನಾನು ಚೆನ್ನಾಗಿ ಅರಿತಿದ್ದೇನೆ. ಈ ಭೂಮಿ ಇಲ್ಲದೆ ಜನರು ಬಾಯಿಲ್ಲದ ಬಸವಣ್ಣಗಳು. ಅವರೆಲ್ಲಾ ಕಾಲಲ್ಲಿದ ಹೆಳವರಾಗಿದ್ದಾರೆ 1961 ರಲ್ಲಿ ಬಂದ ಭೂಸುಧಾರಣ ಕಾನೂನಾದರೂ ಅದನ್ನು 1965 ತನಕ ಏಕೆ ಜಾರಿಗೆ ಕೊಡಲಿಲ್ಲ? ಆ ರೀತಿ ಜಾರಿಗೆ ಕೊಡುವಾಗ ಎಷ್ಟು ಬದರಾವಣೆಗಳಾದುವು, ಎಷ್ಟು ತಿದ್ದುಪಡಿಗಳಾದುವು ಅವನ್ನು ಯಾರು ಮಾಡಿದರು ಎಂಬುದನ್ನೆಲ್ಲಾ ಲೆಕ್ಕ ಹಾಕಿಕೊಂಡರೆ ಎಲ್ಲ ಭೂಸ್ವಾಮ್ಯಗಳೇ ಈ ರೀತಿ ಬೊಬ್ಬೆ ಹಾಕುತ್ತಿದ್ದರೆಂಬುದಾಗಿ ಅರ್ಥವಾಗುತ್ತದೆ. ಅದಕ್ಕೆ ಮತ್ತೆ ಬೇರೆ ಕಾರಣವೇನೂ ಇಲ್ಲ. ಆದ್ದರಿಂದ ಇವತ್ತು ಈ ವಿಧೇಯಕವನ್ನು ನಾವು ಒಪ್ಪಿಕೊಳ್ಳಬೇಕು. ಒಂದು ವೇಳೆ ಮಾನ್ಯ ಮುಖ್ಯಮಂತ್ರಿಗಳಿಗೆ ಸಾಹಸವಿದ್ದರೆ, ಶಕ್ತಿ ಇದ್ದರೆ ಈಗಿರತಕ್ಕ ಮಿತಿಯೊಳಗೆ ಇನ್ನೂ ನಾಲ್ಕು ಎಕರೆಗಳನ್ನು ಕಡಿಮೆ ಮಾಡಲಿ. ನಮ್ಮ ವಾದದ ಪ್ರಕಾರ ಒಂದು ಕುಟುಂಬಕ್ಕೆ ಸಾಮಾನ್ಯವಾಗಿ ಫಲವತ್ತಾದ ಭೂಮಿ ಅಂದರೆ, 6 ಎಕರೆಗಳಾದರೂ ಇರಬೇಕು. ಅಂತಹ ಒಂದು ಸಾಹಸವನ್ನು ಮಾಡುವುದಕ್ಕೆ ನಿಜವಾಗಿಯೂ ನಮ್ಮ ಮುಖ್ಯಮಂತ್ರಿಗಳ ಕೈಲಿ ಆಗುವುದಿಲ್ಲ. ಅದಕ್ಕೆ ಬೇಕಾದಷ್ಟು ಅಡ್ಡಿ ಆತಂಕಗಳು ಬರುವುದು ಸಹಜ. ಅಂತಹ ಒಂದು ದೊಡ್ಡ ಪ್ರಯತ್ನಕ್ಕೆ ಕೈಹಾಕುವುದು ಬಹಳ ಕಷ್ಟಕರವಾದ ಕೆಲಸ. ಈ ಸಭೆಯಲ್ಲಿ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರೂ ಸಹ ಇದ್ದಾರೆ ಅವರು ಒಳ್ಳೆಯ ಸಮಾಜವಾದಿಗಳು. ಈ ಕಡೆ ಇದ್ದಾಗ ಇಂತಹ ವಿಷಯಗಳ ಬಗ್ಗೆ ಬಹಳವಾಗಿ ವಾದಮಾಡುತ್ತಿದ್ದವರು.

4-30 P.M.

ಶ್ರೀ ಎಚ್. ಡಿ. ದೇವೇಗೌಡ.—ಈಗಲೂ ಮಾನ್ಯ ಸದಸ್ಯರು ಹೇಳಿದ್ದಕ್ಕೆ ಮಾನ್ಯ ಶ್ರೀ ಕೃಷ್ಣ ಅವರು ವಿರೋಧಮಾಡುವುದಿಲ್ಲವೆಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಹೇಳಿದ ಅಭಿಪ್ರಾಯಕ್ಕೆ ಅವರು ನಿಜವಾಗಿಯೂ ವಿರೋಧಮಾಡುವುದಿಲ್ಲವೆಂದು ನನಗೆ ಭರವಸೆ ಇದೆ. ಒಂದುವೇಳೆ 4 ಲಕ್ಷ ಎಕರೆ ಹೆಚ್ಚುವರಿ ಜಮೀನು ಸಿಗುತ್ತದೆಂದರೆ, ಅದನ್ನೆಲ್ಲಾ ಹಂಚುತ್ತೇವೆಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ನನಗೆ ಅವರ ಆ ಒಂದು ಹೇಳಿಕೆಯಲ್ಲಿ ಅಸಮಾಧಾನವಿಲ್ಲ. ಈಗಿನ ವಿಧಿತ ಯಾವ ಪ್ರಮಾಣದಲ್ಲಿಯೋ ಅದು ಒಂದು ವೇಳೆ ಈ ರೀತಿಯಾಗಿ 4 ಲಕ್ಷ ಎಕರೆಗಳಷ್ಟು ಜಮೀನು ಸಿಕ್ಕಿತೆಂದರೆ, ನಿಜವಾಗಿ ಆ ಸಾಲ್ಕು ಲಕ್ಷ ಎಕರೆಯನ್ನು ಸಮರ್ಪಕವಾಗಿ ಭೂಹೀನರಿಗೇ ಅಥವಾ ಅರ್ಧ ಒಂದು, ಎರಡು ಎಕರೆಗಳನ್ನು ಇಟ್ಟುಕೊಂಡಿರುವವರಿಗೆ ಸರ್ಕಾರದವರು ಹಂಚುತ್ತಾರೆಂಬ ನಂಬಿಕೆ, ಭ್ರಮೆ ನನಗೆ ಖಂಡಿತವಾಗಿಲ್ಲ. ಈ ರೀತಿಯಾಗಿ ಹಂಚುವಾಗ ಏನಾಗುತ್ತದೆಂದರೆ, ಆಡಳಿತ ಮಾಡತಕ್ಕ ಅಧಿಕಾರಿ ಹಾಗೂ ಜಮೀನ್ದಾರ, ಇವ್ರ ಅವ ಸಮಯಾಗಿ ಹೊಂದಿಕೊಂಡು ಯಾವುದೋ ಮೂಲೆಯಲ್ಲಿರತಕ್ಕ ಜಮೀನನ್ನು ಭೂಹೀನರಿಗೆ ಕೊಡುತ್ತಾರೆ. ಆದರೆ ಹೆಚ್ಚು ಫಲವತ್ತಾಗಿರತಕ್ಕ ಕಬ್ಬು ಬೆಳೆಯುವ ಹಾಗೂ ಬತ್ತ ಬೆಳೆಯುವ ಮತ್ತು ಮಳೆಹೋದರೂ ಉತ್ತಮ ಬೆಳೆ ಬರತಕ್ಕ ಭೂಮಿ ಏನಾದರೂ ಇದ್ದರೆ ಅವನ್ನು ಹಾಗೆಯೇ ಇರಲಿ ಎಂಬುದಾಗಿ ಹೇಳುವುದೂ ಉಂಟು.

ಉಪಾಧ್ಯಕ್ಷರು,—ಅದೂ ಒಂದು ಭೂದಾನ ಯಜ್ಞವಲ್ಲವೇ !

ಶ್ರೀ ಎಚ್. ಡಿ. ದೇವೇಗೌಡ.—ಇಂತಹ ಕಾಂಪ್ಲಿಕೇಷನ್ಸ್‌ನ್ನು ಅವಾಯ್ಡ್ ಮಾಡುವುದಕ್ಕೆ ನನ್ನ ಸಲಹೆಯೇನೆಂದರೆ, ಇಷ್ಟರವರೆಗೆ ಯಾರ್ಯಾರು ಭೂಸ್ವಾಮಿಗಳಾಗಿದ್ದರೋ ಅವರೆಲ್ಲರೂ ಕೂಲಿಗಾರರಾಗಬೇಕು, ಯಾರ್ಯಾರು ಕೂಲಿಗಾರರಾಗಿದ್ದರೋ ಅವರೆಲ್ಲರೂ ಭೂಸ್ವಾಮಿಗಳಾಗ ಬೇಕೆಂಬುದಾಗಿ ಮಾಡಿಬಿಟ್ಟರೆ, ಇವೆಲ್ಲವೂ ಸರಿಹೋಗುತ್ತದೆಂದು ನನಗನ್ನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಭೂ ಪುನರ್ವಿತರಣೆಯನ್ನು ಮಾಡುವುದು ಕೇವಲ ಸಾಮಾಜಿಕ ನ್ಯಾಯದೃಷ್ಟಿಯಿಂದ. ಈಗ ಈ ಭೂಪುನರ್ವಿತರಣೆಯನ್ನು ತಗ್ಗಿಸುವ ಅಗತ್ಯವಿದೆ. ಇವತ್ತು ನಮ್ಮ ರಾಜ್ಯದಲ್ಲಿ ಕೃಷಿ ಬೇಸಾಯಗಾರರು ನುಮಾರು 16—17 ಲಕ್ಷ ಜನರಿದ್ದಾರೆ. ಅವರೆಲ್ಲರಿಗೂ ಭೂಮಿ ಕೊಡುವುದೇ ಬೇಡ. ಸರ್ಕಾರದವರು ಅವರೆಲ್ಲರಿಗೂ ಬೇರೆ ರೀತಿಯಲ್ಲಿ ಉದ್ಯೋಗಗಳನ್ನು ಒದಗಿಸುವ ಸಾಮರ್ಥ್ಯವನ್ನು ಪಡೆದಿದ್ದರೆ ಆ ವಿಷಯವನ್ನಾದರೂ ಯೋಚನೆ ಮಾಡೋಣ. ಹೀಗೆ 16—17 ಲಕ್ಷ ಜನರಿಗೆ ಮಾನ್ಯ ಕೈಗಾರಿಕೆಯ ಮಂತ್ರಿಗಳು ಕೈಗಾರಿಕಾ ಕ್ಷೇತ್ರಗಳಲ್ಲಿ ಹುದ್ದೆಗಳನ್ನು ನಿರ್ಮಾಣ ಮಾಡಿದರೆ ಸಾಕು. ಅದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗುತ್ತದೆಂಬುದು ಮಾನ್ಯ ಹಣಕಾಸಿನ ನಚಿವರಿಗೇ ಗೊತ್ತು. ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ಒಂದು ಉದ್ಯೋಗವನ್ನು ಸೃಷ್ಟಿಸಿ ಮಾಡಬೇಕಾದರೆ ಅವಕ್ಕೆಷ್ಟು ಬಂಡವಾಳವನ್ನು ತೊಡಗಿಸಬೇಕೆಂಬುದನ್ನು ತಾವೇ ಊಹಿಸಬಹುದು. ಆದ್ದರಿಂದ ಈಗ ಎಷ್ಟು ಜನರು ಕೃಷಿ ಕಾರ್ಮಿಕರು ಇದ್ದಾರೆಯೋ ಅವರೆಲ್ಲರಿಗೂ ಭೂಸ್ವಾಮಿಗಳ ಭೂಮಿಯನ್ನು ಪಾತ್ರ ಹಂಚಿ. ಆದರೆ ಸರ್ಕಾರದ ಭೂಮಿಯನ್ನು ಮಾತ್ರ ಹಾಗೆಯೇ ಇಟ್ಟುಕೊಂಡಿರೋಣವೆಂದರೆ ಆಗಾಗದು. ಆ ರೀತಿಯಾಗಿ ತಾವು ಏಂದಿಗೂ ತಿಳಿಯಬೇಡಿ. ಈಗ ಕೃಷಿ ಕಾರ್ಮಿಕರು ಇದ್ದಾರೋ ಅವರಿಗೇ ಭೂಮಿಯನ್ನು ಹಂಚುವ ಕೆಲಸವಾಗಬೇಕು. ಏಕೆಂದರೆ ಅವರು ಒಳ್ಳೆಯ ಉತ್ತಮ ಜೀವನವನ್ನು ಸೌಂದರ್ಯವಾಗಿ ನಡೆಸುವುದಕ್ಕೆ ಆಗದಿದ್ದರೂ ಕೊನೆಯ ಪಕ್ಷ ಕನಿಷ್ಟ ಜೀವನವನ್ನಾದರೂ ನಡೆಸುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಬಹು ಮುಖ್ಯವಾಗಿ ಸಾಮಾಜಿಕ ನ್ಯಾಯ ಪರಿಸ್ಥಿತಿ ಅವರಲ್ಲಿ ಉಂಟಾಗಬೇಕು. ಅಂದಮೇಲೆ ಇದರ ಬಗ್ಗೆ ಇಷ್ಟು ಗೊಂದಲಗಳು, ಘೋಷಣೆಗಳೇತಕ್ಕೆಬೇಕೆಂಬ ನಾನು ಮಾನ್ಯ ಶ್ರೀ ದೇವೇಗೌಡರನ್ನು ಪ್ರಶ್ನೆ ಮಾಡುತ್ತೇನೆ. ಒಂದು ವೇಳೆ ಇವ್ಯಾವುದೂ ಬೇಡ, ಭೂಮಿ ಬೇಡವೆಂದು ಹೇಳುವುದಾದರೆ ನಾನು ಒಂದು ಸಲಹೆ ಮಾಡುತ್ತೇನೆ. ನಮ್ಮ ಕೂಲಿಗಾರರು ಎಷ್ಟು ಮಂದಿ ಇದ್ದಾರೆಯೋ ಅವರೆಲ್ಲರಿಗೂ 200 ರೂಪಾಯಿಗಳಷ್ಟು ನಂಬಳ ಬರತಕ್ಕ ಒಂದು ನೌಕರಿಯನ್ನಾದರೂ ಕೊಡಿ. ಸಾಕು.

ಶ್ರೀ ಕೆ. ಎನ್. ವೀರಪ್ಪಗೌಡ.—ಮುಂದೆ ಆ ದಾರಿಯೇ ಹಿಡಿಯಿರಿ, ಅವರಿಗೂ ನಮಗೂ ಈ ಭೂಮಿಯ ವಿಷಯವೇ ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ಈ ಸರ್ಕಾರ ತಿಂಗಳಿಗೆ 200 ರೂಪಾಯಿಗಳಷ್ಟು ನಂಬಳ ಬರತಕ್ಕ ಹುದ್ದೆಗಳನ್ನು ಕೊಡಲಿ, ಸಾಕು ಎಂಬುದಾಗಿ ಮಾನ್ಯ ಸ್ನೇಹಿತರು ಹೇಳಿದರು. ಆದರೆ

ನನಗೊಂದು ಆಶ್ವಾಸನೆಯನ್ನು ಈ ಸರ್ಕಾರ ಈಗ ಕೊಡಲಿ. ನಾನು ಹೇಳುವುದಿಷ್ಟೆ ನನ್ನ ಮನೆಯಲ್ಲಿ ಈಗ 40 ಜನರಿದ್ದಾರೆ. ಅವರೆಲ್ಲರಿಗೂ ತಿಂಗಳಿಗೆ 50 ರೂಪಾಯಿಗಳ ವರಮಾನವಿರುವಷ್ಟು ಕೆಲಸ ಕೊಟ್ಟರೆ ಸಾಕು. ಬೇಕಾದರೆ ಸೆಕ್ರೆಟೇರಿಯಟ್‌ನಲ್ಲಿ ಗುಡಿಸುವ ಕೆಲಸ ಕೊಟ್ಟರೆ ಪರವಾಗಿಲ್ಲ ನಾನು ವಿರೋಧ ಪಕ್ಷದ ನಾಯಕನಾದರೂ ನನ್ನ ತಂದೆ, ತಾಯಿಗಳೂ ಸಹ ಬೇಕಾದರೆ ಆ ಕೆಲಸ ಮಾಡುತ್ತಾರೆ. ನಮ್ಮ ಭೂಮಿಯನ್ನೆಲ್ಲಾ ಸರ್ಕಾರವೇ ತೆಗೆದುಕೊಳ್ಳಲಿ. ಅವರಿಗೆಲ್ಲರಿಗೂ 50 ರೂಪಾಯಿಗಳಷ್ಟು ಸಂಬಳ ಬರುವಂತಹ ಹುದ್ದೆಗಳನ್ನು ಕೊಟ್ಟರೆ, ನನಗೆ ಇರತಕ್ಕ 40 ಎಕರೆ ಭೂಮಿಯನ್ನೆಲ್ಲಾ ಸರ್ಕಾರಕ್ಕೆ ನಾನು ಕೊಡುತ್ತೇನೆ. ಅಂತಹ ಒಂದು ಆಶ್ವಾಸನೆಯನ್ನು ಈ ಸರ್ಕಾರ ಕೊಟ್ಟರೆ, ನಾನು ಈ ಸರ್ಕಾರಕ್ಕೆ ಋಣಿಯಾಗಿ ಇರುತ್ತೇನೆ. ಮಾನ್ಯ ಸದಸ್ಯರಿಗೂ ಋಣಿಯಾಗಿರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಶ್ರೀ ದೇವೇಗೌಡರು ಹೇಳಿದ ಮಾತನ್ನು ನಮ್ಮ ಪಕ್ಷ ಅಧಿಕಾರಕ್ಕೆ ಬಂದಾಗ ಮಾಡೋಣ, ನಾನು ಹೇಳುವುದಿಷ್ಟೆ. ಸಾಮಾಜಿಕ ನ್ಯಾಯದೃಷ್ಟಿಯಿಂದ ಈಗ ಭೂ ಪರಿಮಿತಿಯನ್ನು ತಗ್ಗಿಸಬೇಕು. ಹೆಚ್ಚುವರಿ ಭೂಮಿಯನ್ನು ಕೃಷಿ ಕಾರ್ಮಿಕರಿಗೇ ಹಂಚಬೇಕು. ಈ ಮಾತನ್ನು ಯಾವ ಕಾರಣದಿಂದ ಹೇಳುತ್ತೇನೆಂದರೆ, ನಮ್ಮ ರಾಜ್ಯದಲ್ಲಿ ಇದುವರೆಗೂ ಈ ದೇಶದ ಸಂಪತ್ತು ಮತ್ತು ಆದಾಯವನ್ನು ವ್ಯಾಪಕವಾಗಿ ನಿರ್ಮಾಣ ಮಾಡುವುದರಲ್ಲಿ ನಮ್ಮ ಸರ್ಕಾರ ತೊಡಗಿಸಿಲ್ಲ. ಇಪತ್ತಿನ ಪರಿಸ್ಥಿತಿಯಲ್ಲಿ ಬಿದ್ದೋಗ್ಗೀಕರಣ ಹೆಚ್ಚುಮಾಡಿ ಕೃಷಿಕಾರ್ಮಿಕರಿಗೂ ಸಹ ಉದ್ಯೋಗಗಳನ್ನು ಕೊಡಿಸುವ ಶಕ್ತಿ ಈ ಹೊಸ ಸರ್ಕಾರಕ್ಕೆ ಇಲ್ಲವೆಂದು ನಾನು ಹೇಳಬೇಕಾಗಿದೆ. ಈಗಿನ ಒಂದು ಪರಿಸ್ಥಿತಿಯಲ್ಲಿ ಇದರ ಬಗ್ಗೆ ಸರ್ಕಾರದ ನಿಲುವಿನ ಬಗ್ಗೆ ನನಗೆ ಯಾವ ನಂಬಿಕೆಯೂ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸದಸ್ಯರು ಹೇಳುತ್ತಿರುವ ಹಾಗೆ, ರೈತ ಕಾರ್ಮಿಕನಿಗೆ ಕೇವಲ 200 ರೂಪಾಯಿಗಳನ್ನು ಕೊಡುವ ಹಾಗೆ ಮಾಡಿದರೆ, ಐದಾರು ಸಾವಿರ ರೂಪಾಯಿಗಳಷ್ಟು ಪ್ರತಿ ತಿಂಗಳೂ ಸಂಪಾದಿಸುವವರ ಬಗ್ಗೆ ಮಾನ್ಯ ಸದಸ್ಯರು ಏನು ಹೇಳುತ್ತಾರೋ ಗೊತ್ತಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಈ ಮಸೂದೆಯ ಬಗ್ಗೆ ವಿರೋಧಪಕ್ಷದವರಲ್ಲಿಯೇ ಚರ್ಚೆ ನಡೆಯುತ್ತಿದೆ. ಅವರವರಲ್ಲಿಯೇ ಉತ್ತರಗಳನ್ನು ಕೊಡುತ್ತಾ ಹೋದರೆ, ನಾವೇನು ಅದರ ಬಗ್ಗೆ ಹೇಳುವುದು ಬೇಡವೇ ?

ಶ್ರೀ ಕಾಗೋಡು ತಿಮ್ಮಪ್ಪ.—ನನಗೆ ಈ ಸಂದರ್ಭದಲ್ಲಿ ಅಭಿಮನ್ಯುವಿನ ಕಥೆ ಜ್ಞಾಪಕಕ್ಕೆ ಬರುತ್ತಿದೆ. ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಿದಂತೆ ನಾವು ಈಗ ಇದರಲ್ಲಿ ಪಾರಾಗಿ ಈಜಬೇಕು. ನಮಗೆ ಸಹಕಾರ ಕೊಡಿ. ನಾವು ಆ ಕೋಟೆಯ ಮಧ್ಯದಲ್ಲಿದ್ದಂತಿದೆ. ಮುಖ್ಯವಾಗಿ ಸಾಮಾಜಿಕ ನ್ಯಾಯದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಲೋಚನೆ ಮಾಡಬೇಕೆಂಬುದೇ ಇಪತ್ತು ನಮ್ಮ ಮುಂದಿರುವ ಪ್ರಶ್ನೆ. ಈಗ ಭೂಮಿತಿಯನ್ನು ತಗ್ಗಿಸಬೇಕು. ಸರ್ಕಾರದವರು ಹೇಳಿರುವ ಪ್ರಕಾರ 4 ಲಕ್ಷ ಎಕರೆ ಜಮೀನಿನಲ್ಲಿ ಎಷ್ಟು ಜಮೀನನ್ನು ಹಂಚಲು ಸಿಗುತ್ತದೆಂಬುದು ಮುಖ್ಯ. ಈಗ ಸಾಗುವಳಿಗೆ ಯೋಗ್ಯವಾದ ಜಮೀನನ್ನು ವಿತರಣೆ ಮಾತ್ರವುದಕ್ಕೆ ಒಂದು ಕೋಟಿ ಇಪ್ಪತ್ತು ಲಕ್ಷ ಎಕರೆ ಸರ್ಕಾರದ ಜಮೀನು ಇದೆ. ಅದನ್ನು ಸೀರಿಸಿ ಭೂಹೀನರಿಗೆ ಭೂಮಿಯನ್ನು ಹಂಚಿಕೆಕ್ಕ ಕಾರ್ಯವನ್ನು ಏಕಕಾಲದಲ್ಲಿ ಮಾಡಬೇಕು. ಭೂಕ್ರಾಂತಿಯಿಂದ ತೆಗೆದುಕೊಂಡ ಭೂಮಿಯಲ್ಲದೆ ಸರ್ಕಾರದ ವಶದಲ್ಲಿ ಬೇರೆ ಭೂಮಿಯನ್ನು ಸಹ ಭೂಮಿ ಇಲ್ಲದವರಿಗೆ ಹಂಚಬೇಕೆಂಬುದೇ ನಮ್ಮ ವಾದ. ಆದ್ದರಿಂದ ಈ ಒಂದು ಕೆಲಸವನ್ನು ಸರ್ಕಾರದವರು ಎಷ್ಟು ಮಟ್ಟಿಗೆ ಯಶಸ್ವಿಯಾಗಿ ಮಾಡುತ್ತಾರೆಂಬುದನ್ನು ರಜತ ಪರದೆಯ ಮೇಲೆ ನೋಡಬೇಕಾಗುತ್ತದೆ. ಅದಲ್ಲದೆ ಈ ಕೆಲಸದಲ್ಲಿ ಸರ್ಕಾರ ಯಶಸ್ವಿಯಾಗಲಿ ಎಂಬುದೇ ನಮ್ಮ ಹಾರೈಕೆ. ಇದನ್ನು ಮಾಡುವ ಗ ಇನ್ನೊಂದು ದೊಡ್ಡ ಅಪಾಯದ ಕೆಲಸವೆಂದರೆ, ಕಾಫೀ ತೋಟಗಳಿಗೆ ವಿನಾಯಿತಿ ಕೊಟ್ಟಿರತಕ್ಕದ್ದು. ಈ ಕಾಫೀ ತೋಟಗಳು ಕೈಗಾರಿಕಾ ಕ್ಷೇತ್ರ ಎನ್ನತಕ್ಕಂತಹ ಒಂದು ವ್ಯಾಖ್ಯಾನವನ್ನು ಮೊದಲೆ ನಿಂದಲೂ ಮಾಡುತ್ತಾ ಬಂದಿದ್ದಾರೆ. ಇಪ್ಪತ್ತಿನ ದಿವಸ ಕಾಫೀ ತೋಟದ ಕೃಷಿಗೂ, ಅಡಿಕೆ ತೋಟದ ಕೃಷಿಗೂ ವ್ಯತ್ಯಾಸವೇನೂ ಇಲ್ಲ. ಆದರೆ ಈ ಕಾಫೀ ತೋಟಗಳನ್ನು ಹಿಂದೆ ಬ್ರಿಟೀಷರ ಕಾಲದಿಂದಲೂ ಒಂದು ಕೈಗಾರಿಕಾ ಕ್ಷೇತ್ರವೆಂದು ಪರಿಗಣಿಸುತ್ತಾ ಬಂದಿದ್ದಾರೆ. ಆದರೆ ನೀವು ಸಹ ಈಗ ಈ ರೀತಿ ಆದನ್ನು ಕಾನೂನಿಂದ ಹೊರತುಪಡಿಸಿರತಕ್ಕಂಥದ್ದು ಯೋಗ್ಯವಾದುದಲ್ಲ. ಸಮಾಜವಾದಿಗಳು ಎಂದು ಹೇಳಿಕೊಳ್ಳತಕ್ಕಂತಹ ನೀವು ಈ ಕಾಫಿ ತೋಟಗಳಿಗೆ, ಟೀ ತೋಟಗಳಿಗೆ ವಿನಾಯಿತಿ ಕೊಟ್ಟಿರತಕ್ಕದ್ದು ನ್ಯಾಯವಾದುದಲ್ಲ ಮತ್ತು ಇದರಿಂದ ನೀವು ಒಂದು ಮೋಸ ಮಾಡಿದ ಹಾಗೆ ಆಗಿದೆ ಎಂದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ನಮ್ಮ ರಾಜ್ಯದಲ್ಲಿ ಕಾಫಿ ತೋಟಗಳನ್ನು

(ಶ್ರೀ ಕಾಗೋಡು ತಿಮ್ಮಪ್ಪ)

ಹೊಂದಿರತಕ್ಕಂತಹ ಜನರು ಸುಮಾರು 41 ಸಾವಿರದ 500 ಇದ್ದಾರೆ. ಇದರಲ್ಲಿ 25 ಎಕರೆಗಿಂತ ಕಡಿಮೆ ತೋಟವುಳ್ಳವರು ಸುಮಾರು 40 ಸಾವಿರ ಜನರು. ಉಳಿದ 1500 ಜನರಲ್ಲಿ 25 ಎಕರೆಗಿಂತ ಜಾಸ್ತಿ ತೋಟ ಇದೆ. ಅಂದರೆ 40 ಸಾವಿರ ಜನರಲ್ಲಿ ಸುಮಾರು ಒಂದು ಲಕ್ಷದ 30 ಸಾವಿರ ಎಕರೆ ತೋಟಗಳಿವೆ. ಆದರೆ ಉಳಿದ 1500 ಜನರಲ್ಲಿ ಒಂದು ಲಕ್ಷದ 60 ಸಾವಿರ ಎಕರೆ ಕಾಫಿ ತೋಟಗಳಿವೆ. ಆದ್ದರಿಂದ ನೀವು ಈ ಕಾನೂನನ್ನು ಕಾಫಿ ತೋಟಗಳಿಗೆ ವಿಸ್ತರಿಸುವುದರಿಂದ ಅದರ ಪರಿಣಾಮ 1500 ಜನರಿಗೆ ಮಾತ್ರ ಆಗುತ್ತದೆ. ಅದರಲ್ಲಿಯೂ 1000 ಜನ ಹೊರಟು ಹೋಗುತ್ತದೆ. ಕೇವಲ 500 ಜನರು ಮಾತ್ರ ಉಳಿಯುತ್ತಾರೆ. ಆದ್ದರಿಂದ ಈ ಕಾಫಿ ತೋಟಗಳಿಗೆ ಭೂಸುಧಾರಣೆಯನ್ನು ವಿಸ್ತರಿಸುವುದರಿಂದ ಕೇವಲ 500 ಜನರಿಗೆ ಮಾತ್ರ ಬಾಧಕವಾಗುತ್ತದೆ ಎನಹ ಉಳಿದ 41 ಸಾವಿರ ಜನರಿಗೆ ಏನೂ ತೊಂದರೆಯಾಗುವುದಿಲ್ಲ. ಆದರೆ ಈ 500 ಜನರ ಹೆದರಿಕೆ ಯಾವಾಗಲೂ ಸರ್ಕಾರಕ್ಕೆ ಇದ್ದೇ ಇದೆ, ಯಾರು ಈ 500 ಜನ? ಇಪ್ಪೊತ್ತಿನ ದಿವಸ ಈ 500 ಜನ ಏನಿದ್ದಾರೆ, ಅವರ ಕೈಯಲ್ಲಿ ಸ್ಥಳೀಯಸಂಸ್ಥೆಗಳಿವೆ, ಮತ್ತು ರಾಜಕೀಯ ಮುಖಂಡತ್ವ ಇದೆ. ಅವರಿಗೆ ರಾಜ್ಯದ ಮುಖಂಡತ್ವದ ಮೇಲೆಯೂ ಪ್ರಬಲವಾದ ಪ್ರಭಾವವನ್ನು ಬೀರತಕ್ಕ ತಕ್ತಿ ಇದೆ. ಇಂತಹ ಜನರು ಈ ಕಾನೂನಿನಲ್ಲಿ ವಿನಾಯಿತಿಯನ್ನು ಕೊಡಬೇಕೆಂದು ಹೇಳಿ ಎಲ್ಲಾ ಪ್ರಯತ್ನಗಳನ್ನು ಪರದೆಯ ಹಿಂಬದಿಯಲ್ಲಿ ನಿಂತುಕೊಂಡು ಮಾಡುತ್ತಿದ್ದಾರೆ. ಅವರ ಪ್ರಯತ್ನ ಇಂದು ಫಲಸಿದೆ. ಆದ್ದರಿಂದ ಈ 500 ಜನ ಕಾಫಿ ತೋಟದ ಮಾಲೀಕರು ಸರ್ಕಾರದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ್ದಾರೆ. ಅದರ ಪರಿಣಾಮವಾಗಿ ಭೂಸುಧಾರಣಾ ಕಾನೂನಿಂದ ಕಾಫಿ ತೋಟಗಳನ್ನು ಹೊರತುಪಡಿಸಿದ್ದಾರೆ. ಅಷ್ಟೇ ಅಲ್ಲದೆ ಈಗ ತೆಂಗಿನ ತೋಟವನ್ನು ಸಹ ಇದರಿಂದ ಹೊರಗೆ ನಿಲ್ಲಿಸಿದ್ದಾರೆ. ಇಪ್ಪೊತ್ತಿನ ದಿವಸ ಭೂಸುಧಾರಣಾ ಕಾನೂನನ್ನು ಚರ್ಚೆ ಮಾಡುವಾಗ ಕೆಲವರಿಗೆ ನಮ್ಮ ಜಮೀನು ಎಷ್ಟು ಹೋಗುತ್ತದೆ, ಎಂಬ ಒಂದು ಹೆದರಿಕೆ ಉಂಟಾಗಿದೆ. ಇದನ್ನು ಸಮಗ್ರವಾಗಿ ವಿಚಾರ ಮಾಡಿದ್ದಾದರೆ ಈ ಒಂದು ತೊಂದರೆ ತಾತ್ಪರ್ಯಗಳು ಬರುತ್ತಿರಲಿಲ್ಲ. ಇಪ್ಪೊತ್ತಿನ ದಿವಸ ರಾಷ್ಟ್ರದಲ್ಲಿ ಒಂದು ಸ್ವಾರ್ಥ ಮನೋವೃತ್ತಿ ಬೆಳೆದು ಬಂದಿದೆ. ಆ ಕಾರಣದಿಂದ ಕಳೆದ 25 ವರ್ಷಗಳಿಂದಲೂ ಈ ಕಾನೂನು ಜಾರಿಯಲ್ಲಿ ಬಾರದೆ ಹಾಗೆಯೇ ಇದ್ದುಕೊಂಡು ಮುಂದೆ ದೂಡುತ್ತಾ ದೂಡುತ್ತಾ ಇವತ್ತು ದೇವರಾಜ ಅರಸರ ಕಾಲ ಬುಡಕ್ಕೆ ಬಂದಿದೆ. ಮುಂದಿನ ವಿಚಾರವನ್ನು ನಾವು ಪರದೆಯ ಮೇಲೆ ಕಾದು ನೋಡಬೇಕಾಗಿದೆ. ಆದ್ದರಿಂದ ಇವತ್ತು ಕಾಫಿ ತೋಟಗಳಿಗೆ ವಿನಾಯಿತಿ ಕೊಡುವುದಕ್ಕೆ ಯಾವ ಕಾರಣವೂ ಇಲ್ಲ. ಮತ್ತು ಕಾಫಿ ತೋಟಗಳನ್ನು ಇದರಲ್ಲಿ ಸೇರಿಸುವಂತೆ ತಿದ್ದುಪಡಿ ಮಾಡಬೇಕೆಂದು ನೂಚಿಸುತ್ತೇನೆ. ಇಲ್ಲದಿದ್ದರೆ ಇವರಿಗೆ ಖಂಡಿತವಾಗಿಯೂ ನಮಾಜವಾದವನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ನಮಗೆ ನಿಜವಾಗಿಯೂ ನಮಾಜವಾದದಲ್ಲಿ ಸ್ವಲ್ಪವಾದರೂ ಶ್ರದ್ಧಾಣಿಕತನ ಇದ್ದರೆ, ಕಾಫಿ ತೋಟಗಳನ್ನು ಸಹ ಭೂಸುಧಾರಣಾ ಕಾನೂನಿನಲ್ಲಿ ಒಳಪಡುವಂತೆ ಸೇರಿಸಬೇಕೆಂದು ಆಗ್ರಹಪೂರ್ವಕವಾಗಿ ಒತ್ತಾಯ ಪಡಿಸುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಇಲ್ಲಿ ಭೂಸುಧಾರಣಾ ಕಾನೂನಿನಲ್ಲಿ ಮಿತಿಯನ್ನು ಹಾಕುವುದರಿಂದ ಕೆಲವು ಜನಾಂಗದವರನ್ನು ತುಳಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಕೆಲವರು ವಾದ ಮಾಡುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಹೆಚ್ಚಾಗಿ ಭೂಮಿ ಇರತಕ್ಕದ್ದು 2-3 ಜನಾಂಗದವರಲ್ಲಿ ಮಾತ್ರ. ಅಂದರೆ, ವಕ್ಕಲಿಗರು, ಲಿಂಗಾಯಿತರು ಮತ್ತು ಬ್ರಾಹ್ಮಣರು. ಇದರಿಂದಾಗಿ ಹಳ್ಳಿಗಳಲ್ಲಿ ಕೆಲವು ಮಹನೀಯರು "ನೋಡಿದೆಯೂ, ಇವರು ಭೂಮಿತಿಯನ್ನು ತಂದು ನಮ್ಮ ಜನಾಂಗದವರನ್ನು ತುಳಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ." ಎಂದು ಹೇಳುತ್ತಿದ್ದಾರೆ. ಈ ರೀತಿ ಹೇಳುವುದರಿಂದ ಉಳಿದ ಜನರಲ್ಲಿಯೂ ಒಂದು ರೀತಿಯ ಕೆಟ್ಟ ಭಾವನೆ ಬೆಳೆದು ಬರುತ್ತದೆ. ನಾನಾದರೂ ಹೇಳುತ್ತೇನೆ— ಈ ವಾದ ಅನಾವಶ್ಯಕವಾದ ವಾದ. ಈ ಜನಾಂಗದ ಜನ ಸಂಖ್ಯೆ ಶೇಕಡಾ 35—40 ಪರ್‌ಸೆಂಟ್ ಇರಬಹುದು. ಇದರಲ್ಲಿ ಶೇಕಡಾ 2ರಷ್ಟು ಜನರಿಗೆ ಈ ಭೂಮಿತಿಯು ತಗಲಬಹುದು.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಹೇಳಿದ ಹಾಗೆ ಇದುವರೆಗೂ ಭೂಸುಧಾರಣಾ ಕಾನೂನನ್ನು ವಿರೋಧ ಮಾಡಿದವರ ಪೈಕಿ ಯಾರೂ ಈ ವಾದವನ್ನು ಇಟ್ಟಿಲ್ಲ. ಹಾಗಿರುವಾಗ ಅಂಥ ವಾದ ಇಲ್ಲದೆಯೇ ಮಾನ್ಯ ಸದಸ್ಯರು ಮೊದಲೇ ಕ್ಲಿಷ್ಟಕರವಾದ ಈ ಸಮಸ್ಯೆಗೆ ಪುನಃ ಈ ವಾದದ ಇಂಜೆಕ್ಷನ್ ಕೊಟ್ಟು ಅದನ್ನು ಬೆಗಡಾಯಿಸುವುದಕ್ಕೆ ಅವಕಾಶ ಕೊಡುವುದು ಅಷ್ಟು ಸೂಕ್ತವಲ್ಲ

ವೆಂದು ಕಾಣುತ್ತದೆ. ತಾವು ಅದನ್ನು ಒಪ್ಪುತ್ತೀರೆಂದು ತಿಳಿಯುತ್ತೇನೆ. ಆದ್ದರಿಂದ ಅದನ್ನು ಅಲ್ಲೇ ಬಡುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಕೆಲವು ಜನಾಂಗದ ಜನರನ್ನು ತುಳಿಯುವುದಕ್ಕೆ ಪ್ರಯತ್ನ ಮಾಡ ತ್ತಿದ್ದಾರೆ ಎನ್ನುವ ಪಾದ ಇದೆ. ಹಳ್ಳಿಯೊಳಗೆ ಮುಖಂಡರಾಗಿರುವವರು ಈ ರೀತಿ ಪ್ರಚಾರ ಮಾಡಿದರೆ ಅಷ್ಟೇ ಸಾಕ್ಕಾಗುತ್ತದೆ. ''ನೋಡಿದೆಯೋ, ನಮ್ಮ ಜನಾಂಗವನ್ನು ತುಳಿಯುವುದಕ್ಕೆ ಈ ಕಾನೂನನ್ನು ತಂದಿದ್ದಾರೆ'' ಎಂದು ಹೇಳುವುದಕ್ಕೆ ಅವಕಾಶ ಇದೆ. ಆ ಮೇಲೆ ತೆಂಗಿನ ತೋಟವನ್ನು ಬಹಳ ಜಾಗರೂಕತೆಯಿಂದ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈ ವಿಧೇಯಕವನ್ನು ಮಂಡಿಸುವಾಗ ಮತ್ತು ಪ್ರಸ್ತಾಪ ಮಾಡುವಾಗ ಕೆಲವರ ಸ್ವಾರ್ಥಸಾಧನೆಯ ಪ್ರಯತ್ನದಿಂದ, ಅದರ ಪರಿಣಾಮವಾಗಿ ತೆಂಗಿನ ತೋಟವನ್ನು 7ನೇ ತರಗತಿಯಲ್ಲಿ ಸೇರಿಸಿದ್ದಾರೆ. ತೆಂಗಿನ ತೋಟ ಸಾಕಷ್ಟು ಪ್ರಮಾಣದಲ್ಲಿ ವರಮಾನ ಬರತಕ್ಕ ಜಮೀನು. ಅದು ಅಡಿಕೆ ತೋಟಕ್ಕಿಂತಲೂ ಯಾವ ರೀತಿಯಿಂದಲೂ ಹಿಂದುಳಿದಿಲ್ಲ. ಆದ್ದರಿಂದ ತೆಂಗಿನ ತೋಟವನ್ನು ಸಮಾನವಾದ ಕ್ಷೇತ್ರದಲ್ಲಿ ಕಾನೂನಿನಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು. ಎರಡು ಫಸಲನ್ನು ಕೊಡತಕ್ಕ ಒಂದು ಎಕರೆ ನೀರಾವರಿ ಜಮೀನಿನಲ್ಲಿ ಕನಿಷ್ಟ ಅದರಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ ಅಷ್ಟೇ ಉತ್ಪತ್ತಿ ಒಂದೂವರೆ ಎಕರೆ ಅಥವಾ ಎರಡು ಎಕರೆ ತೆಂಗಿನ ತೋಟದಲ್ಲಿ ಬರುವುದಕ್ಕೆ ಸಾಧ್ಯವಿದೆ. ಇದನ್ನು ಸಮಾನ ಮಾಡಬೇಕಾಗಿದ್ದರೆ ಇದಕ್ಕೆ ತಜ್ಞರನ್ನು ನೇಮಿಸಿ ಅದರ ಉತ್ಪತ್ತಿ ಎಕರೆಗೆ ಎಷ್ಟು ಇದರ ಉತ್ಪತ್ತಿ ಎಕರೆಗೆ ಎಷ್ಟು ಎಂಬುದನ್ನು ಕಂಡುಹಿಡಿದು ಎರಡು ಫಸಲನ್ನು ಕೊಡತಕ್ಕ ಒಂದು ಎಕರೆ ನೀರಾವರಿ ಜಮೀನಿಗೆ ಎಷ್ಟು ಎಕರೆ ತೆಂಗಿನ ತೋಟ ಸಮ ಎಂದು ವೈಜ್ಞಾನಿಕವಾಗಿ ನೋಡಬೇಕೆಂದು ನಾನು ಹೇಳುತ್ತೇನೆ.

ಅಡಿಕೆ ತೋಟಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಒಂದು ಎಕರೆ ನೀರಾವರಿ ಜಮೀನಿನಲ್ಲಿ ಕನಿಷ್ಟ ಎರಡು ಸಾವಿರರೂಪಾಯಿಗಳ ಉತ್ಪತ್ತಿಯನ್ನು ತೆಗೆಯುವುದಕ್ಕೆ ಸಾಧ್ಯ. ಆದರೆ ಇವೊತ್ತು ಒಂದು ಎಕರೆ ಅಡಿಕೆ ತೋಟದಲ್ಲಿ 3 ಸಾವಿರ ರೂಪಾಯಿಗಳನ್ನು ತೆಗೆಯುವುದಕ್ಕೆ ಸಾಧ್ಯವಿದೆ. ಇವೊತ್ತು ಅದರ ದರ ಕುಸಿದಿದೆ. ಹಿಂದೆ ಒಂದು ಎಕರೆ ಅಡಿಕೆ ತೋಟದಲ್ಲಿ 3 ಸಾವಿರ ರೂಪಾಯಿಗಳಿಂದ 6 ಸಾವಿರ ರೂಪಾಯಿಗಳವರೆಗೂ ಉತ್ಪತ್ತಿಯನ್ನು ತೆಗೆಯತಕ್ಕಂಥಾ ನಂದರ್ಭ ಇತ್ತು. ಇವೊತ್ತು ಅದರ ಬೆಲೆ ಕುಸಿದಿದೆ. ಏನೇ ಆವರೂ ಒಂದು ಎಕರೆ ಅಡಿಕೆ ತೋಟದಲ್ಲಿ ಕನಿಷ್ಟ 3 ಸಾವಿರ ರೂಪಾಯಿಗಳನ್ನು ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಿದೆ ಎಂದು ಇಟ್ಟುಕೊಂಡರೆ ಅಡಿಕೆ ತೋಟವನ್ನು ಯಾವ ಸ್ಥಾನದಲ್ಲಿಡಬೇಕೆಂಬುದನ್ನು ನಿರ್ಧಾರ ಮಾಡಬೇಕು.

ಎರಡು ಫಸಲನ್ನು ಕೊಡತಕ್ಕಂಥಾ ಒಂದು ಎಕರೆ ನೀರಾವರಿ ಜಮೀನಿಗೆ 2.5 ಎಕರೆ ಮಳೆ ತರಿ ಜಮೀನನ್ನು ಸಮಾನ ಮಾಡಿದ್ದಾರೆ. ಇದು ಸರಿಯಲ್ಲ. ಇದನ್ನು ಕ್ರಮಬದ್ಧವಾಗಿ ಶಾಸ್ತ್ರೀಯವಾಗಿ ನಿರ್ಧರಿಸಬೇಕು. ಒಂದು ಎಕರೆ ನೀರಾವರಿ ಜಮೀನಿಗೆ ಎಷ್ಟು ಎಕರೆ ಅಡಿಕೆ ತೋಟವಾಗಲೀ ಕಾಷೀ ತೋಟವಾಗಲೀ ಸಮ ಎಂಬುದನ್ನು ಉತ್ಪತ್ತಿಯ ಆಧಾರದ ಮೇಲೆ ನಿರ್ಧಾರ ಮಾಡುವುದಕ್ಕೆ ಇದನ್ನು ಪುನರ್‌ಪರಿಶೀಲನೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಏತಕ್ಕೆಂದರೆ ಈಗ ಒಬ್ಬ ರೈತ 10 ಎಕರೆ ಅಡಿಕೆ ತೋಟವನ್ನು ಇಟ್ಟುಕೊಂಡರೆ ಅವನು ಭೂಪರಿಮಿತಿಯ ಪ್ರಕಾರ ಸಿಕ್ಕುವುದಿಲ್ಲ. 10 ಎಕರೆ ಹಾಗೆಯೇ ಉಳಿದುಕೊಳ್ಳುತ್ತೆ. ಅದರ ಜೊತೆಗೆ ಅವನು ಮೊದಲನೆಯ ದರ್ಜೆಯ 10 ಎಕರೆ ನೀರಾವರಿ ಜಮೀನನ್ನು ಇಟ್ಟುಕೊಳ್ಳಬಹುದು. 5 ಎಕರೆ ಮಳೆ ತರಿ ಜಮೀನನ್ನೂ ಇಟ್ಟುಕೊಳ್ಳಬಹುದು. ಆದ್ದರಿಂದ ಒಂದು ಎಕರೆ ಮೊದಲನೇ ದರ್ಜೆಯ ಜಮೀನಿಗೆ ಅಡಿಕೆ ತೋಟ ಎಷ್ಟು ಎಕರೆ ಸಮ ಎಂಬುದನ್ನು ನಿರ್ಧಾರ ಮಾಡಬೇಕು. ಆಗ ತರಿ ಜಮೀನು ಹೆಚ್ಚುವರಿ ಜಮೀನು ಸಿಕ್ಕುತ್ತದೆ. ಅದನ್ನು ರೈತರಿಗೆ ಹಂಚುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಅವನು ತರೀ ಜಮೀನನ್ನು ಇಟ್ಟುಕೊಳ್ಳುತ್ತಾನೆ, ಅಡಿಕೆ ತೋಟವನ್ನೂ ಇಟ್ಟುಕೊಳ್ಳುತ್ತಾನೆ. ಈ ದೃಷ್ಟಿಯಿಂದ ಅಡಿಕೆ ತೋಟವನ್ನು ಮೊದಲನೇ ದರ್ಜೆಯಲ್ಲಿ ಸೇರಿಸುವುದಕ್ಕೆ ಅದನ್ನು ಕ್ಲಾಸಿಫಿಕೇಷನ್ ಮಾಡುವುದಕ್ಕೆ ಪುನರ್‌ಪರಿಶೀಲನೆ ಮಾಡಬೇಕು. ಇದರ ಜೊತೆಗೆ ಮಳೆ ತರೀ ಜಮೀನಿನ ಬಗ್ಗೆ ಸರಿಯಾಗಿ ಕ್ಲಾಸಿಫಿಕೇಷನ್ ಮಾಡಿಲ್ಲ. ಎರಡು ಫಸಲು ತೆಗೆಯತಕ್ಕ ಒಂದು ಎಕರೆ ನೀರಾವರಿ ಜಮೀನಿನಲ್ಲಿ ಎರಡು ಸಾವಿರ ರೂಪಾಯಿಗಳ ಉತ್ಪತ್ತಿಯನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಒಂದು ಎಕರೆ ನೀರಾವರಿಗೆ ಎಷ್ಟು ಎಕರೆ ಮಳೆ ತರಿ ಸಮ ಎಂಬುದನ್ನು ನಿರ್ಧಾರ ಮಾಡಬೇಕು. ನೀರಾವರಿ ತರಿ ಜಮೀನಿನಲ್ಲಿ ಒಂದು ಎಕರೆಯಲ್ಲಿ ಒಂದು ಸಾರಿಗೆ ಕನಿಷ್ಟ 20 ಕ್ವಿಂಟಾಲ್ ಬತ್ತವನ್ನು ಬೆಳೆಯಬಹುದು. ಮಳೆ ತರಿ ಒಂದು ಎಕರೆ ಜಮೀನಿನಲ್ಲಿ 8 ಕ್ವಿಂಟಾಲ್ ಬತ್ತವನ್ನು ಬೆಳೆಯುವುದಕ್ಕೆ ಸಾಧ್ಯವಿದೆ. ಆದ್ದರಿಂದ ಒಂದು ಎಕರೆ ನೀರಾ

(ಶ್ರೀ ಕಾಗೋಡು ತಿಮ್ಮಪ್ಪ)

ವರಿ ಜಮೀನಿಗೆ ಸಮನಾಗಿ ಎಷ್ಟು ಎಕರೆ ಮಳೆ ತರೀ ಜಮೀನನ್ನು ಇಟ್ಟುಕೊಳ್ಳಬಹುದು ಎಂದರೆ ಸುಮಾರು 4 ಎಕರೆ ಮಳೆ ತರಿ ನಪು ಎಂದು ಇಟ್ಟುಕೊಳ್ಳಬಹುದು. 4 ಎಕರೆ ಮಳೆ ತರಿ ಜಮೀನಿಗೆ ಒಂದು ಎಕರೆ ನೀರಾವರಿ ಜಮೀನು ಸಮವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸೋಷಿಯಲಿಸ್ಟ್ ಪಾರ್ಟಿಯವರು ಹಾಗೂ ಆ ಪಾರ್ಟಿಗೆ ಸೇರಿದ ಶ್ರೀಮಾನ್ ಗೋಪಾಲಗೌಡರು ಭೂಸುಧಾರಣೆಯಲ್ಲಿ ವಿಶ್ವಾಸವನ್ನು ಇಟ್ಟುಕೊಂಡು ತಮ್ಮ ಧೋರಣೆಯನ್ನು ಪ್ರತಿಪಾದನೆ ಮಾಡಿದ್ದಾರೆ. ಕಾಂಗ್ರೆಸ್ (ಆರ್) ಆಗಲೀ ಕಾಂಗ್ರೆಸ್ (ಒ) ಆಗಲೀ ಭೂಸುಧಾರಣೆಯ ವಿಷಯದಲ್ಲಿ ಒಂದು ಪ್ರಾಮಾಣಿಕ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ತಾವು ದಯಮಾಡಿ ಒಂದು ಎಕರೆ ತರಿ ಜಮೀನಿನಲ್ಲಿ ಒಂದು ಬೆಳೆ ಬೆಳೆದರೆ ಎಷ್ಟು ಉತ್ಪತ್ತಿ ಬರುತ್ತದೆ, ಎಷ್ಟು ಖರ್ಚಾಗುತ್ತದೆ ಎನ್ನುವ ಬಗ್ಗೆ ತಾವು ಸ್ವಲ್ಪ ವಿವರಣೆ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಒಂದು ಕುಟುಂಬದವರು ಸ್ವಂತ ನಾಗುವಳಿ ಮಾಡುವುದಾದರೆ, ರಾಶಾಯನಿಕ ಗೊಬ್ಬರವನ್ನು ಉಪಯೋಗಿಸುವ ಕ್ರಮವನ್ನು ಅನುಸರಿಸಿ ನಾಗುವಳಿ ಮಾಡುವುದಾದರೆ ಒಂದು ಎಕರೆಗೆ 300—400 ರೂಪಾಯಿಗಳು ಖರ್ಚು ನಾಕು.

ಶ್ರೀ ಎಚ್. ಡಿ. ದೇವೇಗೌಡ.—ಒಂದು ಕುಟುಂಬ ಎಂದರೆ ಗಂಡ, ಹೆಂಡತಿ, 3 ಜನ ಮೈನರ್ ಮಕ್ಕಳು ಎಂದು ಅರ್ಥ. ಮನೆಯಲ್ಲಿ ಹೆಂಡತಿ ಮಕ್ಕಳು ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರು ಕೂಲಿಗಾರರನ್ನು ಇಟ್ಟುಕೊಂಡು ವ್ಯವಸಾಯ ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಒಂದು ಎಕರೆಗೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಹೇಳಿ.

5—00 P.M.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಒಬ್ಬ ಮನುಷ್ಯ ತನ್ನ ಕುಟುಂಬದ ಶ್ರಮವನ್ನು ಭೂಮಿಯ ಮೇಲೆ ಎಷ್ಟರಮಟ್ಟಿಗೆ ಚೆಲ್ಲುತ್ತಾನೆ ಎಂಬುದರ ಮೇಲೆ ಅವಲಂಬಿಸಿದೆ. ತನ್ನ ಕುಟುಂಬದ ಹೆಚ್ಚಿನ ಭಾರವನ್ನು ಭೂಮಿಯ ಮೇಲೆ ಚೆಲ್ಲುವುದಾದರೆ, ಎಕರೆಯೊಂದಕ್ಕೆ 300 ರಿಂದ 400 ರೂಪಾಯಿಗಳವರೆಗೆ ಖರ್ಚು ನಾಕಾಗುತ್ತದೆ. ಏನಾದರು 50 ರಿಂದ 100 ಎಕರೆಗಳವರೆಗೆ ಜಮೀನನ್ನು ಇಟ್ಟುಕೊಂಡಿದ್ದರೆ ಹೆಚ್ಚು ಜನ ಕೂಲಿಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆಗ ಖರ್ಚು ಜಾಸ್ತಿಯಾಗುತ್ತದೆ. ಹತ್ತು ಎಕರೆ ಜಮೀನು ಇಟ್ಟುಕೊಂಡಿರುವ ಒಂದು ಕುಟುಂಬದವರು ತಮ್ಮ ಸ್ವಂತ ಶ್ರಮದಿಂದ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ನಾಟಿ ಮಾಡುವಾಗ, ಕೊಯ್ಲು ಮಾಡುವಾಗ ಕೂಲಿಗಾರರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅಂತಹ ಸಮಯದಲ್ಲಿಯೂ ಕೂಡ ಒಂದು ಎಕರೆಗೆ 400 ರೂಪಾಯಿಗಳಿಗಿಂತ ಹೆಚ್ಚು ಖರ್ಚು ಆಗುವುದಿಲ್ಲವೆಂದು ಹೇಳುತ್ತೇನೆ. ಇವೊತ್ತು 5 ಎಕರೆಯೊಳಗಿರುವವರನ್ನು ಲೆಕ್ಕ ಹಾಕುವುದಾದರೆ, ನಮ್ಮ ರಾಜ್ಯದಲ್ಲಿ ಶೇಕಡ 68-69 ಪ್ರಮಾಣದಲ್ಲಿ ಬರುತ್ತಾರೆ. ಈ ಪ್ರಮಾಣದಲ್ಲಿರುವವರು ಯಾವ ಕೂಲಿಗಾರರನ್ನೂ ಇಟ್ಟುಕೊಳ್ಳುವುದಿಲ್ಲ. ಎರಡು, ಮೂರು ಮತ್ತು 4 ಎಕರೆ ಜಮೀನು ಇಟ್ಟುಕೊಂಡಿರುವವರು ಎಲ್ಲ ಕೆಲಸವನ್ನು ತಾವೇ ಮಾಡಿಕೊಳ್ಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಒಂದು ಕುಟುಂಬವೆಂದರೆ ಗಂಡ, ಹೆಂಡತಿ ಮತ್ತು ಮೂವರು ಅಪ್ರಾಪ್ತ ವಯಸ್ಕ ಮಕ್ಕಳು ಎಂದು ಹೇಳಲಾಗಿದೆ. ಒಂದು ಎಕರೆಯಲ್ಲಿ ಗದ್ದೆ ನಾಟಿ ಹಾಕಬೇಕಾದರೆ 8 ಜನ ಹೆಣ್ಣಾಳುಗಳು ಬೇಕಾಗುತ್ತಾರೆ. ಹೆಂಡತಿಯಾದವಳು ಗದ್ದೆ ಕೆಲಸಕ್ಕೆ ಹೋದರೆ ಅಡಿಗೆ ಮಾಡುವುದು ಯಾವಾಗ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬೆಳಗಿನಜಾವ 4 ಗಂಟೆಗೆ ಎದ್ದು ಬೆಳಿಗ್ಗೆ 6 ಗಂಟೆಗೆಲ್ಲಾ ಅಡಿಗೆ ಮಾಡಿ, ಗದ್ದೆಗೆ ಹೋಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದರೂ ಸಹ ದನಕರುಗಳ ಕಸವನ್ನು ತೆಗೆದು, ಅಡಿಗೆ ಮಾಡಿ, ಬಾವಿಯಿಂದ ನೀರನ್ನು ತಂದು, ಗದ್ದೆಗೆ ಹೋಗುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕು. ಕೂಲಿಯನ್ನು ಇಟ್ಟುಕೊಳ್ಳದೆ ಎಲ್ಲ ಕೆಲಸವನ್ನು ಮಾಡುವುದು ಸಾಧ್ಯವೇ ಎಂಬುದನ್ನು ನೋಡಬೇಕು.

[MADAM SPEAKER in the Chair]

ಶ್ರೀ ಕಾಗೋಡು ತಿಮ್ಮಪ್ಪ.—ಎಕರೆಗೆ ನಾಲ್ಕು ನೂರು ರೂಪಾಯಿಗಳ ಖರ್ಚು ಆಗುತ್ತದೆ ಎಂದು ಇಟ್ಟುಕೊಂಡರೂ ಸಹ, ಎರಡು ಫಸಲು ಬರುವ ಜಮೀನಿನಲ್ಲಿ ಒಂದು ಎಕರೆಗೆ ನಿವ್ವಳ ಲಾಭ ಒಂದು ಸಾವಿರ ರೂಪಾಯಿ ಸಿಗುತ್ತದೆ. ಅಂದರೆ ಹತ್ತು ಎಕರೆಯಲ್ಲಿ ಹತ್ತು ಸಾವಿರ ರೂಪಾಯಿ ಗಳು ಸಿಗುವುದಕ್ಕೆ ಸಾಧ್ಯವಿದೆ.

ಅಧ್ಯಕ್ಷರು — ಸಾಧ್ಯವಿದೆ. ಆದರೆ ಸಿಕ್ಕುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲರೂ ಕಷ್ಟಪಟ್ಟು ದುಡಿದರೆ ಅಷ್ಟು ಹಣ ಸಿಕ್ಕಿಯೇ ಸಿಗುತ್ತದೆ. ಭೂಮಿಯೇನು ಬಂಜೆಯಲ್ಲ. ಭೂಮಿ ಉತ್ಪಾದನೆ ಕೊಡುವ ಭೂಮಿಯಾಗಿದೆ. ಅದು ರೂಢಿಸಿಕೊಳ್ಳುವ ನೀತಿಯನ್ನು ಅವಲಂಬಿಸಿದೆ ಒಂದನೆಯ ದರ್ಜೆಯ ಭೂಮಿಯಲ್ಲಿ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳ ಲಾಭ ಸಿಕ್ಕುತ್ತದೆ ಎಂಬುದನ್ನು ರುಜುವಾತು ಮಾಡಿ ತೋರಿಸುವುದಕ್ಕೆ ಸಿದ್ಧನಿದ್ದೇನೆ. ಭೂಮಿಯ ಮಣ್ಣಿನಲ್ಲಿ ಕೆಲಸ ಮಾಡುವ ಯಾರೂ ಸಹ ಇದು ಸಾಧ್ಯವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ಅಡಿಕೆ ತೋಟಗಳನ್ನು ಮೊದಲನೆಯ ದರ್ಜೆ ಸಮಕ್ಕೆ ತರಬೇಕು. ಇಲ್ಲದಿದ್ದರೆ ತಾರತಮ್ಯವಾಗುತ್ತದೆ. ಈ ಒಂದು ಮನೂದೆ ನಾನು ಪ್ರಾರಂಭದಲ್ಲಿಯೇ ಹೇಳಿದಂತೆ ಭಾರಿ ಕ್ರಾಂತಿಕಾರಕವಾದ ಮನೂದೆಯಲ್ಲದಿದ್ದರೂ, ಪ್ರಗತಿದಾಯಕವಾದ ಮಾರ್ಗದಲ್ಲಿ ಇಟ್ಟ ಒಂದು ಪುಟ್ಟ ಹೆಜ್ಜೆಯ ಲಕ್ಷಣವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸರ್ಕಾರದವರು ತಂದಿರುವ ವಿಧೇಯಕಕ್ಕೆ ಮಾನ್ಯ ಸಭೆಯು ತನ್ನ ಒಪ್ಪಿಗೆಯನ್ನು ಕೊಡುವುದರ ಜೊತೆಗೆ ಇನ್ನೂ ಕೆಲವು ಬದಲಾವಣೆಗಳನ್ನು ಮಾಡತಕ್ಕಂಥದ್ದು ಅವಶ್ಯಕವಿದೆ. ಏನೇನು ಬದಲಾವಣೆ ಮಾಡಬೇಕಾಗಿದೆ ಎಂಬುದನ್ನು ಈ ಹಿಂದೆ ಹೇಳಿದ್ದೇನೆ. ಈ ಮನೂದೆ ಈ ಸದನದ ಪೂರ್ಣಒಪ್ಪಿಗೆಯನ್ನು ಪಡೆಯುವುದಕ್ಕೆ ಸಾಕಷ್ಟು ಒಳ್ಳೆಯ ವಾತಾವರಣ ನಿರ್ಮಾಣವಾಗಬೇಕಾಗಿದೆ. ನಾನು ಮೊದಲೇ ಹೇಳಿದ ಹಾಗೆ ಸಮಾಜವಾದಿ ಸಮಾಜದ ಬಗ್ಗೆ ಹೇಳುವುದಕ್ಕೆ ಬಹಳ ಜನ ಮುಂದಾಗುತ್ತಾರೆ. ಆದರೆ ಸಮಾಜವಾದಿಯಂತೆ ನಡೆದುಕೊಳ್ಳುವ ಕಾಲ ಬಂದಾಗ ಮಾತ್ರ ಹಿಂದುಮುಂದು ನೋಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅದು ಇವತ್ತು ಆಗಿದೆ. ಶ್ರೀಮತಿ ಇಂದಿರಾಗಾಂಧಿಯವರ ಘೋಷಣೆಗೆ ಮಾರು ಹೋಗಿ ಆಡಳಿತ ಪಕ್ಷಕ್ಕೆ ಸೇರಿದ ಎಷ್ಟು ಜನರಿಗೆ ಸಮಾಜವಾದದಲ್ಲಿ ಎಷ್ಟರಮಟ್ಟಿಗೆ ನಂಬಿಕೆ ಇದೆ ಎಂಬುದು ಈ ಮನೂದೆಯಿಂದ ಗೊತ್ತಾಗುತ್ತದೆ. ನಾವೇನಾದರೂ ಹೇಳಿದರೆ ರಾಜಕೀಯಕ್ಕೆ ಹೇಳುತ್ತಾರೆ ಎಂಬ ಮಾತು ಬರುತ್ತದೆ. ಆದರೆ ಅದು ಕಾಲಕ್ರಮದಲ್ಲಿಯೇ ತಿಳಿಯುತ್ತದೆ. ಕಾಲ ಹೋದಂತೆ, ಸಮಾಜವಾದೀ ಕಾರ್ಯಕ್ರಮಗಳನ್ನು ಜಾರಿಗೆ ಕೊಡುತ್ತಾ ಹೋದಂತೆ, ಒಬ್ಬೊಬ್ಬರ ಸತ್ವಪರೀಕ್ಷೆ ನಡೆಯುತ್ತಾ ಹೋಗುತ್ತದೆ. ನಮ್ಮ ಸಮಾಜವಾದೀ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸರ್ಕಾರದವರು ಕೈಹಾಕಿದಾಗ, ತಮ್ಮ ಎಷ್ಟು ಜನ ಸ್ನೇಹಿತರು ಮತ್ತು ತಮ್ಮ ಎಷ್ಟು ಜನ ಸಹೋದ್ಯೋಗಿಗಳು ಉಳಿಯುತ್ತಾರೆ ಎಂಬುದನ್ನು ಒರೆಹಚ್ಚಿ ನೋಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಆಡಳಿತ ಪಕ್ಷದ ಮತ್ತು ವಿರೋಧಪಕ್ಷದ ಸದಸ್ಯರೆಲ್ಲರನ್ನೂ ಒರೆ ಹಚ್ಚಿ ನೋಡುವ ಕಾಲ ಬಂದಿದೆ. ಎಲ್ಲರ ಸತ್ವ ಪರೀಕ್ಷೆ ಈಗ ನಡೆಯುತ್ತಿದೆ. ಈ ಒಂದು ಭೂ ಸುಧಾರಣೆ ಕಾನೂನಿನಿಂದ ಯಾರೇ ಭೂಮಾಲೀಕರಿಗೆ ಬಾಧಕವಾಗುವುದಿಲ್ಲ. ಆದರೂ ಶೇಕಡ ಎರಡರಷ್ಟು ಜನರಿಗೆ ಮಾತ್ರ ಆಗುತ್ತದೆ. ಈ ಎರಡಷ್ಟು ಇರುವ ಜನರು ಕೆಲವು ಅಡ್ಡಿ ಆತಂಕಗಳನ್ನು ಯಾವ ಯಾವ ಮೂಲೆಯಿಂದಲಾದರೂ ತರುವುದಕ್ಕೆ ಪ್ರಯತ್ನ ಪಡಬಹುದು. ಆದರೆ ಅದಕ್ಕೆ ಅವಕಾಶ ಮಾಡಿಕೊಡಬಾರದೆಂದು ಕಳಕಳಿಯಿಂದ ಮಾನ್ಯ ಸದಸ್ಯರಲ್ಲಿ ಕೇಳಿ ಕೊಳ್ಳುತ್ತೇನೆ. ಒಂದುವೇಳೆ ಈಗಿನ ಭೂ—ಸುಧಾರಣಾ ಕಾನೂನು ಕಾರ್ಯಗತವಾಗದೇ ಹೋದರೆ, ನಾಳೆ ಈ ಜಮೀನಿನ ಸಮಸ್ಯೆ ವಿಚಾರದಲ್ಲಿ ದೇಶದಲ್ಲಿ ಕ್ರಾಂತಿಯಾಗಬಹುದು. ಅದಕ್ಕೆ ಅವಕಾಶ ಕೊಡಬಾರದು. ನಮ್ಮದು ಗಾಂಧಿ ಹುಟ್ಟಿದ ಮತ್ತು ಬಾಳಿದ ದೇಶ. ಅವರ ಒಂದು ನೇತೃತ್ವವನ್ನು ನಾವು ಕಂಡಿದ್ದೇವೆ. ಇಂತಹ ಒಂದು ದೇಶದಲ್ಲಿ ಭೂಸಮಸ್ಯೆಯನ್ನು ಬಗೆಹರಿಸುವ ದಿಶೆಯಲ್ಲಿ ರಕ್ತಕ್ರಾಂತಿಯಾಗುವುದಾದರೆ, ನಾವು ಈ ದೇಶದಲ್ಲಿರುವುದಕ್ಕೆ ನಾಲಾಯಕ್. ರಕ್ತಕ್ರಾಂತಿಯಾಗದಿರುವ ಹಾಗೆ ಭೂಮಿಯ ವಿತರಣೆಯಾಗ ಬೇಕು. ಹರಿಜನ, ಗಿರಿಜನರಿಗೆ ಜಮೀನು ಇಲ್ಲದ ಬಡವರಿಗೆ ಭೂಮಿ ಸಿಕ್ಕಬೇಕು. ಅವರುಗಳು ಸಮೃದ್ಧಿಯ ಜೀವನ ಮಾಡುವುದಕ್ಕೆ ಆಗದಿದ್ದರೂ ಕನಿಷ್ಟವಾದ ಜೀವನ ಮಾಡುವುದಕ್ಕೆ ಒಂದು ಅವಕಾಶ ಸಿಕ್ಕಬೇಕು. ಅಂತಹ ಒಂದು ಭೂಮಿಕೆ ಈ ದೇಶದಲ್ಲಿ ನಿರ್ಮಾಣವಾಗಬೇಕೆಂದು. ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಾನು ಹೇಳಿದಂತಹ ಕೆಲವು ತಿದ್ದುಪಡಿ

(ಶ್ರೀ ಕಾಗೋಡು ತಿಮ್ಮಪ್ಪ)

ಗಳನ್ನು ಈ ತಿದ್ದುಪಡಿ ಮಸೂದೆಯಲ್ಲಿ ಅಳವಡಿಸಿಕೊಂಡು ಸರ್ಕಾರದವರು ಜಾರಿಗೆ ತರಬೇಕೆಂದು ಕಳಕಳಿಯಿಂದ ಕೇಳಿಕೊಂಡು, ಈ ವಿಧೇಯಕವನ್ನು ಸ್ವಾಗತಿಸಿ, ಮಾನ್ಯ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್‌ನಾಳ ಚಂದ್ರಶೇಖರ್ (ಹೊಸನಗರ್).—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ರೆವಿನ್ಯೂ ಮಂತ್ರಿಗಳು ತಂದಿರತಕ್ಕಂಥ ಈ ಕ್ರಾಂತಿಕಾರಕವಾದಂಥ ಬಿಲ್‌ನ್ನು ನಾನು ಸ್ವಾಗತಿಸುತ್ತೇನೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬುದು ತತ್ವದಲ್ಲಿ ಅಳವಡಿಸಿಕೊಂಡಿರುವ ಹಾಗೆ ಇದೆ. ಏಕೆಂದರೆ ಈ ಭೂಸುಧಾರಣೆಯ ಬಗ್ಗೆ ನಾವು ಕಳೆದ 25 ವರ್ಷಗಳ ಕಾಲದಿಂದ ಎಲ್ಲ ಪ್ಲಾಟ್‌ಫಾರಮ್‌ಗಳಲ್ಲಿಯೂ ಹೇಳಿಕೊಂಡು ಬರುತ್ತಿದ್ದೇವೆ. ಜನಕ್ಕೆ ನಾವು ಭೂಮಿ ಸಾಗುವಳಿ ಮಾಡಿಕೊಂಡು, ಜೀವನ ಮಾಡಿಕೊಂಡು ಬರಲು ನಮ್ಮ ಭೂಮಿ ಸಾಗುವಳಿಗೆ ಸಿಗುತ್ತೊ ಇಲ್ಲವೋ ಎಂಬ ನಂಬಿಕೆ ಈಗ ಬರುತ್ತಿರುವ ಭೂಸುಧಾರಣೆಯಲ್ಲಿ ಇಲ್ಲ ಎಂದು ಎಲ್ಲ ರಾಜಕೀಯ ಪಕ್ಷಗಳ ನಾಯಕರೂ, ಹಾಗೂ ಅಸೆಂಬ್ಲಿ ಸದಸ್ಯರುಗಳು ಮಾತನಾಡುತ್ತಾ ಎಲ್ಲ ಪ್ಲಾಟ್‌ಫಾರಂಗಳಲ್ಲೂ ಹೇಳಿ ಹೇಳಿ ಇದು ಕಾರ್ಯರೂಪಕ್ಕೆ ಬರುತ್ತೊ ಇಲ್ಲವೋ ಎನ್ನುವ ಒಂದು ಅಪನಂಬಿಕೆ ಬರುವ ಪರಿಸ್ಥಿತಿ ಇಂದು ಉದ್ಭವವಾಗಿದೆ. ಈ ಒಂದು ಕ್ರಾಂತಿಕಾರಕವಾದ ಬದಲಾವಣೆ ಮಾಡತಕ್ಕ ಹೋರಾಟಕ್ಕೆ ನಮ್ಮ ಪಕ್ಷಕ್ಕೆ ಹಾಗೂ ನಮ್ಮ ಪಕ್ಷದ ನಾಯಕರಿಗೆ ಅವಕಾಶ ಸಿಕ್ಕಿರುವುದು ನಮಗೆಲ್ಲರಿಗೂ ಒಂದು ರೀತಿಯಾದ ಹೆಮ್ಮೆಯನ್ನು ತರತಕ್ಕ ವಿಚಾರ . ಈ ಒಂದು ಪರ್ವಕಾಲದಲ್ಲಿ ವಿಧಾನ ಸಭೆಯಲ್ಲಿ ಸದಸ್ಯರಾಗಿದ್ದೇವಲ್ಲಾ ಎಂದು ನಾವು ಹೆಮ್ಮೆಪಡುತ್ತೇವೆ. ಆದರೂ ಇದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ತುಲನಾತ್ಮಕವಾದ ರೀತಿಯಲ್ಲಿ ಮುಂದೂಡುತ್ತಾ ಹೋಗುತ್ತಾರೆಂದು ಹೇಳಿದರೆ ಅದು ತಪ್ಪಾಗಲಾರದು. ನಾನು ತಿಳಿದಿರುವಂತೆ ಇದರಲ್ಲಿ ಇರುವ ತತ್ವ ಜಮೀನನ್ನು ಇಟ್ಟುಕೊಂಡು ಎರಡು ಹೊತ್ತು ಬೆಳಗಿನಿಂದ ಸಾಯಂಕಾಲದವರೆಗೆ ಬೆವರು ಸುರಿಸಿ ಕಷ್ಟಪಟ್ಟು ಜೀವನ ನಡೆಸಿಕೊಂಡು ಇರುತ್ತಾನೋ ಅವನೇ ಇನ್ನು ಮುಂದೆಯೂ ಭೂಮಿ ಇಟ್ಟುಕೊಂಡು ವ್ಯವಸಾಯ ಮಾಡಿಕೊಂಡು ಅವನ ಭೂಮಿಯಿಂದ ಜೀವನ ಮಾಡಿಕೊಂಡು ಇರುವುದರಿಂದ ಅವನಿಗೆ ಭೂಮಿಯನ್ನು ಕೊಡಬೇಕಾದ್ದು ಇದರ ಮೂಲತತ್ವ. ಈ ತತ್ವವನ್ನು ಒಪ್ಪಿಕೊಂಡ ಮೇಲೆ ಲ್ಯಾಂಡ್ ರಿಫಾರಂಸ್ ಆಕ್ಟ್‌ನಲ್ಲಿರುವ ಸೆಕ್ಷನ್ 14ನ್ನು ಈ ಕಾನೂನಿನಲ್ಲಿ ಇನ್ನೂ ಏಕೆ ಇಟ್ಟಿದ್ದೀರಿ ಎಂದು ಕೇಳಬೇಕಾಗಿದೆ. ಇದನ್ನು ತೆಗೆದುಬಿಟ್ಟು ಇದಕ್ಕಾಗಿ ಬೇರೆ ಒಂದು ಆರ್ಡಿನೆನ್ಸ್ ಏಕೆ ಹೊರಡಿಸಬಾರದು ? ಯಾರು ಗೇಣಿದಾರನಾಗಿರುತ್ತಾನೋ ಅವನಿಂದ ಗೇಣಿಯನ್ನು ಇದುವರೆಗೆ ಪಡೆಯುತ್ತಿದ್ದರು. ಇನ್ನು ಮುಂದೆ ಅವನಿಗೇ ಭೂಮಿಯನ್ನು ಕೊಡಬೇಕು ಎನ್ನುವುದು ಇದರ ಮೂಲ. ತತ್ವ ಈ ತತ್ವವನ್ನು ಒಪ್ಪಿಕೊಂಡ ಮೇಲೆ ಅದನ್ನು ಕಾರ್ಯರೂಪಕ್ಕೆ ತರಲು ಏಕೆ ಯತ್ನ ಮಾಡಬಾರದು ? ಇದುವರೆಗೂ ಭೂಮಿ ಇಟ್ಟುಕೊಂಡ ಭೂ ಮಾಲೀಕರಿಗಾಗಲೀ ಇಲ್ಲವೇ ಗೇಣಿ ಕೊಟ್ಟುಕೊಂಡು ಬರುತ್ತಿದ್ದ ಗೇಣಿದಾರನಿಗಾಗಲೀ ಇಬ್ಬರಿಗೂ ಇದರಿಂದ ಯಾವ ಸುಖ ಸಂಪತ್ತು ಬರುತ್ತಿರಲಿಲ್ಲ ಎನ್ನುವುದನ್ನು ಇಲ್ಲಿ ನೆನಪಿನಲ್ಲಿಡಬೇಕು. ಭೂಮಿಯನ್ನು ಹೊಂದಿರುವವನು ಭೂಮಾಲೀಕ ನಾಗಿರುವುದರಿಂದ ಅವನೇನಾದರೂ ಚೆನ್ನಾಗಿ ಜೀವನ ಮಾಡಿಕೊಂಡು ಬರುತ್ತಿದ್ದಾನೆಯೇ ಎಂದು ನೋಡಿದರೆ ಅವನೂ ಸಹ ಸರಿಯಾಗಿ ಗೇಣಿದಾರನಿಂದ ಬರಬೇಕಾದ ಗೇಣಿಯನ್ನು ಪಡೆಯುವುದೇ ಕಷ್ಟವಾಗಿದೆ, ಗೇಣಿದಾರ ಕೂಡ ಬಹಳ ಕಷ್ಟ ಕಾರ್ಪಣ್ಯ ದಿಂದ ಅವನ ಜೀವನ ನಡೆಸಿಕೊಂಡು ಬರುತ್ತಿದ್ದಾನೆ, ಇದರಲ್ಲಿ ಈಗ ಗೇಣಿದಾರ ಹಾಗೂ ಭೂಮಾಲೀಕ ಇಬ್ಬರೂ ಒಂದು ರೀತಿಯಾದ ಕ್ಲಿಷ್ಟಕಾರಕವಾದ ಮತ್ತು ನಾಚಿಕೆಗೀಡಾಗುವಂತಹ ಪರಿಸ್ಥಿತಿ ಬಂದಿದೆ. ಭೂಮಾಲೀಕನಿಗೆ ಇವೊತ್ತು ನನಗೆ ನನ್ನ ಭೂಮಿ ಸಿಗುತ್ತೋ ಇಲ್ಲವೋ ಎನ್ನುವ ಭಾವನೆ ಬೆಳೆದು ಬರುತ್ತಿದೆ. ಇದನ್ನೇ ನಾವು ನಂಬಿಕೊಂಡು ಇನ್ನು ಮುಂದೆ ಜೀವನ ನಡೆಸುವುದು ಕಷ್ಟ ಎನ್ನುವುದಕ್ಕೆ ಸಾಕ್ಷಿಯಾಗಿ ಇಂದು ಕೋರ್ಟುಗಳಲ್ಲಿ ಬಂದಿರುವ ಕೇಸುಗಳನ್ನು ನೋಡಿದರೆ ಗೊತ್ತಾಗುತ್ತದೆ. ಇಂದು ಕೋರ್ಟುಗಳಲ್ಲಿ ರೆಸಂಪ್‌ಷನ್ ಕೇಸುಗಳು ಹಾಗೂ, ನಾನ್ ರೆಸ್ಯೂಮಬರ್ ಲ್ಯಾಂಡ್ಸ್ ಎಂದು ಏನು ಡಿಕ್ಲರೇಷನ್‌ಗಳನ್ನು ಕೊಟ್ಟಿದ್ದಾರೆ ಅಂತ ಕೇಸುಗಳು ನೂರಾರು ಒಂದು ಸಾವಿರ ದಷ್ಟು ಇವೆ. ನಾನ್ ರೆಸ್ಯೂಮಬರ್ ಡಿಕ್ಲರೇಷನ್ ಕೇಸುಗಳು ಕೋರ್ಟಿನಲ್ಲಿ ಬೇಕಾದಷ್ಟು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಇಂದು ರೈತರು ತಮ್ಮ ಜೀವನವನ್ನು ಭೂಮಿ ನಂಬಿಕೊಂಡು ಜೀವನ ನಡೆಸಲು ಅವಕಾಶವಿಲ್ಲ, ಅದರಂತೆ ಭೂಮಾಲೀಕನೂ ಕೂಡ ಇಂದಲ್ಲ ನಾಳೆ ಅವನ ಭೂಮಿ ಹೋಗುತ್ತದೆ ಅವನೂ ಕೂಡ ನರಿಯಾಗಿ ಭೂಮಿ ನಂಬಿಕೊಂಡು ಜೀವನ ನಡೆಸಲು ಅವಕಾಶವಿಲ್ಲ, ಹಿಂದೆ ಗೇಣಿದಾರ ಭೂ ಮಾಲೀಕನ ಹತ್ತಿರಹೋಗಿ ಹತ್ತು, ಇಪ್ಪತ್ತು ರೂಪಾಯಿ

ಗಳನ್ನು ಸಾಲವಾಗಿ ತರುತ್ತಿದ್ದ. ಇಂದು ಭೂಮಾಲೀಕನಿಗೆ ತನ್ನ ಜಮೀನೇ ಹೋಗುತ್ತಿದೆ ಎನ್ನುವ ಅನುಮಾನ ಬಂದಿರುವುದರಿಂದಾಗಿ ಯಾವ ಗೇಣಿದಾರನಿಗೂ ಸಾಲವಾಗಿ ಅವನು ಹಣ ಕೊಡುತ್ತಿಲ್ಲ. ಹಿಂದೆ ನಮ್ಮ ಮರೆನಾಡಿನಲ್ಲಿ ತಾವು ತಿಳಿದಿರುವಂತೆ ಶಿವಮೊಗ್ಗಾ ಜಿಲ್ಲೆಯಲ್ಲಿ ಭೂಮಾಲೀಕರು ಗೇಣಿದಾರನಿಗೆ ಸಾಲವಾಗಿ ನೂರು ರೂಪಾಯಿಗಳು ಬೇಕೆಂದು ಕೇಳಿದರೆ ತಕ್ಷಣ ಕೊಡುತ್ತಿದ್ದರು ಮತ್ತು ಅವನು ಭೂಮಿಯನ್ನು ಅಭಿವೃದ್ಧಿ ಮಾಡಿ ಚೆನ್ನಾಗಿ ಬೆಳೆಯುಲಿ ಎಂದು ಇನ್ನೂ ಹೆಚ್ಚು ಹಣವನ್ನು ವರ್ಷಕ್ಕೆ ಇಷ್ಟು ಎಂದು ಕೊಡುತ್ತಿದ್ದರು, ಹಾಗೆ ಗೇಣಿದಾರನೇನಾದರೂ ಗೇಣಿ ಸರಿಯಾಗಿ ಕೊಡದೇ ಇದ್ದರೆ ಭೂಮಾಲೀಕರು ಕೋರ್ಟಿಗೆ ಹೋಗಿ ದಾವಾ ಹಾಕುತ್ತಿದ್ದರು. ಇದೂ ಅಲ್ಲದೆ ಆಗ ಭೂ ಮಾಲೀಕರು ಅವರ ಕೈಕೆಳಗೆ ದುಡಿಯುತ್ತಿದ್ದ ಗೇಣಿದಾರ ಬಡವ ಎಂದು ಅವನಿಗೆ ವರ್ಷಕ್ಕೆ ಇಷ್ಟು ಒಣ ಭತ್ತ ಎಂದು ಕೊಡುತ್ತಿದ್ದರು, ಸುಮಾರಾಗಿ ಒಂದು ಪಲ್ಲದಷ್ಟು ಕೊಟ್ಟು ಅದರಿಂದ ಅವನು ಜೀವನ ಮಾಡಿಕೊಂಡು ಚೆನ್ನಾಗಿ ವ್ಯವಸಾಯ ಮಾಡಲಿ ಎಂದು ಪ್ರತಿಯೊಬ್ಬ ಭೂಮಾಲಿಕರೂ ಕೊಡುತ್ತಿದ್ದರು, ಅದರಂತೆ ಗೇಣಿದಾರರೂ ಅವರಿಗೆ ಹೊಂದಿಕೊಂಡು ಜೀವನ ಮಾಡಿಕೊಂಡು ಬರುತ್ತಿದ್ದರು. ಇಂದು ಪರಿಸ್ಥಿತಿ ಬದಲಾಗಿರುವುದರಿಂದ ಯಾವ ಭೂ ಮಾಲೀಕನೂ ರೈತರಿಗೆ ಗೇಣಿದಾರನಿಗೆ ಸಾಲ ಕೊಡುವುದಿಲ್ಲ ಮತ್ತು ಅವರಿಗೆ ಯಾವ ಆಧಾರವು ಗೇಣಿದಾರನಿಂದ ಸಿಗುವುದಿಲ್ಲ. ಇದಕ್ಕೆ ಕಾರಣವೇನು ಎಂದರೆ ಇಂದು ಇಲ್ಲಿ ತಂದಿರುವ ವಿಧೇಯಕದಲ್ಲಿ ಗೇಣಿದಾರನಿಗೆ ಅನುಕೂಲ ಮಾಡಿಕೊಡಬೇಕು, ಅವನ ಕಷ್ಟ ಕಾರ್ಪಣ್ಯಗಳನ್ನು ಹೋಗರಾಡಿಸಬೇಕೆಂದು ಅವನಿಗೆ ಭೂಮಿಯನ್ನು ಕೊಡಬೇಕು ಎಂದು ಹೇಳಿ ಇಂತಹ ಮಸೂದೆ ತಂದಿದ್ದಾರೆ. ಆದರೆ ಇಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ನೋಡಿದರೆ ಅವನಿಗೆ ಭೂಮಿ ಸಿಗುತ್ತೋ ಇಲ್ಲವೋ ಎನ್ನುವ ಅನುಮಾನ ಬರುತ್ತಿದೆ. ತಾವು ಈಗ ಇರುವ ಮಸೂದೆಯಲ್ಲಿ ಸೆಕ್ಷನ್ 14 ಎಂದು ಇಟ್ಟಿರುವುದರಿಂದ ಇದು ಕೇವಲ ನನ್ನಂತಹ ವಕೀಲರಿಗೆ ಅನುಕೂಲವಾಗುತ್ತದೆಯೇ ವಿನಾ ರೈತರಿಗಾಗಲೀ ಭೂಮಾಲೀಕರಿಗಾಗಲೀ ಯಾವ ಅನುಕೂಲವೂ ಇದರಿಂದ ಸಿಗುತ್ತಿಲ್ಲ. ಇಲ್ಲಿರುವ ಸೆಕ್ಷನ್ 14ರ ಪ್ರಕಾರ ಯಾರೇ ಅರ್ಜಿ ಹಾಕಲಿ ಯಾರೂ ಭೂಮಿಯಿಂದ ಅವರನ್ನು ಬಿಡಿಸಲು ಸಾಧ್ಯವಿಲ್ಲ. ಆದರೆ ಸೆಕ್ಷನ್ 16 ರ ಪ್ರಕಾರ ಒಂದು ರೀತಿಯಾಗಿದೆ. ಈ ರೀತಿಯಾಗಿ ದ್ವಂದ್ವನೀತಿ ಇರುವುದರಿಂದಾಗಿ ಹಿಂದೆ ಇದ್ದ ಸೆಕ್ಷನ್ 14ನ್ನು ಏಕೆ ಇಲ್ಲಿ ತೆಗೆಯಬಾರದು ? ಇದನ್ನು ತೆಗೆಯಲು ಅನುಕೂಲವಾಗುವಂತೆ ಒಂದು ಆರ್ಡಿನೆನ್ಸ್‌ನ್ನು ಸರಕಾರ ಈಗಲಾದರೂ ಏಕೆ ಹೊರಡಿಸಬಾರದು ? ಇಂತಹ ಒಂದು ಪ್ರಶ್ನೆ ಈಗ ಇದರಲ್ಲಿ ಉದ್ಭವವಾಗಿದೆ. ಬೇಸಾಯ ಮಾಡುತ್ತಿರುವ ರೈತನಿಂದ ಭೂಮಿಯನ್ನು ಈಗ ಬಿಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಜಮೀನು ಇಟ್ಟುಕೊಂಡಿರುವವನು ತನ್ನ ಭೂಮಿ ಉಳಿಸಿಕೊಳ್ಳಲೂ ಹೋಗುತ್ತಿಲ್ಲ. ಇದಕ್ಕಾಗಿ ನನ್ನ ಸೂಚನೆ ಸಣ್ಣ ಹಿಡುವಳಿದಾರರಿಗೆ ಸರಕಾರ ಏನು ಕೊಡಬೇಕೆಂದು ಇಷ್ಟವಿದೆಯೋ ಅದನ್ನು ಲಂಪ್‌ಸಂ ಆಗಿ ಕೊಟ್ಟು, ಭೂಮಿ ಉಳುವವನಿಗೆ ಹೆಚ್ಚು ಸವಲತ್ತುಗಳನ್ನು ಕೊಟ್ಟು ಅವನಿಗೆ ಸರಕಾರ ಸಹಾಯ ಮಾಡಬಹುದು. ಆಗ ನ್ಯಾಷನಲೈಸ್ಡ್ ಬ್ಯಾಂಕುಗಳ ಮೂಲಕ ಗೇಣಿದಾರನಿಗೆ ಸಹಾಯ ಸಿಗಬಹುದು ಮತ್ತು ಇದರಿಂದ ಅವನು ಜೀವನ ಮಾಡಬಹುದು. ಫೇರ್ ರೆಂಟನ್ನು ಇವೊತ್ತು 10-15ರಷ್ಟು ಎಂದು ನಿಗದಿ ಮಾಡಿದ್ದಾರೆ. ಇದನ್ನು ಸರಿಯಾಗಿ ಕೊಡಬೇ ಹೋದರೆ ಶೇಕಡಾ ಇಷ್ಟು ಬಡ್ಡಿ ಕೊಡಬೇಕೆಂದೂ ಅದನ್ನು ಕೂಡಲೇ ವ್ಯವಸ್ಥೆ ಮಾಡಬೇಕು. ಒಂದು ಎಕರೆಗೆ ಎಷ್ಟು ಹಣ ಕೊಡಬಹುದು ಎನ್ನುವುದಕ್ಕಾಗಿ ಕೋರ್ಟಿಗೆ ಹೋದರೆ ಅವನ ಪರಿಸ್ಥಿತಿ ಏನಾಗುತ್ತದೆ ಎಂದರೆ ಅದು ಹತ್ತು ಇಪ್ಪತ್ತು ವರ್ಷಗಳಾದರೂ ವಿವಾದ ಮುಗಿಯುವುದಿಲ್ಲ. ಇವೊತ್ತು ಉಳುವವನಿಗೆ ಅವನ ಭೂಮಿಯನ್ನು ಕೊಡಬೇಕು ಎಂದು ಒಂದು ನಿರ್ಣಯ ತೆಗೆದುಕೊಂಡಿರುವಾಗ ಒಂದು ಎಕರೆಗೆ ಎಷ್ಟು ಉತ್ಪತ್ತಿ ಬರುತ್ತದೆ ಎನ್ನುವುದನ್ನೂ ಗಣನೆಗೆ ತೆಗೆದುಕೊಂಡು ಅದರಂತೆ ಇಷ್ಟು ಷಟ್ಟು ಪೂರ್ತಿ ಕಾಂಪನ್ ಸೇಷನ್ ಕೊಡಬೇಕು ಎಂದು ನಿರ್ಣಯ ತೆಗೆದುಕೊಳ್ಳಬೇಕು. ಸರಕಾರ ಈಗಲೂ ಇಂತಹ ಒಂದು ನಿರ್ಣಯ ತೆಗೆದುಕೊಳ್ಳಲು ಅವಕಾಶವಿದೆ. ಸರಕಾರ ಬೇಗನೆ ಇಂತಹ ಒಂದು ನಿರ್ಣಯ ತೆಗೆದುಕೊಂಡು ಇದುವರೆಗೂ ಬಗೆಹರಿಯದಿರುವ ಭೂಮಾಲೀಕರ ಹಾಗೂ ಗೇಣಿದಾರರುಗಳ ಸಮಸ್ಯೆ ಬಗೆಹರಿಸಲು ಸಾಧ್ಯವಿದೆ, ಆದರೆ ಹಾಗೆ ಮಾಡದೆ ಚುನಾವಣೆಗಳಲ್ಲಿ ಹೋಗಿ ಘೋಷಣೆಗಳನ್ನು ಮಾಡಿ ಭೂನುಧಾರಣೆ ಜಾರಿಗೆ ತರುತ್ತೇವೆಂದು ಹೇಳಿ ಜನರಿಂದ ವೋಟು ಪಡೆದು ಬರುವುದು ಆನಂತರ ಅದನ್ನೇ ಮರೆಯುವುದು. ಹೀಗಾಗಿದೆ ಇಂದಿನ ಪರಿಸ್ಥಿತಿ. ಪ್ರತಿ ವರ್ಷವೂ ಇದರ ಬಗ್ಗೆ ಏನಾದರೊಂದು ರೀತಿಯಲ್ಲಿ ಇದು ಅಸೆಂಬ್ಲಿಯಲ್ಲಿ ಪರಂಪರೆಯಾಗಿ ಚರ್ಚೆಗೆ ಬರುತ್ತಲೇ ಇದೆ ಮತ್ತು ಪ್ರತಿಸಾರಿಯೂ ನಾವುಇದರಲ್ಲಿ ಭಾಗವಹಿಸಿ ನಮ್ಮ ವಿಚಾರಗಳನ್ನು ತಿಳಿಸುತ್ತಿರುವುದೇ ಆಗುತ್ತಿದೆ, ಭೂಮಿಯನ್ನು ಉಳುವವರಿಗೆ ಭೂಮಿ ಕೊಡಬೇಕೆಂಬುದರಲ್ಲಿ ಯಾರೂ ವಿರೋಧಮಾಡುತ್ತಿಲ್ಲ. ಇಂತಹ ಜನರಿಗೆ ಅನುಕೂಲ ಮಾಡಬೇಕು ಎಂದು ಪಶ್ಚಾತ್ತಾಪ ಪಡುತ್ತಿದ್ದಾರೆ. ಮೂಕ ಪಶುಗಳಂತೆ ದುಡಿಯುತ್ತಿರುವ ಈ ಜನರಿಗೆ ಭೂಮಿ ಕೊಡುತ್ತೇವೆ ಎಂದು ಹೇಳಿ ಅವರಿಂದ ವೋಟು

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಗಳನ್ನು ಪಡೆದು ಮತ್ತೆ ಇಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅದರ ಬಗ್ಗೆ ತಕ್ಕ ನಿರ್ಣಯ ತೆಗೆದುಕೊಳ್ಳಲು ಇಂದು ನಮ್ಮ ಪಕ್ಷಕ್ಕೆ ಅವಕಾಶವಿದೆ ಎಂದು ಹೇಳುತ್ತೇನೆ. ಸುಮ್ಮನೆ ಈಗ ಮಿತಿ ಹತ್ತು ಎಕರೆ, ಇಲ್ಲವೇ ಹದಿನೈದು ಎಕರೆ ಇಲ್ಲವೇ 18-20 ಎಕರೆಗಳೆಂದು ಸುಮ್ಮನೆ ಇಲ್ಲದ ಪ್ರಚಾರವನ್ನೇಕೆ ಮಾಡಲು ಹೋಗಬೇಕು? ಮೂಲಭೂತವಾಗಿ ಇರುವ ತತ್ವ ಎಂದರೆ ಇದರಲ್ಲಿ 10-12-15 ಎಕರೆಗಳೇ ಎನ್ನುವುದರ ಒಂದು ನಿರ್ಣಯವನ್ನು ಬೇಗನೆ ತೆಗೆದು ಕೊಂಡು ಭೂ ಮಾಲೀಕರ ಹಾಗೂ ಗೇಣೀದಾರರುಗಳ ಸಮಸ್ಯೆಯನ್ನು ಪರಿಹಾರ ಮಾಡಲು ತಕ್ಕ ನಿರ್ಣಯ ತೆಗೆದುಕೊಳ್ಳಲಿ ಎಂದು ಹೇಳುತ್ತಲಿದ್ದರೂ ಇದರ ಬಗ್ಗೆ ಇಲ್ಲದ ಗೊಂದಲಗಳನ್ನು ಮಾಡಿ ಬರೀ ಘೋಷಣೆಗಳನ್ನು ಮಾಡುತ್ತಾ ಇದರಲ್ಲಿರುವ ಮೂಲಭೂತವಾದ ಪ್ರಶ್ನೆ ಕಡೆಗೆ ಗಮನ ಕೊಡುತ್ತಿಲ್ಲ. ಮೂಲಭೂತವಾದ ಪ್ರಶ್ನೆಯನ್ನು ಮರೆತಿದ್ದೇವೆ ಎಂದು ನನಗನ್ನಿಸುತ್ತದೆ. ನಮ್ಮ ಕಮಿಟ್‌ಮೆಂಟ್ ಏನಿದೆ ಅದನ್ನು ಮರೆತಿದ್ದೇವೆ. ಭೂ ಸಂಪತ್ತು ಪರಮಾತ್ಮನಿಗೆ ಸೇರಿದ್ದು ಎಂದು ವಿನೋಬಾಜಿ ಅವರು ಕೇಳಿದರು. ಅದು ಯಾವ ಒಬ್ಬ ವ್ಯಕ್ತಿಗೇ ಆಗಲಿ ಸೇರ ತಕ್ಕದ್ದಲ್ಲ, ಇಡೀ ಸಮಾಜಕ್ಕೆ ಸೇರತಕ್ಕದ್ದು. ಒಬ್ಬ ಚಂದ್ರಶೇಖರ್‌ಗಾಗಲೀ, ಶಿವಯ್ಯನವರಿಗಾಗಲೀ ಸೇರುತ್ತದೆ ಎಂದು ಹೇಳುವುದು ನಮ್ಮ ಕಲ್ಪನೆ. ನಮ್ಮ ಕಲ್ಪನೆಯಲ್ಲಿ ಆ ಸ್ವತ್ತಿನಮೇಲೆ ನಮಗೆ ವ್ಯಾಮೋಹವಿದೆ. ಈ ವ್ಯಾಮೋಹ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರಿಗೆ ನಮ್ಮ ಸಮಾಜವಾದ ಸಾಧ್ಯವಿಲ್ಲ ಎನ್ನುವ ಮಾತನ್ನು ವಿನೋಬಾಜಿ ಹೇಳಿದರು. ಆ ಮಾತನ್ನು ಯಾವತ್ತೂ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಈ ಹೊತ್ತು 10 ಎಕರೆ ಎಂದು ಒಂದು ಮಿತಿಯನ್ನು ಮಾಡುತ್ತೇವೆನ್ನುವುದಾದರೆ ಆ 10 ಎಕರೆಯಲ್ಲಿ ವ್ಯವಸಾಯ ಮಾಡಿದರೆ ನನ್ನ ಮಗನನ್ನು ಫಾರಿನ್‌ಗೆ ಕಳುಹಿಸುವುದಕ್ಕಾಗುತ್ತದೆಯೇ? ಎಂ ಎ., ಪಿ. ಎಚ್‌ಡಿ, ಮಾಡಿಸುವುದಕ್ಕಾಗುತ್ತದೆಯೇ ಎಂದು ಕೇಳಬಹುದು. ಎರಡು ಹೊತ್ತು ಊಟಕ್ಕೆ ಇಲ್ಲದೇ ಇರುವವರ ಗತಿ ಏನು ಎಂದು ನಾವು ಯೋಚನೆ ಮಾಡಿದ್ದೇವೆಯೇ? ಮಧ್ಯಾಹ್ನಕ್ಕೆ ಇದ್ದರೆ ರಾತ್ರಿಗೆ ಇರುವುದಿಲ್ಲ. ಮಂಡಕ್ಕಿ ತಿಂದು ನೀರು ಕುಡಿದು ಒಂದು ಮೂಕ ಪಶುವಿನಂತೆ ಇರುತ್ತಾರೆ. ಅವರ ಪ್ರತಿನಿಧಿಗಳೆಂದು ಬರುವ ನಾವು ಯಾರ ರಕ್ಷಣೆಗಾಗಿ ಇಲ್ಲಿ ಮಾತನಾಡಬೇಕಾಗಿದೆಯೋ ನನಗೆ ಗೊತ್ತಿಲ್ಲ, ನನ್ನ ಬಂಧುವರ್ಗದವರು, ನನ್ನ ಮಿತ್ರರು ನನಗೆ ದ್ರೋಹ ಮಾಡಿದ್ದಾರೆ. ಯಾರಿಗೆ ಈ ಹೊತ್ತು ಎರಡು ಹೊತ್ತಿನ ಊಟವಿಲ್ಲ, ಒಂದು ಹೊತ್ತಿಗೆ ಇದ್ದರೆ ಒಂದು ಹೊತ್ತಿಗೆ ಇಲ್ಲ ಎಂದು ಬವಣೆ ಪಡುತ್ತಿದ್ದಾನೆ ಅವನಿಗೆ ರಕ್ಷಣೆ ಕೊಡುವುದನ್ನು ಬಿಟ್ಟಿದ್ದೇವೆ. ಇದಕ್ಕಿಂತ ದ್ರೋಹ, ರಾಜಕೀಯ ವ್ಯಭಿಚಾರ ಇನ್ನೊಂದಿಲ್ಲ ಎಂದು ನಾನು ಖಂಡತವಾಗಿ ಹೇಳುತ್ತೇನೆ. ಇದಾಗಬಾರದು. ನಾವು ಏನು ಕಮಿಟ್‌ಮೆಂಟ್ ಮಾಡಿಕೊಂಡು ಬಂದಿದ್ದೇವೆ, ನಾವು ಏನು ಪ್ರಾಮಿಸ್ ಮಾಡಿಕೊಂಡು ಬಂದಿದ್ದೇವೆ, ಅದನೆಲ್ಲ ನಮ್ಮ ಪಾದ, ನಮ್ಮ ಭಾಷಣ, ನಮ್ಮ ಮಾತು ಇವುಗಳಲ್ಲಿ ಮಾತ್ರವಲ್ಲ ಯಾವತ್ತೂ ಕೃತಿಯಲ್ಲಿ ಇಳಿಸಬೇಕು. ಬರೇ ಮಾತಾದರೆ ಅದರಿಂದ ಉಪಯೋಗವಿಲ್ಲ. ಈ ಹೊತ್ತು ಇರತಕ್ಕ ಪ್ರಶ್ನೆ, ನಾನು ಮೊದಲೇ ಹೇಳಿದ ಹಾಗೆ ನನ್ನಂತೆಯೇ ಹತ್ತು ಜನ ಜೀವನ ಮಾಡಬೇಕು, ಒಂದು ಹೊತ್ತಿಗೆ ಇದ್ದರೆ ಇನ್ನೊಂದು ಹೊತ್ತಿಗೆ ಇರುವುದಿಲ್ಲ. ಅಂಥವರಿಗೆ ನಾವು ಏನು ಕೊಡುತ್ತಿದ್ದೇವೆ ಎನ್ನುವುದು ತಿಳುವಳಿಕೆಯುಳ್ಳವರು, ವಿದ್ಯಾವಂತರು ಯೋಚನೆ ಮಾಡಬೇಕಾದ ಪ್ರಶ್ನೆ. ಕೆಲವರು ಅಮೆರಿಕಾ ದೇಶ, ಇನ್ನೊಂದು ದೇಶದ ವಿಚಾರವನ್ನು ಹೇಳುತ್ತಾರೆ. ಅಮೆರಿಕನ್ ಎಕಾನಮಿಗೂ ನಮ್ಮ ಎಕಾನಮಿಗೂ ಯಾವ ಸಂಬಂಧವೂ ಇಲ್ಲ. ಅಮೆರಿಕನ್ ಎಕಾನಮಿಯನ್ನು ನಮ್ಮಲ್ಲಿ ಮಾಡುವುದಕ್ಕಾಗುವದಿಲ್ಲ. ಅಲ್ಲಿನ ಭೂ ವಿಸ್ತೀರ್ಣ ಎಷ್ಟು, ಜನ ಸಂಖ್ಯೆ ಎಷ್ಟು, ವ್ಯವಸಾಯವನ್ನು ಎಷ್ಟು ಜನ ಅವಲಂಬಿಸಿದ್ದಾರೆ ಎಂದು ಯೋಚನೆ ಮಾಡುವುದಾದರೆ ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ಗೊತ್ತಾಗುತ್ತದೆ. ಅಮೆರಿಕಾದಲ್ಲಿ ಕೇವಲ 10 ಪರ್ಸೆಂಟ್ ಜನ ವ್ಯವಸಾಯವನ್ನು ಅವಲಂಬಿಸಿದ್ದಾರೆ. ನಮ್ಮಲ್ಲಿ 90 ಪರ್ಸೆಂಟ್ ವ್ಯವಸಾಯವನ್ನು ನಂಬಿಕೊಂಡಿದ್ದಾರೆ. ಎಷ್ಟು ವ್ಯತ್ಯಾಸವಾಯಿತು? ಅಲ್ಲಿ ಕೇವಲ 20 ಕೋಟಿ ಜನರಿದ್ದಾರೆ, ನಮ್ಮ ದೇಶದ ಮೂರರಷ್ಟು ವಿಸ್ತಾರವಾಗಿದೆ. ಆದುದರಿಂದ ಅಮೆರಿಕನ್ ಎಕಾನಮಿ ಮಾರ್ಗದರ್ಶನವನ್ನು ಹಿಡಿದು ಹೋಗುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಬೇಕು. ನಾವು ಯಾವುದನ್ನು ಅನುಸರಿಸಬೇಕು ಎಂದರೆ ಜಪಾನ್ ದೇಶವನ್ನು. ಅಲ್ಲಿ ಐದು ಎಕರೆಗಿಂತ ಜಾಸ್ತಿ ಜಮೀನು ಯಾರಿಗೂ ಇಲ್ಲ. ಜಪಾನಿಗೂ ನಮ್ಮ ದೇಶಕ್ಕೂ ಏನಾದರೂ ವ್ಯತ್ಯಾಸವಿದೆಯೇ ಎಂದು ನೋಡುವುದಾದರೆ ಎರಡೂ ದೇಶಗಳು ಒಂದೇ ರೀತಿಯಲ್ಲಿವೆ. ಜಪಾನ್ ದೇಶದಲ್ಲಿ ಯಾವ ರೀತಿ ವ್ಯವಸಾಯ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ ಎನ್ನುವುದನ್ನು ತಾವು ಯೋಚನೆ ಮಾಡಿ. ಅವರು ಹೊಂದಿರುವ ತಾಂತ್ರಿಕ ಸೌಲಭ್ಯಗಳನ್ನು ನಾವೂ ಪಡೆಯುವುದಕ್ಕೆ ಪ್ರಯತ್ನ ಮಾಡಿದರೆ ಖಂಡಿತವಾಗಿಯೂ ಕೂಡ ನಾವು ಈ ಹಿಡುವಳಿ ಪ್ರಶ್ನೆಯನ್ನು ಯೋಚನೆ ಮಾಡತಕ್ಕ ಸಮಸ್ಯೆ ಬರುವುದಿಲ್ಲ.

ನಾವು ಇನ್ನೊಂದು ಪ್ರಶ್ನೆಯನ್ನೂ ಯೋಚನೆ ಮಾಡಬೇಕಾಗಿದೆ. ನಾವು ಅರ್ಥಶಾಸ್ತ್ರವನ್ನು ಏನು ಅವಲಂಬಿಸಿಕೊಂಡು ಹೋಗುತ್ತೇವೆ, ಇದು ತಪ್ಪು ಎಂದು ಹೇಳುವವನು ನಾನು. ಈ ದೇಶದಲ್ಲಿ 90 ಪರ್ಸೆಂಟ್ ಜನ ಜಮೀನಿನ ಮೇಲೆ ಅವಲಂಬಿರತಕ್ಕ ಎಕಾನಮಿಯೇ ತಪ್ಪು. ನಾವು ಎಲ್ಲಿಯವರೆಗೆ ಜಮೀನಿನ ಮೇಲೆ ಅವಲಂಬಿಸಿಕೊಂಡಿರತಕ್ಕ ಜನರ ಸಂಖ್ಯೆಯನ್ನು ಕಡಿಮೆ ಮಾಡುವುದಿಲ್ಲ ಅಲ್ಲಿಯವರೆಗೆ ಈ ದೇಶದಲ್ಲಿ ಸಮಭದ್ರವಾದ ಆರ್ಥಿಕ ವ್ಯವಸ್ಥೆ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುವವರಲ್ಲಿ ನಾನು ಒಬ್ಬ. ಅಮೆರಿಕಾ ದೇಶದಲ್ಲಿ ಕೂಡ 40–50 ವರ್ಷಗಳ ಹಿಂದೆ 80 ಪರ್ಸೆಂಟ್ ಜನ ಜಮೀನಿನ ಮೇಲೆ ಅವಲಂಬಿಸಿದ್ದರು. ಈ ಹೊತ್ತು ಅವರ ಮುಂದುವರಿದ ಆರ್ಥಿಕ ವ್ಯವಸ್ಥೆಯಲ್ಲಿ ಜಮೀನಿನ ಮೇಲೆ ಅವಲಂಬಿಸಿಕೊಂಡಿರುವವರ ಸಂಖ್ಯೆ ಬಹಳ ಕಡಮೆಯಾಗಿದೆ. ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡಿಕೊಂಡು ಸೋಗುವಂಥ ಕ್ರಮವನ್ನು ನಾವು ಅನುಸರಿಸುವುದಾದರೆ, ಮಾನ್ಯ ಕೈಗಾರಿಕಾ ಮಂತ್ರಿಗಳು ಭರವಸೆ ಕೊಡುವುದಾದರೆ ಆಗ ಹತ್ತಲ್ಲ, ಹದಿನೈದಲ್ಲ ಇಪ್ಪತ್ತು ಎಕರೆ ಮಿತಿಯನ್ನು ಕೂಡ ಯೋಚನೆ ಮಾಡತಕ್ಕ ಕಾಲ ಬರಬಹುದು. ಅಲ್ಲಿಯವರೆಗೂ 90 ಪರ್ಸೆಂಟ್ ಜನ ಜಮೀನಿನ್ನು ಅವಲಂಬಿಸಿಕೊಂಡಿರುವವರೆಗೂ ಎರಡು ಹೊತ್ತು ಅನ್ನಕ್ಕಾಗಿ ಅವರ ಮೇಲೆ ಅವಲಂಬಿಸಿರುತ್ತಾನೆ ಅಲ್ಲಿಯವರೆಗೂ ನಾವು 15–20 ಸ್ಟ್ಯಾಂಡರ್ಡ್ ಎಕರೆಯನ್ನು ಯೋಚನೆ ಮಾಡತಕ್ಕದ್ದು ಶಕ್ಯವಿಲ್ಲ, ಅದು ಸಾಧ್ಯವಿಲ್ಲದ ಮಾತು.

ಹಲವರು ಹೇಳತಕ್ಕ ಮಾತು ಇಂದಿದೆ, ಹತ್ತು ಎಕರೆ ಜಮೀನು ಈ ಹೊತ್ತು ಕೊಡುತ್ತೀರಿ; ನಾಳೆ ನನಗೆ ಆರು ಮಕ್ಕಳಾದರೆ ಆಗ ಜಮೀನು ಯಾರು ಕೊಡುತ್ತಾರೆ; ಸರ್ಕಾರದವರೇನಾದರೂ ಕೊಡುತ್ತಾರೆಯೇ ? ನನ್ನ ಮಕ್ಕಳು ಮರಿಗಳನ್ನು ಕಾಪಾಡುವುದಕ್ಕೆ ಸರ್ಕಾರದವರು ಭರವಸೆ ಏನಾದರೂ ಇದೆಯೇ ! ನಮ್ಮ ಸಮಾಜವಾದ ಸರ್ಕಾರದಲ್ಲಿ ನಾಳೆ ನಮ್ಮ ಮಕ್ಕಳು ಭಿಕಾರಿಗಳಾಗುವುದಿಲ್ಲ ಎನ್ನುವ ಭರವಸೆ ಏನಾದರೂ ಇದೆಯೇ ಎಂದು ಕೇಳುವವರಿದ್ದಾರೆ. ಇದು ಒಪ್ಪತಕ್ಕ ಪ್ರಶ್ನೆ. ಈ ಪ್ರಶ್ನೆಯನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಸಮಾಜವಾದಿ ಸರ್ಕಾರ ಎಂದು ಹೇಳುವಾಗ ಇಡೀ ಸಮಾಜದ ಹೊರೆ ಸರ್ಕಾರದ ಮೇಲೆ ಇರುತ್ತದೆ ಎನ್ನುವ ಮಾತನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಸಮಾಜದ ಹೊರೆಯನ್ನು ಸರ್ಕಾರ ಎಲ್ಲಿಯವರೆಗೆ ವಹಿಸುವುದಕ್ಕಾಗುವುದಿಲ್ಲ ಅಲ್ಲಿಯವರೆಗೆ ಸಮಾಜವಾದದ ಸರ್ಕಾರವಾಗುವುದಿಲ್ಲ. ನಾವು ಕಾನೂನು ಮಾಡಿ ಅದರ ಪ್ರೊಸ್ ಅಂಡ್ ಕಾನ್ಸ್ ಏನಾಗುತ್ತದೆ, ಅದರ ಪರ್ಯವಸಾನ ಏನಾಗುತ್ತದೆ, ಅದರ ಪರಿಣಾಮ ಸಮಾಜದ ಮೇಲೆ ಏನಾಗುತ್ತದೆ ಎಂದು ಯೋಚನೆ ಮಾಡಬೇಕಾಗುತ್ತದೆ. ಈ ಪ್ರಶ್ನೆಯನ್ನು ಈ ಹೊತ್ತು ಹಳ್ಳಿಗಾಡಿನಲ್ಲಿ ಕೇಳುತ್ತಾರೆ. ನಮಗೆ ಹತ್ತು ಎಕರೆ ಕೊಡುತ್ತೇವೆಂದು ಹೇಳುತ್ತೀರಿ. ನಾಳೆ ಮಕ್ಕಳಾಗಿ, ಅವರಿಗೆ ಜಮೀನು ಕಡಮೆ ಬಿದ್ದರೆ ಯಾರು ಕೊಡುತ್ತಾರೆ, ಅವರ ಹೊಟ್ಟೆ ಪಾಡಿಗೆ ಏನು ಮಾಡುತ್ತೀರಿ ಎಂದು ಕೇಳುತ್ತಾರೆ. ಅವರಿಗೆ ಏನಾದರೂ ಬೇರೆ ನವಲತ್ತು ಕೊಡುವ ಪ್ರಯತ್ನಗಳನ್ನು ಮಾಡುತ್ತೀರಾ ಇದನ್ನೂ ಯೋಚನೆ ಮಾಡಬೇಕು. ರಾಕ್ ಪ್ರಾಜೆನಿ ಆಫ್ ಇಂಗ್ಲೆಂಡ್ ಎಂದು ಇಂಗ್ಲೆಂಡ್ ದೇಶದಲ್ಲಿ ಹಿರೇ ಮಗನಿಗೆ ಮಾತ್ರ ಆಸ್ತಿಯ ಹಕ್ಕು ಬರುತ್ತದೆ. ಉಳಿದವರಿಗೆ ಹಕ್ಕು ಇಲ್ಲ. ಆ ಪ್ರಕಾರ ಇಲ್ಲಿಯೂ ಮಾಡಿದರೆ ಚಿಂತೆ ಇಲ್ಲ. ಅವಿಲ್ಲದ ಹೋದರೆ ಸರ್ಕಾರ ಎಲ್ಲೆಲ್ಲಿ ಕುಟುಂಬದಲ್ಲಿ ಜಾಸ್ತಿ ಜನಸಂಖ್ಯೆ ಇದೆಯೋ ಆ ಜನರ ಯೋಗ ಕ್ಷೇಮ ಮತ್ತು ಕ್ಷೇಮಾಭಿವೃದ್ಧಿಯನ್ನು ಸರ್ಕಾರ ನೋಡಿಕೊಳ್ಳಬೇಕಾಗುತ್ತದೆ. ಇಲ್ಲದೆ ಇದ್ದರೆ ಇದು ಬೃಹದಾಕಾರವಾದ ಸಮಸ್ಯೆಯಾಗಿ ನಿಲ್ಲುತ್ತದೆ.

ಈ ಹೊತ್ತು ತಂದಿರುವ ಭೂಸುಧಾರಣಾ ಕಾನೂನಿನಲ್ಲಿ ಕೆಲವು ನ್ಯೂನತೆಗಳು ನನಗೆ ಕಂಡು ಬಂದಿವೆ ಕಿಲೋಮೀಟರ್ ಅಂತರ, 16 ಕಿಲೋಮೀಟರ್ ಎನ್ನುವುದು ಏನಿದೆ, ಆ ಅಂತರದಲ್ಲಿ ಜಮೀನು ಹೊಂದಿರಬಹುದು. ಅದೇ 17 ಕಿಲೋಮೀಟರ್ ಆದರೆ ಆಗುವುದಿಲ್ಲ ಎನ್ನುವ ವಿಧಿ ಇದೆ. ಈಗಿನ ಯಾಂತ್ರಿಕ ಯುಗದಲ್ಲಿ ಈ 16 ಕಿಲೋಮೀಟರ್ ಅಂತರ ಬೇಕೇ ಎನ್ನುವುದು ನನ್ನ ಪ್ರಶ್ನೆ. ಈಗ ಯಾಂತ್ರಿಕ ರೀತಿಯಲ್ಲಿ ಜಮೀನು ಅಭಿವೃದ್ಧಿ ಮಾಡಿಕೊಂಡು ಬರುತ್ತಿದ್ದೇವೆ. ಈ ದೃಷ್ಟಿಯಿಂದ 16 ಕಿಲೋ ಮೀಟರ್ ಎನ್ನುವ ಅಂತರದ ಅವಶ್ಯಕತೆ ಕಾಣುವುದಿಲ್ಲ. ಈಗ 12 ಸಾವಿರ ರೂಪಾಯಿ ಇನ್‌ಕಂ ಅಂತ ಏನು ಇಟ್ಟಿದ್ದೀರೋ ಅದನ್ನು ಒಪ್ಪುತ್ತೇನೆ. ಒಬ್ಬ ಮನುಷ್ಯನಿಗೆ 12 ಸಾವಿರ ರೂಪಾಯಿ ಇನ್‌ಕಂ ಇರಬೇಕು ಅದಕ್ಕಿಂತ ಜಾಸ್ತಿ ಇರುವವನಿಗೆ ಜಮೀನು ಬೇಕಾಗಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಈ ಬಗ್ಗೆ ನಾನು ಮೊದಲೇ ಹೇಳಿದ ಹಾಗೆ ಆತನ ಕುಟುಂಬ ಬೆಳೆದ ಹಾಗೆ ಅವನ ಯೋಗಕ್ಷೇಮವನ್ನೂ ಸಹ ಗಮನಕ್ಕೆ ತೆಗೆದುಕೊಂಡರೆ ಈ ಕಾನೂನನ್ನು ಒಪ್ಪಬೇಕಾಗುತ್ತದೆ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

5.30 P.M.

ಇನ್ನೊಂದು ವಿಷಯ ರೈತರಿಂದ ಕೇಳುತ್ತಾ ಇರುವುದು, ಇಂಪಾಲದ ರೈತರವಾದ ಏನೆಂದರೆ ನಿಮ್ಮ ಸಮಾಜವಾದ ಕೇವಲ ಭೂಮಾಲೀಕರಿಗೆ ಮಾತ್ರ ಅಂದರೆ ಜಮೀನನ್ನು ಅಪಲಂಬಿಸಿಕೊಂಡಿರ ತಕ್ಕಂಥ ಜನರ ಮೇಲೆ ಮಾತ್ರ ಇದೆಯೆರ್ರಾ ಏತಕ್ಕಾಗಿ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳ ಮೇಲೆ, ಅನೇಕ ದೊಡ್ಡ ದೊಡ್ಡ ಫರ್ಮ್‌ಗಳಲ್ಲಿ ಮ್ಯಾನೇಜಿಂಗ್ ಡೈರಕ್ಟರ್‌ರಾಗಿ 10–20 ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವ ದೊಡ್ಡ ದೊಡ್ಡ ಅಧಿಕಾರಿಗಳ ಮೇಲೆ ನಿಮ್ಮ ದೃಷ್ಟಿ ಇಲ್ಲ ಎಂದು ಅವರು ಕೇಳುತ್ತಿದ್ದಾರೆ. ಈಗ ಉಳುವವನೇ ಭೂಮಿಯ ಮಾಲೀಕ ಎನ್ನುವುದನ್ನು ಮಾತ ನಾಡುತ್ತಾ ಬಂದಿದ್ದೀರಿ....

ಶ್ರೀ ವಾಟಾಳ್ ನಾಗರಾಜ್. –ಅಧ್ಯಕ್ಷರೇ, ಈ ಸಭೆಯಲ್ಲಿ ಮುಖ್ಯವಾದ ಬಿಲ್ಲಿನ ಮೇಲೆ ಮಾತನಾಡುತ್ತಾ ಇರುವಾಗ ಜ್ರೆಜರಿ ಬೆಂಚಿನವರು ಬಹಳ ಜನ ಇಲ್ಲವರ್ರಾ ಎಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ವಿಧಾನಪರಿಷತ್ತು ನಹ ನಡೆಯುತ್ತಾ ಇದೆ ಎನ್ನುವುದನ್ನು ಮರೆಯ ಬೇಡಿ. ಇಲ್ಲಿ ಬೇಕಾದಷ್ಟು ಜನ ಮಂತ್ರಿಗಳು ಇದ್ದಾರಲ್ರಾ. ನೋಡಿ.

Sri C. M. ARUMUGAM.—It is very happy to hear Sri Chandrashekar's speech. His speech must be taken down and noted by every Minister because it is so interesting and valuable speech. The Chief Minister was in the House in the morning but now he is not here. If the Hon'ble Minister for Revenue is not able to be here, atleast the Chief Minister should be here. There are about 23 Ministers. I cannot remember the names of these Ministers and identify who is who and who is here. I want to know whether there is any Revenue Deputy Minister for State. Kindly let me know.

ಶ್ರೀ ವಾಟಾಳ್ ನಾಗರಾಜ್.—ಈ ಬಿಲ್ಲು ರೆವಿನ್ಯೂ ಸಚಿವರಿಗೆ ಸಂಬಂಧಪಟ್ಟದ್ದಾಗಿರು ವುದರಿಂದ ಅದಕ್ಕೆ ಸಂಬಂಧಪಟ್ಟವರು ಯಾರೂ ಕಾಣೆ.

ಅಧ್ಯಕ್ಷರು.—ಇಲ್ಲಿ ಕುಳಿತಿರುವವರಿಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಎನ್ನುವುದು ಗೊತ್ತಿಲ್ಲವೇ?

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೂ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಎನ್ನುವುದು ನನಗೂ ಗೊತ್ತಿದೆ. ಆದ್ದರಿಂದ ನಾನು ಕೇಳುವುದು ಏನೆಂದರೆ ಈ ಸದನದಲ್ಲಿ ಈ ಒಂದು ಮುಖ್ಯ ವಾದ ಬಿಲ್ಲಿನ ಮೇಲೆ ಚರ್ಚೆ ಆಗುತ್ತಿರುವಾಗ ಸದಸ್ಯರು ಕೊಡತಕ್ಕಂಥಾ ಸಲಹೆಗಳನ್ನು ಯಾರು ಏನು ಬರೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಈಗ ರೈತರ ಒಂದು ಮೆರವಣಿಗೆ ಇತ್ತು. ಅವರು ಅಲ್ಲಿಗೆ ಹೋಗಿ ಏನಾದರೂ ಸೇರಿಕೊಂಡರೋ ಏನೋ ಎನ್ನುವ ಅನುಮಾನ ಬಂತು. ಅದು ತಮ್ಮ ಕಿವಿಗೆ ಕೇಳಿಸಿತೋ ಇಲ್ಲವೋ, ಆದ್ದರಿಂದ ತಮ್ಮ ಗಮನಕ್ಕೆ ಬರಲಿ ಎಂದು ಹೇಳಿದೆ.

ಅಧ್ಯಕ್ಷರು.—ತಾವು ಏನು ಹೇಳುತ್ತಾ ಇದ್ದೀರಿ ಎನ್ನುವುದು ನನಗೆ ಗೊತ್ತಾಗಿದೆ. ನನ್ನ ಕಿವಿ ಚೆನ್ನಾಗಿ ಕೇಳಿಸುತ್ತಾ ಇದೆ. ತಾವೇನೂ ಹೇಳಬೇಕಾಗಿಲ್ಲ. ತಾವು ಕುಳಿತುಕೊಳ್ಳಬೇಕು.

Sri C. M. ARUMUGAM.—There was a procession to-day.

MADAM SPEAKER.—How is the Hon'ble Member concerned with it?

Sri C. M. ARUMUGAM.—Some land-lords came in a procession and presented a memorandum to the Chief Minister, Revenue

Minister and also to the Revenue Secretary. I think a memorandum might have been presented to you also. The land-lords and peasants of some of the Ministers and some Legislators of the other-side are also in the procession.

ಶ್ರೀ ವಾಟಾಳ್ ನಾಗರಾಜ್.—ಈಪೊತ್ತು ಭೂಮಾಲೀಕರ ಪೆರವಣಿಗೆ ನಡೆಯುತ್ತಾ ಇದೆ. ಈಗ ಆಡಳಿತ ಕಾಂಗ್ರೆಸ್‌ನಲ್ಲಿ 2 ಗುಂಪು ಆಗಿದೆ. ಒಂದು ಗುಂಪಿನವರು ಅಲ್ಲಿಗೆ ಹೋಗಿದ್ದಾರೆಯೋ ಎನ್ನುವುದು ನನಗೆ ಗೊತ್ತಾಗಬೇಕಲ್ಲ.

ಅಧ್ಯಕ್ಷರು.—ತಮಗೇನೂ ಗೊತ್ತಾಗಬೇಕಾಗಿಲ್ಲ.

Sri C. M. ARUMUGAM.—There is fraction among the Congress 'R' M.L.As. Some of them are siding the land-lords because they themselves are land-lords. But these people have been elected in the name of Indira Gandhi. Some of them are siding the poor peasants. Those who are siding the land-lords may be the route cause for this procession and that is why some of the members are absent. Some of the Ministers are having the lands in excess of the land-ceiling. I want to know whether they are in any way connected with the procession.

MADAM SPEAKER.—To whom the Hon'ble Member is asking the question ?

Sri C. M. ARUMUGAM.—Treasury benches are empty to-day.

MADAM SPEAKER.—They are not empty.

Sri C. M. ARUMUGAM.—I want your ruling.

MADAM SPEAKER.—What sort of ruling is desired by the member ?

Sri C. M. ARUMUGAM.—Our leader of the Opposition raised samething. We want your ruling for that.

MADAM SPEAKER.—There is nothing.

Sri C. M. ARUMUGAM.—I want a clarification atleast.

ಅಧ್ಯಕ್ಷರು.—ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ಬಾಕಿ ಮಂತ್ರಿಗಳಿಗೂ ಕೂಡ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಎಂದು ಹೇಳಿದ್ದೀರಿ. ಆದುದರಿಂದ ನಾವು ಏನು ಒಂದು ಗುರುತರವಾದ ವಿಷಯವನ್ನು ಎತ್ತಿದ್ದೇವೋ ಅದರ ಬಗ್ಗೆ ಅವರು ಉತ್ತರ ಕೊಡಲಿ ಎಂದು ನಾನು ಹೇಳುತ್ತೇನೆ.

Sri C. M. ARUMUGAM.—The land-lords have joined together and they are taking a procession.

ಅಧ್ಯಕ್ಷರು.—ಬೆಂಗಳೂರಿನಲ್ಲಿ ಇಂತಹ ಪ್ರೊಸೆಷನ್ ಬೇಕಾಗಿಲ್ಲ ಅಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಈ ಸಭೆಯಲ್ಲಿ ಈಗ ಭೂಸುಧಾರಣೆ ತಿದ್ದುಪಡಿ ಮಸೂದೆ ಬಗ್ಗೆ ಚರ್ಚೆ ಆಗುತ್ತಾ ಇದೆ. ಈಪೊತ್ತು ಸರ್ಕಾರದ ಪರವಾಗಿ ರೆವಿನ್ಯೂ ಮಂತ್ರಿಗಳಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟವರು ಯಾರಾದರೂ ಆಗಲಿ ಈ ಸಭೆಯಲ್ಲಿರಬೇಕು. ಇವರಿಗೂ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಎನ್ನುವುದೂ ಗೊತ್ತಿದೆ. ನಾನು ಕೇಳುವುದು ಏನೆಂದರೆ ಈಗ ಕಳೆದ 2 ಗಂಟೆಗಳಿಂದಲೂ ಈ ವಿಷಯವಾಗಿ ಚರ್ಚೆಯಾಗುತ್ತಾ ಇದೆ. ಆದುದರಿಂದ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಹೊರಯನ್ನು ಹೊತ್ತಿರತಕ್ಕಂಥ ಶ್ರೀ ಮುಖ್ಯಕಾರ್ಯದರ್ಶಿಯವರೇ ಆಗಲಿ ಯಾರೇ ಆಗಲಿ ಶ್ರೀವಾನ್ ಕಾಗೋಡು ತಿಮ್ಮಪ್ಪನವರು ಕೊಟ್ಟಿರತಕ್ಕಂಥ ಸಲಹೆಗಳನ್ನು ಬರೆದು ಕೊಂಡಿದ್ದರೆ ದಯವಾಡಿ ಈ ಸಭೆಗೆ ತಿಳಿಸಿ. ತಾವು ದಯವಾಡಿ ಮಂತ್ರಿಗಳಿಗೆ ರಕ್ಷಣೆ ಕೊಡಬೇಡಿ.

(ಶ್ರೀ ಹೆಚ್. ಡಿ. ದೇವೇಗೌಡ)

ಈ ಸಭೆಯಲ್ಲಿ ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ಗಂಜೆ ಕಾಲ ನಿರರ್ಗಳವಾಗಿ ಭೂ ಸುಧಾರಣೆ ತಿದ್ದುಪಡಿ ಬಗ್ಗೆ ಉತ್ತಮವಾದ ಭಾಷಣ ಮಾಡಿದ್ದಾರೆ. ಅದರ ಪರಿಶೀಲನೆ ಬಗ್ಗೆ ಏನೇನು ಸಲಹೆಗಳನ್ನು ಸರ್ಕಾರ ಬರೆದುಕೊಂಡಿದೆ ಎನ್ನುವುದನ್ನು ತಿಳಿಸಬೇಕು.

ಅಧ್ಯಕ್ಷರು.—ತಮಗೆ ಗೊತ್ತಿರುವ ಹಾಗೆ ಎಷ್ಟೋ ಜನ ಮಂತ್ರಿಗಳು ಆ ಬಗ್ಗೆ ನೋಟ್ ಮಾಡಿಕೊಂಡಿದ್ದಾರೆ. ಕಂದಾಯ ಸಚಿವರು ಈ ಬಗ್ಗೆ ಉತ್ತರ ಕೊಡುವಾಗ ಆಫೀಷಿಯಲ್ ಪ್ರೊಸೀಡಿಂಗ್ಸ್‌ನ್ನೂ ನೋಡಿ ಉತ್ತರ ಕೊಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಈರೀತಿಯಾಗಿ ಈ ವಿಷಯವನ್ನು ಲಘುವಾಗಿ ತಗೆದು ಕೊಳ್ಳಬೇಡಿ. They must be more serious.

ಅಧ್ಯಕ್ಷರು.—ಅವರು ಉತ್ತರ ಹೇಳುವಾಗ ನೀವು ಕೇಳಿದ ಪ್ರಶ್ನೆಗೆ ಉತ್ತರ ಇಲ್ಲದಿದ್ದರೆ ಅವರು ಬರದುಕೊಂಡಿಲ್ಲ, ಅವರು ನೋಟೀಸ್ ಮಾಡಿಲ್ಲ ಎನ್ನುವುದು ಅರ್ಥವಾಗುತ್ತದೆ.

ಶ್ರೀ ಹೆಚ್. ಡಿ ದೇವೇಗೌಡ.—ತಮಗೆ 15 ವರ್ಷದ ಅನುಭವ ಇದೆ, ತಮಗೂ ಗೊತ್ತಿದೆ. ಈಗ ಮಾತನಾಡಿದಂಥ ಗಹನವಾದ ವಿಷಯವನ್ನು ಯಾವ ಸಚಿವರು ತೆಗೆದುಕೊಂಡಿದ್ದಾರೆ ದಯ ಮಾಡಿ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳಿದ ಸಲಹೆಗಳನ್ನು ನಾವು ನೋಟ್ ಮಾಡಿಕೊಳ್ಳುತ್ತಿದ್ದೇವೆ. ಇದರ ಜೊತೆಗೆ ನಮ್ಮ ಅಂಡರ್ ಸೆಕ್ರೆಟರಿಯವರು ನೋಟ್ ಮಾಡಿಕೊಂಡು ಅವರಿಗೆ ಸಹಾಯಕರಾಗಿರುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಆಫೀಷಿಯಲ್ ಗ್ಯಾಲರಿಯಲ್ಲಿ ಕುಳಿತುಕೊಂಡು ಅಂಡರ್ ಸೆಕ್ರೆಟರಿಯವರು ನೋಟ್ ಮಾಡಿಕೊಳ್ಳುವುದಾದರೆ, ಇಲ್ಲಿ ರಿಪೋರ್ಟರ್ಸ್ ಈ ಬಗ್ಗೆ ರಿಪೋರ್ಟ್ ತೆಗೆದುಕೊಳ್ಳುವುದಾದರೆ ನೀವೆಲ್ಲಾ ಜ್ರೆಜರಿ ಬೆಂಚಿನವರು ಇಲ್ಲಿರುವುದು ಬೇಕಾಗಿಲ್ಲ. ನೀವೆಲ್ಲಾ ಖಾಲಿ ಮಾಡಿಬಿಟ್ಟು ಹೋಗಿರಿ. ಈ ಸಭೆಯಲ್ಲಿ ಗಹನವಾದ ವಿಚಾರ ನಡೆಯುವಾಗ ಸರ್ಕಾರದವರು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ನಾಡಗೌಡ ನಾಗರಾಜ್.—ಶ್ರೀ ಮಲ್ಲಿಕಾರ್ಜುನಸ್ವಾಮಿಯವರು 10 ಸ್ಟ್ಯಾಂಡರ್ಡ್ ಎಕರೆ ಇರಬೇಕೆನ್ನುವ ಭೂಮಾಲೀಕರ ಪರವಾಗಿ ಸೇರಬೇಕೊ, 15 ಸ್ಟ್ಯಾಂಡರ್ಡ್ ಎಕರೆ ಇರಬೇಕೆನ್ನುವ ಭೂಮಾಲೀಕರ ಪರವಾಗಿ ಸೇರಬೇಕೋ ಎನ್ನುವ ವಿಷಯವಾಗಿ ಮಾತನಾಡುತ್ತಿದ್ದರು. ಅವರು ಹೊರಗಡೆ ಇದ್ದುದರಿಂದ ನನಗೆ ಅನುಮಾನ ಬಂತು. ಇದರ ಮಧ್ಯೆ ಭೂ ಮಾಲೀಕರ ಮೇರವಣಿಗೆ ಬಂತು. ಆದುದರಿಂದ ಅವರು ಅಲ್ಲಿಗೆ ಏನಾದರೂ ಹೋಗಿ ಸೇರಿದರೋ ಎನ್ನುವ ಅನುಮಾನ ಬಂತು.

ಅಧ್ಯಕ್ಷರು.—ಅದರಲ್ಲಿ ಅನುಮಾನ ಏನೂ ಇಲ್ಲ. ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರಲ್ಲಿ ನನ್ನದೊಂದು ಮನವಿ. ಕೆಲವರಲ್ಲಿ ಈಪೊತ್ತು ಭೂಮಾಲೀಕರ ಮೆರವಣಿಗೆ ನಡೆದಿದೆ ಎನ್ನುವ ಭಾವನೆ ಬಂದಿದೆ. ನನಗೆ ತಿಳಿದಿರುವ ಪ್ರಕಾರ ಅದು ಭೂಮಾಲೀಕರ ಮೆರವಣಿಗೆ ಇರಲಾರದು. ಭೂಮಾಲೀಕರ ಮೆರವಣಿಗೆ ಈ ವರ್ಷದಲ್ಲೇ ನಡೆದಿಲ್ಲ. ನಾಳೆಯೂ ನಡೆಯುತ್ತಾ ಇಲ್ಲ. ಮುಂದೆ ಅವರು ಮಾಡುತ್ತಾರೋ ಏನೋ ಗೊತ್ತಿಲ್ಲ. ಈಪೊತ್ತು ನಡೆಯುತ್ತಾ ಇರುವ ಮೆರವಣಿಗೆ ರೈತರು ಮಾನ್ಯ ಸಚಿವರಿಗೆ ತಮ್ಮ ಅಹವಾಲನ್ನು ಹೇಳುವುದಕ್ಕೆ ಬಂದಿದ್ದಾರೆ. ಈಪೊತ್ತು ಭೂಮಾಲೀಕರ ಮೆರವಣಿಗೆ ನಡೆದಿಲ್ಲ ಎಂದು ಹೇಳುತ್ತೇನೆ.

Sri C. M. ARUMUGAM.—Madam Speaker, we are satisfied when we bring such matters to your notice. Our complaint is that whatever has been said in this House is not being noted down. You may say some officers note it down. Our impression is that whatever has been said on either side of the House has not been noted down and attention is not paid by the Government. Government means Ministers and not officers. Therefore, Mr. Deve Gowda raised this point. If at all the Ministers or Government have noted

down, let them repeat any points and we will know whether they have noted down or not.

MADAM SPEAKER.—I have seen Mr. Ghorpade taking down the points. What the Hon'ble Member is saying is not at all true. Sri Arumugham was not here when he noted down.

Sri C. M. ARUMUGAM.—I was in the precincts of the Assembly. You must take it seriously and give a ruling.

MADAM SPEAKER.—I saw Mr. Ghorpade taking down some points. May be he will hand it down to the Hon'ble Revenue Minister.

Sri C. M. ARUMUGHAM.—Particularly when a Bill of such importance, which has been allotted one week—we do not know whether it will be referred to the Select Committee or not—is being discussed, it is necessary that the Speaker should instruct the concerned Minister to remain in the House. That is my submission.

MADAM SPEAKER.—We will ask the Minister to be here, hereafterwards. I have seen Mr. Ghorpade taking down the points.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮೂಲಭೂತವಾದ ಪ್ರಶ್ನೆಯನ್ನು ಮುರೆತು ಸಮಾಜವಾದ ಎಂದರೆ ಬರೀ ರೈತವರ್ಗದಮೇಲೆ ಮಾತ್ರ ನಿಮ್ಮ ಗಥಾಪ್ರಹಾರವೇ ಅಥವಾ ಬೇರೆ ಕಪ್ಪು ಹಣ ಇಟ್ಟುಕೊಂಡಿರತಕ್ಕ ಲಕ್ಷಾಂತರ ರೂಪಾಯಿ ಒಳಗೆ ಬಚ್ಚಿಟ್ಟುಕೊಂಡಿರತಕ್ಕ ಜನರನ್ನು ಮುರೆತಿದ್ದೀರಿ ಎನ್ನುವ ಟೀಕೆ ನಮ್ಮ ಪಕ್ಷದಮೇಲೆ ಒಳಗೂ ಮತ್ತು ಹೊರಗೂ ಕೆಲವರಿಂದ ಕೇಳಿ ಬರುತ್ತಿದೆ. ಎಲ್ಲೆಲ್ಲೂ ನಮ್ಮ ವಾದ ಇದೆ. ಸಮಾಜವಾದ ಬರೀ ರೈತವರ್ಗದಮೇಲೆ ಮಾತ್ರ ಇರತಕ್ಕದ್ದು ಅಲ್ಲ. ಸಮಾಜವಾದ ಎಂದಾಗ ಎಲ್ಲಾ ಉತ್ಪನ್ನ ಮೂಲಗಳು ಕೂಡ ಸಮಾಜಕ್ಕೆ ಸಂದಾಯವಾಗಬೇಕು ಎನ್ನುವ ತತ್ವವನ್ನು ನಮ್ಮ ಪಕ್ಷ ಒಪ್ಪಿದೆ. ಸರ್ಕಾರವೂ ಒಪ್ಪಿದೆ. ಆದರೆ ಎಲ್ಲವನ್ನೂ ಒಂದೇ ಸಲ ತರಬೇಕು ಎನ್ನುವ ನೀತಿ ನನಗಂತೂ ಅರ್ಥವಾಗುವುದಿಲ್ಲ. ಹಂತಹಂತವಾಗಿ ಏನಾದರೂ ಪ್ರಯೋಗ ಮಾಡಬೇಕೇ ಹೊರತು ಎಲ್ಲವನ್ನೂ ಒಂದೇಸಾರಿ ಎಲ್ಲಾದೇಶದಲ್ಲಿ ಇರತಕ್ಕ ಸ್ವತ್ತನ್ನು ಸರ್ಕಾರ ತೆಗೆದುಕೊಳ್ಳಬೇಕು ಎನ್ನುವುದಾದರೆ ಅದು ಆದರೂ ಸರಿ. ರಷ್ಯ ದೇಶದಲ್ಲಿ ಇರತಕ್ಕ ಸಮಾಜವಾದ ಚೈನಾದಲ್ಲಿರುವ ಸಮಾಜವಾದ ತತ್ವವನ್ನು ಒಪ್ಪುವುದಾದರೆ ನಾನು ಎಂದೂ ಸಿದ್ಧ. ಕಾನ್ಸೆಪ್ಟ್ ಆಫ್ ಪ್ರಾಪರ್ಟಿಏನು ಇದೆ ಇದು ಬಹಳ ಹಳೆಯಕಾಲದ ಕಂದಾಚಾರ. ಇದು ಬೇಡ ಇದು ಹೋಗಬೇಕು, ನವ ಸಮಾಜ ನಿರ್ಮಾಣ ಆಗಬೇಕಾದರೆ ಸ್ವತ್ತಿನ ಮೇಲೆ ಇರತಕ್ಕ ವ್ಯಾಮೋಹವನ್ನು ರೂಢಮೂಲವಾಗಿ ಕಿತ್ತು ಹಾಕಬೇಕು. ಇಡೀ ದೇಶದ ಸ್ವತ್ತು ಇಡೀ ಸಮಾಜಕ್ಕೆ ಸೇರಬೇಕು ಎನ್ನುವ ನೀತಿ ಬಹಳ ಸ್ಪಷ್ಟವಾದ ನೀತಿ, ಅದು ಅಂತಿಮ ಗುರಿಯಾಗುತ್ತದೆ ಅಂತಿಮ ಗುರಿಗೆ ಹೋಗಿ ತಲುಪಬೇಕಾದರೆ ಹೆಜ್ಜೆ ಹೆಜ್ಜೆಹೋಗಬೇಕು. ಒಂದೇ ಸಾರಿ ಹತ್ತುವುದಕ್ಕೆ ಆಗುವುದಿಲ್ಲ. ಒಂದೊಂದು ಮೆಟ್ಟಿಲನ್ನು ನಾವು ಹತ್ತಬೇಕು. ಹಾಗಲ್ಲದೆ, ಸಮಾಜವಾದ ತರುತ್ತೇವೆ ಎಂದು ಹೇಳಿ ಈ ರೀತಿ ಮಾಡುತ್ತಾಹೋದರೆ ಇದು ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳತಕ್ಕ ಒಂದು ವಾದವೇ ಹೊರತು ಇದರಲ್ಲಿ ಹುರುಳಿಲ್ಲ. ಒಂದು ಆದಕೂಡಲೇ ಮತ್ತೊಂದು ಬಂದೇ ಬರುತ್ತದೆ. ಇವೊತ್ತು ನಾವು ಏನು ಭೂಸುಧಾರಣೆ ತರುತ್ತೇವೆ ಎಂದು ಹೇಳುತ್ತಿದ್ದೇವೆ ಈ ಭೂಸುಧಾರಣೆ 25 ವರ್ಷಗಳಿಂದ ಬರೀ ಪೇಪರ್‌ನಲ್ಲಿ ಉಳಿದಿದೆ. ಪೇಪರ್‌ಮೇಲೆ ಉಳಿದಿರತಕ್ಕ ಈ ಭೂಸುಧಾರಣೆಯನ್ನು ಕಾರ್ಯಗತ ಮಾಡಬೇಕು ಎಂದು ಹೊರಟಿರುವಾಗ ಬೇರೆ ಇನ್ನೊಂದು ವಾದವನ್ನು ನಾವು ತರುವುದು ಉಚಿತವಲ್ಲ. ನೀವು ಮಾಡತಕ್ಕ ಕಾರ್ಯಾಚರಣೆ ಮೊದಲಿನಿಂದ ಹಂತಹಂತವಾಗಿ ಮಾಡಿ ಪೂರೈಸಿದರೆ 5 ವರ್ಷಗಳಲ್ಲಿ ಎಲ್ಲವನ್ನು ಪೂರೈಸುವುದಕ್ಕೆ ಸಾಧ್ಯವಿದೆ. ಅದು ಬಿಟ್ಟು ಎಲ್ಲವನ್ನೂ ಒಂದೇ ಸಾರಿ ಮಾಡುತ್ತೇವೆಂದು ಹೇಳುವುದಾದರೆ, ಐದು ವರ್ಷವಲ್ಲ, ಎಷ್ಟು ವರ್ಷವಾದರೂ ಸಾಧ್ಯವಿಲ್ಲ, ಇದು ಸತ್ಯವಾದ ಮಾತು. ಈ ಸಮಾಜವಾದ ಬರೀ ರೈತರಿಗೆ, ಭೂಮಾಲಿಕರಿಗೆ ಮಾತ್ರ ಮೀಸಲಾಗಿದೆ ಎನ್ನುವ ತತ್ವವನ್ನು ನಾನು ಒಪ್ಪುವುದಿಲ್ಲ ಮತ್ತು ನಮ್ಮ ಪಕ್ಷದವರು ಒಪ್ಪುವುದಿಲ್ಲ. ಎಲ್ಲಾ ವರ್ಗದ ಸಂಪನ್ಮೂಲಗಳನ್ನು ಕೂಡ ಸಮಾಜಕ್ಕೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಸೇರಿಸಿ ಒಂದು ಮಿತಿಯನ್ನು ನಿರ್ಮಾಣ ಮಾಡಬೇಕು ಎನ್ನುವ ತತ್ವ ಎಲ್ಲರೂ ಒಪ್ಪತಕ್ಕ ಮಾತು. ದೇಶದಲ್ಲಿರತಕ್ಕ ಜನಬಾಹುಳ್ಯದ ಅಭಿಪ್ರಾಯ ಏನಿದೆ ಅದನ್ನು ಅನುಸರಿಸಿಕೊಂಡು ಹೋಗಬೇಕೇ ಹೊರತು ಬೇರೆ ಯಾವ ತತ್ವವನ್ನು ಅನುಸರಿಸುವುದು ಸಾಧ್ಯವಿಲ್ಲ. ಈ ವಿಚಾರವನ್ನು ಪ್ರತಿಯೊಬ್ಬ ವಿಚಾರಪರ, ಪ್ರತಿಯೊಬ್ಬ ಯೋಚನೆ ಮಾಡತಕ್ಕ ಶಕ್ತಿ ಇರುವವನು ಒಪ್ಪಿಯೇ ಒಪ್ಪುತ್ತಾನೆ. ಅಮೆರಿಕಾದ ಎಕಾನಮಿಯನ್ನು ನಮ್ಮ ದೇಶದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಮೊದಲೇ ಹೇಳಿದೆ. ನಾವು ಜಪಾನ್ ಮಾದರಿಯ ಎಕಾನಾಮಿಯನ್ನು ಅನುಸರಿಸಬೇಕೇ ಹೊರತು ಅಮೆರಿಕಾ ದೇಶದ ಎಕಾನಾಮಿಯನ್ನು ಅನುಸರಿಸುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಇರತಕ್ಕ ಪರಿಸ್ಥಿತಿಯನ್ನು ಜನ ಯೋಚನೆ ಮಾಡುವುದಾದರೆ ಜಪಾನ್ ಪದ್ಧತಿಯನ್ನು ಅನುಸರಿಸಬೇಕು.

ಇಲ್ಲಿಯವರೆಗೂ ನಡೆದುಕೊಂಡುಬಂದ ಸಮಾಜದ ನಡೆವಳಿಕೆಗೆ ನಮ್ಮ ಧರ್ಮದ ಅಂಧತೆಯೇ ಕಾರಣ. ಅವನು ಪೂರ್ವ ಜನ್ಮದಲ್ಲಿ ಪುಣ್ಯ ಮಾಡಿದ್ದಾನೆ ಆದ್ದರಿಂದ ಅವನಿಗೆ ಚೆನ್ನಾಗಿ ಆಯಿತು, ನಾನು ಪೂರ್ವ ಜನ್ಮದಲ್ಲಿ ಏನೋ ದುಷ್‌ಕರ್ಮವನ್ನು ಮಾಡಿದ್ದೆ ಅಥವಾ ಪಾಪ ಮಾಡಿದ್ದೆ ಆದ್ದರಿಂದ ಈಗ ಆ ಪಾಪ ನನಗೆ ಬಂದು ತಟ್ಟಿದೆ, ಈಗಲಾದರೂ ಧರ್ಮಿಷ್ಠನಾಗಿ ನಡೆದುಕೊಂಡರೆ ಇನ್ನೊಂದು ಜನ್ಮದಲ್ಲಿ ಒಳ್ಳೆಯದಾಗುತ್ತದೆ ಎನ್ನುವ ಭಾವನೆ ಜನರಲ್ಲಿ ಇತ್ತು. ಇನ್ನು ಜನತೆಗೆ ಈ ರೀತಿ ನಾವು ಹೇಳಿಕೊಡಬೇಕಾದ ಅವಶ್ಯಕತೆ ಇಲ್ಲ. ಇನ್ನೊಂದು ಜನ್ಮದಲ್ಲಿ ಸುಖ ಬರುತ್ತದೆ, ಇನ್ನೊಂದು ಜನ್ಮದಲ್ಲಿ ಉತ್ತಮ ವರ್ಗಕ್ಕೆ ಹೋಗುತ್ತೇವೆ, ಇನ್ನೊಂದು ಜನ್ಮದಲ್ಲಿ ಉತ್ತಮ ವರ್ಗದಲ್ಲಿ ಹುಟ್ಟುತ್ತೇವೆ ಅನ್ನುವ ಮೂಢ ನಂಬಿಕೆ ಬರುವಂತೆ ಅವರಿಗೆ ಇಲ್ಲಿಯವರೆಗೆ ಏನು ಹೇಳಿಕೊಟ್ಟಿತ್ತೋ, ಆ ಪಾಠ ನಮ್ಮನ್ನು ಇಲ್ಲಿಯವರೆಗೆ ರಕ್ಷಣೆ ಮಾಡಿಕೊಂಡು ಬಂತು. ಆದರೆ ಜನತೆ ಈಗ ಎಜ್ಯುಕೇಟ್ ಹೋಗಿದೆ ಜನತೆ ಯೋಚನೆ ಮಾಡತಕ್ಕ ಶಕ್ತಿಯನ್ನು ಹೊಂದಿದೆ. ಆದ್ದರಿಂದ ಇನ್ನುಮುಂದೆ ನಮಗೆ ಭಯ ತಪ್ಪಿದ್ದಲ್ಲ. ಎಲ್ಲಿಯವರೆಗೆ ಜನರನ್ನು ನಾವು ಮೌಢ್ಯದಿಂದ ಇಟ್ಟಿರುತ್ತೇವೆಯೋ ಅಲ್ಲಿಯವರೆಗೆ ಅವರನ್ನು ಮೋಸ ಮಾಡುವುದಕ್ಕೆ ಸಾಧ್ಯ. ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆ, we cannot fool all men at all times ಎಂದು. ನಾವು ಎಲ್ಲರನ್ನೂ ಎಲ್ಲಾ ಕಾಲದಲ್ಲಿ ಮೋಸ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲಿಯೋ ಒಂದು ಕಾಲ ಒಂದು ಸಮಯದಲ್ಲಿ ಒಂದು ಸಾರಿ ಮೋಸ ಮಾಡಲಿಕ್ಕೆ ಬರುತ್ತದೆಯೇ ಹೊರತು ಎಲ್ಲಾ ಕಾಲದಲ್ಲಿ ಮೋಸ ಮಾಡಲಿಕ್ಕೆ ಸಾಧ್ಯವಿಲ್ಲ. ನಮ್ಮ ಪಕ್ಷದಿಂದ ಜನ ನಿರೀಕ್ಷಣೆ ಮಾಡುತ್ತಾರೆ, ಏನೋ ಕೊಡುತ್ತಾರೆ, ಏನೋ ನೀಡುತ್ತಾರೆ. ನಮ್ಮ ಕಷ್ಟಕಾರ್ಪಣ್ಯಗಳನ್ನು ಕಳೆಯುತ್ತಾರೆ ಎಂದು. ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಏದು ವರ್ಷದಲ್ಲಿ ನಿರ್ವಹಿಸದೆ ಹೋದರೆ ನಾನು ಎಂ ಎಲ್.ಎ. ಆಗಿ ಆಯ್ಕೆ ಆಗಲು ಪುನಃ ಚುನಾವಣೆಗೆ ನಿಲ್ಲುವುದಿಲ್ಲ, ಬಾಕಿಯವರ ವಿಷಯ ನನಗೆ ಗೊತ್ತಿಲ್ಲ. ನಮ್ಮ ತತ್ವದಿಂದ ಕ್ರಾಂತಿ ಮಾಡುತ್ತೇವೆ ಎಂದು ಹೊರಟಿದ್ದೇವೆ, ರಾಮನ ಕಾಲದಲ್ಲಿ ಇರಲಿಲ್ಲ, ಅಶೋಕನ ಕಾಲದಲ್ಲಿ ಇರಲಿಲ್ಲ, ಇಂದಿರಾಜಿಯವರ ಕಾಲದಲ್ಲಿ ಕ್ರಾಂತಿ ಮಾಡುತ್ತೇವೆ ಎಂದು ಹೇಳಿಕೊಂಡು ಬಂದು ಕ್ರಾಂತಿ ಹೋಗಿ ಭ್ರಾಂತಿ ಆದರೆ ಬಹಳ ಕಷ್ಟ. ನಮಗೆ ಜನ ಬೆಟ್ಟು ಮಾಡಿ ತೋರಿಸತಕ್ಕ ಕಾಲ ಸನ್ನಿಹಿತ ವಾಗುತ್ತಿದೆ.

ನಾನು ಹೇಳುವುದು ಇಷ್ಟೆ, ನಾವು ಮೂಲಭೂತವಾಗಿ ನೋಡತಕ್ಕ ಸಮಸ್ಯೆಯನ್ನು ಒಂದೊಂದು ಹಂತ ಹಂತದಲ್ಲಿ ನೋಡುವುದಾದರೆ ಈ ಬಿಲ್ಲಿನಲ್ಲಿ ಮೊದಲನೆಯದಾಗಿ ಆರ್ಚರ್ಡ್ ಹಾಕಿದ್ದೇವೆ; ಈ ಆರ್ಚರ್ಡ್ ಒಳಗೆ ತೆಂಗಿನ ತೋಟವನ್ನು ಸೇರಿಸಿದ್ದೇವೆ. ಪ್ಲೆಯಿಕ್ಕಿಕವಾಗಿ ಹೇಳುವುದಾದರೆ, ಇದನ್ನು ಈ ಆರ್ಚರ್ಡ್ ಒಳಗೆ ಸೇರಿಸುವುದರಿಂದ ಸಮಾಜಕ್ಕೆ ಅನ್ಯಾಯ ಮಾಡುತ್ತೇವೆ ಎಂದು ನನಗನ್ನಿಸುತ್ತದೆ. ಇವತ್ತು ತೆಂಗಿನ ಕಾಯಿಯ ಬೆಲೆ, ಮಾರ್ಕೆಟ್ಟಿಗೆ ಹೋದರೆ, 75-80 ಪೈಸೆಗೆ ಕಡಿಮೆ ಸಿಕ್ಕುವುದಿಲ್ಲ. ಒಂದು ಎಕರೆ ತೆಂಗಿನ ತೋಟದಲ್ಲಿ ಎಷ್ಟು ಉತ್ಪತ್ತಿ ಇದೆ, ತೆಂಗಿನ ತೋಟಕ್ಕೆ ಎಕ್ಸ್‌ಟೆಂಪ್‌ಷನ್ ಕೊಡುವ ಪರಿಸ್ಥಿತಿ ಏನೋ ಗೊತ್ತಾಗುವುದಿಲ್ಲ. ಉತ್ಪತ್ತಿ ಆಧಾರದ ಮೇಲೆ ಹೇಳುವುದಾದರೆ, ತೆಂಗಿನ ತೋಟದ ಉತ್ಪತ್ತಿ ಅಡಿಕೆ ತೋಟದ ಉತ್ಪತ್ತಿ ಒಂದೇ ಬರುತ್ತದೆ. ಅಡಿಕೆ ತೋಟ ಮಾಡಿರುವವರು ಏನು ಪಾಪ ಮಾಡಿರುತ್ತಾರೆ? ತೆಂಗಿನ ತೋಟ ಮಾಡಿರುವವರು ಏನು ಪುಣ್ಯ ಮಾಡಿರುತ್ತಾರೆ? ಇದು ನನಗೆ ಅರ್ಥವಾಗುವುದಿಲ್ಲ. ಇದನ್ನು ನಾವು ಸ್ವಲ್ಪ ವ್ಯತ್ಯಾಸ ಮಾಡಬೇಕೆಂದು ನನಗನ್ನಿಸುತ್ತದೆ. ಕಾಫಿ ತೋಟದ ಮೇಲೆ ಏನೋ ಗಾರುಡಿ ವಿದ್ಯೆಯನ್ನು ಮಾಡಿದ್ದಾರೆ. ಕಾಫಿ ತೋಟಕ್ಕೆ ಭೂಸುಧಾರಣೆ ಅಳವಡಿಸಿಕೊಂಡು ಬಿಟ್ಟರೆ, ಫಾರಿನ್ ಎಕ್ಸ್‌ಚೆಂಜ್ ಸಿಕ್ಕುವುದಿಲ್ಲ, ನ್ಯಾಷನಲ್ ಎಕಾನಮಿ ಬ್ಯಾಂಕ್ರಪ್ಟ್‌ಸಿ ಆಗುತ್ತದೆ

ಎಂದು ರಾಬಿ ನಡೆದು ಬಿಟ್ಟಿದೆ. ಅದು ನಮ್ಮ ಮೇಲೆ ಬೀಳುತ್ತದೆ. ನಾವು ರಾಬಿಯಿಂಗ್ ಕೂಡ ನಾವು ಬಿಡಬೇಕು. ಇವತ್ತು 500–1000 ಎಕರೆ ಕಾಫಿ ತೋಟ ಇದ್ದರೆ ಸಾಧ್ಯ. 25–10 ಎಕರೆ ಕಾಫಿ ತೋಟ ಇದ್ದರೆ ಸಾಧ್ಯವಿಲ್ಲ ಎಂದು ಹೇಳುವ ವಾದ ಸುಳ್ಳು. 10 ಎಕರೆ ಕಾಫಿ ತೋಟದಿಂದ ಕುಟುಂಬ ನಿರ್ವಹಣೆ ಮಾಡುವ, ಸಂಸಾರಗಳು ಎಷ್ಟೋ ಇವೆ. 500–1000 ಎಕರೆ ಇರಬೇಕು ಎನ್ನುವ ತತ್ವವನ್ನು ಬಿಡಬೇಕು. ನೆಲದ ದಾಹ ಇರುವ ಜನರು ಈ ತತ್ವವನ್ನು ಹೇಳುತ್ತಾರೆಯೇ ಹೊರತು ವಾಸ್ತವಿಕಕ್ಕೆ ಇದು ದೂರವಾದ ಮಾತು. ಮನುಷ್ಯನಿಗೆ ಬೇಕಾದದ್ದು ಆರು ಅಡಿ ಮಾತ್ರ, ಆರು ಅಡಿಗಿಂತ ಜಾಸ್ತಿ ಯಾರಿಗೂ ಬೇಕಿಲ್ಲ. ನಾವು ಹೆಚ್ಚು ಹಿಡುವಳಿಯನ್ನು ಹಿಡಿದು ಕೊಂಡು ವಾದ ಮಾಡತಕ್ಕ ಜನರನ್ನು ಪ್ರಶ್ನೆ ಮಾಡಬೇಕಾಗಿದೆ. ಇದರ ಬಗ್ಗೆ ನಾನು ಸ್ವಂತ ಅನುಭವದಿಂದ ಹೇಳಬೇಕಾದರೆ, ಸಾಗರ ತಾಲ್ಲೂಕಿನಲ್ಲಿ ಎರಡು ಎಕರೆ, ಮೂರು ಎಕರೆ, ನಾಲ್ಕು ಎಕರೆಯ ಮೇಲೆ ಬಾಗಾಯತು ಇಲ್ಲವೇ ಇಲ್ಲ. ಈ ವಿಷಯ ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರಿಗೆ ಮತ್ತು ಬಂಗಾರಪ್ಪನವರಿಗೆ ಗೊತ್ತು. ಅದೇ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 300–400 ಎಕರೆ ಬಾಗಾಯತು ಇದ್ದರೆ ಸಾಗರ ತಾಲ್ಲೂಕಿನಲ್ಲಿ ಎರಡು ಎಕರೆ ಬಾಗಾಯತು ಇದೆ ಎಕರೆಗೆ 100–125 ಮಣ ಅಡಿಕೆ ತೆಗೆಯುತ್ತಾರೆ. ಅದೇ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಎಕರೆಗೆ 15 ಮಣ ತೆಗೆಯುತ್ತಾರೆ. ಹೆಚ್ಚಿಗೆ ಭೂಮಿಯನ್ನು ಇಟ್ಟುಕೊಂಡ ಹಾಗೆನಮಗೆ ವ್ಯವಸ್ಥಿತವಾದ ರೀತಿಯಲ್ಲಿ ನೋಡಿಕೊಳ್ಳುವುದು ಕಷ್ಟ ಎನ್ನುವುದು ಇದರಿಂದ ಗೊತ್ತಾಗುತ್ತದೆ. ನಾವು ವಿಸ್ತೀರ್ಣ ಜಾಸ್ತಿ ಆದ ಹಾಗೆ, ಗಮನ ಕೊಡಬೇಕಾದ್ದಕ್ಕೆ ಕೊಡುವುದಕ್ಕಾಗುವುದಿಲ್ಲ. ಇದು ವಾಸ್ತವಿಕವಾಗಿ, ಪ್ರಾಯೋಗಿಕವಾಗಿ ಕಂಡಿರತಕ್ಕ ಮತ್ತು ಅನುಭವಿಸಿರತಕ್ಕ ವಿಚಾರ. ನಮ್ಮಲ್ಲಿ ಒಂದ ಗಾದೆ ಇದೆ, ಇರುವೆಯಾಗಿ ಸಕ್ಕರೆ ತಿನ್ನಬೇಕು, ಆನೆಯಾಗಿ ಸೊಪ್ಪು ತಿನ್ನಬಾರದು ಎಂದು. ದೊಡ್ಡ ದೊಡ್ಡ ವಹಿವಾಟು ಎಂದರೆ, ದೊಡ್ಡ ವಹಿವಾಟಿನಲ್ಲಿ ಸೋರಿ ಸೋರಿ ಹೋಗುವುದು ಗೊತ್ತಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಆನೆಯಾಗಿದ್ದೀರಿ, ಮುಂದಿನ ಜನ್ಮದಲ್ಲಿ ಇರುವೆಯಾಗಬಹುದು.

ಅಧ್ಯಕ್ಷರು.—ಸಭೆಯನ್ನು ಅಡ್ಜರ್ನ್ ಮಾಡುವುದಕ್ಕೆ ಮುಂಚೆ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಈ ಸಭೆಯು ಶ್ರೀ ಆರ್ಮುಗಂ ಅವರನ್ನು ಏಕ ಸದಸ್ಯ ಆಯೋಗಕ್ಕೆ ನೇಮಕ ಮಾಡಿದ್ದಾರೆ. ಅವರು ನಮ್ಮ ಲೆಜಿಸ್ಲೇಚರ್ ಸೆಕ್ರೆಟರಿಯವರನ್ನು ಕಾಂಟ್ಯಾಕ್ಟ್ ಮಾಡಿ ಅವರ ಮುಂದಿನ ಏರ್ಪಾಡುಗಳನ್ನು ಮಾಡಿಕೊಳ್ಳಬಹುದು. ಇದಕ್ಕೆ ಎಲ್ಲ ಸದಸ್ಯರುಗಳು ಒಪ್ಪಿಕೊಂಡಿದ್ದಾರೆ. ಶ್ರೀಮಾನ್ ಆರ್ಮುಗಂ ಅವರು ಬಹಳ ಬೇಗ ಆ ಪ್ರದೇಶಗಳಿಗೆ ಹೋಗಿ ನೋಡಿಕೊಂಡು ಬಂದು ತಮ್ಮ ರಿಪೋರ್ಟು ಕೊಟ್ಟು, ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

The House now stands adjourned to meet again tomorrow at 1 P.M.

The House adjourned at Six of the Clock to meet again at One of the Clock on Tuesday the 5th December 1972.